ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 15 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 269 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4

ಚಾ.ಬೆಟ್ಟದ 130 ಕೋಟಿ ಹುಂಡಿ ಹಣವನ್ನು ಶಿಥಿಲಾವಸ್ಥೆ ದೇವಾಲಯಗಳ ಅಭಿವೃದ್ಧಿಗೆ ಬಳಸಿ

ಜಿಲ್ಲಾಧಿಕಾರಿ ಭೇಟಿ ಮಾಡಿ ಮನವಿ ಸಲ್ಲಿಸುವುದಾಗಿ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಹೇಳಿಕೆ

ಮೈಸೂರು,ಜ.14(ಬಿಎಲ್‌ಯು)– ಚಾಮುಂಡಿ ಬೆಟ್ಟದ 130 ಕೋಟಿ ರೂ. ಹುಂಡಿ ಹಣವನ್ನು ಶಿಥಿಲಾವಸ್ಥೆಯಲ್ಲಿರುವ ಮೈಸೂರಿನ ದೇವಸ್ಥಾನಗಳ ಅಭಿವೃದ್ಧಿಗೆ ವಿನಿಯೋಗಿಸುವಂತೆ ಬಿಜೆಪಿ ನಿಯೋಗ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ಮೈಸೂರಿನ ಎಂ.ಜಿ.ರಸ್ತೆಯ ಕೋದಂಡರಾಮ ದೇವಸ್ಥಾನದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರಿನಲ್ಲಿ 400 ವರ್ಷ ಹಿಂದಿನ ಹಾಗೂ ರಾಜರ ಕಾಲದ ಬಹಳಷ್ಟು ಐತಿಹಾಸಿಕ ದೇವಸ್ಥಾನಗಳಿವೆ. ಅವುಗಳಲ್ಲಿ ಕೆಲವು ದೇವಸ್ಥಾನಗಳು ದುಸ್ಥಿತಿಯಲ್ಲಿವೆ ಎಂದರು.

ಆದಾಯ ಬರುವ ದೇವಾಲಯಗಳ ಹಣವನ್ನು ಶಿಥಿಲಾವಸ್ಥೆಯ ದೇವಸ್ಥಾನಗಳ ಅಭಿವೃದ್ಧಿಗೆ ಬಳಸಲು ಕಾನೂನಿನಲ್ಲಿ ಅವಕಾಶವಿದೆ. ಈ ಹಿನ್ನೆಲೆಯಲ್ಲಿ ಆದಾಯ ಬರುವ ದೇವಾಲಯಗಳನ್ನು ಎ, ಬಿ, ಸಿ ಎಂದು ವರ್ಗೀಕರಿಸಲಾಗಿದೆ. 25 ಲಕ್ಷ ಮೇಲ್ಪಟ್ಟು ಆದಾಯ ಬರುವ ದೇವಾಲಯಗಳನ್ನು ಎ ವರ್ಗವೆಂದು, 5ರಿಂದ 25 ಲಕ್ಷ ರೂ. ಆದಾಯದೊಳಗಿನ ದೇವಾಲಯವನ್ನು ಬಿ ವರ್ಗವೆಂದು ಹಾಗೂ 5 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ದೇವಾಲಯಗಳನ್ನು ಸಿ ವರ್ಗವೆಂದು ವರ್ಗೀಕರಿಸಲಾಗಿದೆ ಎಂದು ಪ್ರತಾಪ್ ಸಿಂಹ ವಿವರಿಸಿದರು.

> 25 ಲಕ್ಷ ಮೇಲ್ಪಟ್ಟು ಆದಾಯವಿರುವ ದೇವಾಲಯಗಳ ಹಣವನ್ನು ಶಿಥಿಲಾವಸ್ಥೆಯಲ್ಲಿರುವ 5 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ದೇವಾಲಯಗಳ ಅಭಿವೃದ್ಧಿಗೆ ಬಳಸಲು ಕಾನೂನಿನಲ್ಲೇ ಅವಕಾಶವಿದೆ. –ಪ್ರತಾಪ್ ಸಿಂಹ



ಚಾಮುಂಡಿಬೆಟ್ಟದ 130 ಕೋಟಿ ರೂ. ಹುಂಡಿ ಹಣವನ್ನು 5 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಸಿ ವರ್ಗದ ಶಿಥಿಲಾವಸ್ಥೆಯ ದೇವಾಲಯಗಳ ಅಭಿವೃದ್ಧಿಗೆ ಬಳಸುವಂತೆ ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ಇತರರೊಡನೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸುತ್ತೇವೆ. ಕೆಲವು ದೇವಸ್ಥಾನಗಳು ಶಿಥಿಲಾವಸ್ಥೆಯ ಕಾರಣ ಮುಚ್ಚಲಾಗಿದೆ. ಕೆಲವು ದೇವಸ್ಥಾನ ತೆರೆದಿದ್ದರೂ ಪೂಜೆ ಪುನಸ್ಕಾರ ನಡೆಯುತ್ತಿಲ್ಲ. ಇಂತಹ ದೇವಸ್ಥಾನಗಳನ್ನು ಪುನರುಜ್ಜೀವನಗೊಳಿಸುವಂತೆ ಮನವಿ ಮಾಡಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು.



ಅಗಸ್ತ್ಯ ಸಿದ್ಧ ವೈದ್ಯ ಪದ್ಧತಿ ಗ್ರಂಥ ಲೋಕಾರ್ಪಣೆ



ಮೈಸೂರಿನ ಗೋಪಾಲ ಸ್ವಾಮಿ ಶಿಶುವಿಹಾರದ ಸಭಾಂಗಣದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಅಗಸ್ತ್ಯ ಸಿದ್ಧ ವೈದ್ಯ ಪದ್ಧತಿ ಗ್ರಂಥ ಲೋಕಾರ್ಪಣೆ ಮಾಡಿದರು. ಕೃತಿ ಕರ್ತೃ ನರಸಿಂಹಸ್ವಾಮಿ, ಹಿರಿಯ ನ್ಯಾಯವಾದಿ ಓ.ಶ್ಯಾಂ ಭಟ್ ಇತರರಿದ್ದಾರೆ.

ಮೈಸೂರು, ಜ.14(ಬಿಎಲ್‌ಯು)– ಪಿ.ಎಸ್. ನರಸಿಂಹಸ್ವಾಮಿ ಅವರು ಬರೆದಿರುವ ಅಗಸ್ತ್ಯ ಸಿದ್ಧ ವೈದ್ಯ ಪದ್ಧತಿ ಗ್ರಂಥವನ್ನು ಕರ್ನಾಟಕದ ಎಲ್ಲಾ ಗ್ರಂಥಾಲಯಗಳಲ್ಲಿ ದೊರಕುವಂತೆ ಮಾಡಲು ಪ್ರಯತ್ನಿಸುವುದಾಗಿ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಭರವಸೆ ನೀಡಿದರು.

ಮೈಸೂರಿನ ಗೋಪಾಲಸ್ವಾಮಿ ಶಿಶುವಿಹಾರದ ಸಭಾಂಗಣದಲ್ಲಿ ಇಂದು ಅಗಸ್ತ್ಯ ಸಿದ್ಧ ಸಾಹಿತ್ಯ ಸಂಶೋಧನಾ ಕೇಂದ್ರ ಆಯೋಜಿಸಿದ್ದ ಅಗಸ್ತ್ಯ ಸಿದ್ಧ ವೈದ್ಯ ಪದ್ಧತಿ ಗ್ರಂಥ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಸ್ವಾಸ್ಥ್ಯ ಆರೋಗ್ಯ ಜೀವನ ನಡೆಸಲು ಈ ಪುಸ್ತಕ ಮಾರ್ಗದರ್ಶನ ನೀಡಲಿದೆ ಎಂದರು.

ಈ ಪುಸ್ತಕವನ್ನು ಕರ್ನಾಟಕದ ಎಲ್ಲಾ ಗ್ರಂಥಾಲಯಗಳಲ್ಲಿ ದೊರಕುವಂತೆ ಮಾಡುವ ನಿಟ್ಟಿನಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸುವುದಾಗಿ ಅವರು ತಿಳಿಸಿದರು. ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಿಗೆ ಈ ಪುಸ್ತಕ ಬಹಳಷ್ಟು ಮಾಹಿತಿ ನೀಡಲಿದೆ. ಈ ಹಿನ್ನೆಲೆ ರಾಜ್ಯದ ಎಲ್ಲಾ ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳಿಗೂ ದೊರಕುವಂತೆ ಮಾಡುವುದಾಗಿ ಆಶ್ವಾಸನೆ ನೀಡಿದರು.

ಕೃತಿ ಕರ್ತೃ ಪಿ.ಎಸ್.ನರಸಿಂಹಸ್ವಾಮಿ, ಹಿರಿಯ ನ್ಯಾಯವಾದಿ ಓ.ಶ್ಯಾಂ ಭಟ್, ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಸೈನ್ಸಸ್ ಪ್ರಾಧ್ಯಾಪಕ ಡಾ.ಅರಳ್ ಅಮುದನ್, ಚೆನ್ನೈನ ಜಿಸಿಎಸ್ ಎಂಆರ್ ಅಧ್ಯಕ್ಷ ಡಾ.ಸೆಲ್ವ ಷಣ್ಮುಗಂ, ಹಿರಿಯ ಆಯುರ್ವೇದ ತಜ್ಞ ಡಾ.ಎನ್.ಎಸ್.ರಾಮಚಂದ್ರ, ಮೈಸೂರಿನ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ.ರಾಧಾಕೃಷ್ಣರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಕ್ಷಮೆ ಕೇಳದಿದ್ದರೆ ಅನಂತಕುಮಾರ್ ಹೆಗಡೆ ಮನೆಗೆ ಮುತ್ತಿಗೆ

ಮೈಸೂರು, ಜ.14(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಗೌರವವಿಲ್ಲದೆ ಮಾತನಾಡಿರುವ ಸಂಸದ ಅನಂತಕುಮಾರ್ ಹೆಗಡೆ ಕೂಡಲೇ ಕ್ಷಮೆ ಕೇಳದಿದ್ದರೆ ಅವರ ಮನೆಗೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಎಚ್ಚರಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಅನಂತಕುಮಾರ್ ಹೆಗಡೆ ಸಿದ್ದರಾಮಯ್ಯ ಬಳಿ ಕೂಡಲೆ ಕ್ಷಮೆ ಕೇಳದಿದ್ದರೆ ರಾಜ್ಯಾದ್ಯಂತ ಹೋರಾಟದ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.



ಬಿ.ಸುಬ್ರಹ್ಮಣ್ಯ

ಅನಂತ್‌ಕುಮಾರ್ ಹೆಗಡೆ ಅವರಿಗೆ ಅವರದೇ ಆದ ಭಾಷೆಯಲ್ಲಿ ಉತ್ತರ ಕೊಡಲು ನಮಗೂ ಬರುತ್ತದೆ. ಆದರೆ ನಮ್ಮ ಹಿರಿಯರು ನಮಗೆ ಸಂಸ್ಕಾರ ಕಲಿಸಿದ್ದಾರೆ. ಆದ ಕಾರಣ ಅವರಂತೆ ಹಗುರವಾಗಿ ಮಾತುಗಳನ್ನಾಡುವುದಿಲ್ಲ. ಅನಂತಕುಮಾರ್ ಹೆಗಡೆ ಅವರ ಮಾತು ಇದೇ ಮೊದಲು ಹಾಗೂ ಇದೇ ಕೊನೆಯಾಗಬೇಕು. ಮತ್ತೆ ಈ ರೀತಿ ಮಾತನಾಡುವ ಮನಸು ಮಾಡಬಾರದು ಎಂದು ಹೇಳಿದ್ದಾರೆ. ಪ್ರಧಾನಿ ಮೋದಿ ಆಡಳಿತಾತ್ಮಕ ವಿಚಾರದ ಬಗ್ಗೆ ಸಿದ್ದರಾಮಯ್ಯ ಟೀಕಿಸಿದ್ದಾರೆ. ಆದರೆ ಎಂದೂ ವೈಯಕ್ತಿಕವಾಗಿ ದೇಶದ ಪ್ರಧಾನಿಗೆ ಅಗೌರವ ತರುವ ಹಾಗೆ ಮಾತನಾಡಿಲ್ಲ. ಆದರೆ ಅನಂತಕುಮಾರ್ ಹೆಗಡೆ ನಾಲಿಗೆ ಹರಿಬಿಟ್ಟಿದ್ದಾರೆ. ಕೋಮು ಪ್ರಚೋದನೆಗೆ ಪ್ರೇರಣೆ ನೀಡುವಂತೆ ಮಾತನಾಡುವ ಅನಂತಕುಮಾರ್ ಹೆಗಡೆಗೆ ಜನರೆ ತಕ್ಕ ಬುದ್ಧಿ ಕಲಿಸಬೇಕು ಎಂದು ಸುಬ್ರಹ್ಮಣ್ಯ ಸಲಹೆ ನೀಡಿದ್ದಾರೆ.

ಸತೀಶ್ ಜಾರಕಿಹೊಳಿಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ಮಾತನಾಡಿದರು.

ಮೈಸೂರು, ಜ.14(ಎಂಟಿವೈ)– ರಾಜ್ಯದಲ್ಲಿ ಲೋಕೋಪಯೋಗಿ ಸಚಿವರಾಗಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಸತೀಶ್ ಜಾರಕಿಹೊಳಿ ಅವರನ್ನು ಉಪಮುಖ್ಯಮಂತ್ರಿ ಮಾಡುವಂತೆ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕೋಪಯೋಗಿ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡುವ ಮೂಲಕ ಇಲಾಖೆಯನ್ನು ಗಟ್ಟಿಗೊಳಿಸುತ್ತಿರುವ ಸತೀಶ್ ಜಾರಕಿಹೊಳಿ ಅವರಿಗೆ ಮುಂಬರುವ ಲೋಕಸಭಾ ಚುನಾವಣೆಗೂ ಮುನ್ನ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು. ಇಲ್ಲದಿದ್ದರೆ ಚುನಾವಣೆ ವೇಳೆ ತಕ್ಕ ಪಾಠ ಕಲಿಸಲಾಗುವುದು ಎಂದು ಎಚ್ಚರಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ನಿಟ್ಟಿನಲ್ಲಿ ನಾಯಕ ಸಮುದಾಯ ಪಕ್ಷಕ್ಕೆ ಹೆಚ್ಚಿನ ಮತ ನೀಡಿರುವುದೂ ಕಾರಣವಾಗಿದೆ. ಈಗ ವಿಧಾನ ಸಭೆಯಲ್ಲಿ ನಾಯಕ ಸಮುದಾಯದ 17 ಮಂದಿಯಲ್ಲಿ 15 ಶಾಸಕರು ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿರುವುದು ಗಮನಾರ್ಹ ವಿಚಾರವಾಗಿದೆ. ಹೀಗಾಗಿ ಇವರ ಆಯ್ಕೆಯಲ್ಲಿ ಸತೀಶ್ ಜಾರಕಿಹೊಳಿ ಅವರ ಕೊಡುಗೆ ಅಪಾರ. ಆದ್ದರಿಂದ ಉಪಮುಖ್ಯಮಂತ್ರಿ ಹುದ್ದೆ ನೀಡುವುದರಿಂದ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಒಳಿತಾಗುವ ಎಲ್ಲಾ ಲಕ್ಷಣಗಳು ಇವೆ ಎಂದರು.

ಕೆಲವು ದಿನ ಹಿಂದೆ ಕಾಂಗ್ರೆಸ್ ಕಾರ್ಯಕರ್ತರೆಂದು ಹೇಳಿಕೊಂಡ ಕೆಲವರು ಸತೀಶ್ ಜಾರಕಿಹೊಳಿ ಹಾಗೂ ಕೆ.ಎನ್. ರಾಜಣ್ಣನವರು ತಮ್ಮ ಹಕ್ಕನ್ನು ಕೇಳಿದ ಕಾರಣಕ್ಕಾಗಿಯೇ ಪಕ್ಷವಿರೋಧಿ ಚಟುವಟಿಕೆ ನಡೆಸುತ್ತಿರುವುದಾಗಿ ಆರೋಪಿಸಿ ಅವರನ್ನು ಸಚಿವ ಸ್ಥಾನದಿಂದ ಕೆಳಗಿಳಿಸಬೇಕೆಂದು ರಾಷ್ಟ್ರ ಕಾಂಗ್ರೆಸ್ ನಾಯಕರಿಗೆ ದೂರು ನೀಡಿರುವುದು ಖಂಡನೀಯವಾಗಿದೆ. ಈ ಇಬ್ಬರೂ ಸಮುದಾಯದ ಪ್ರಶ್ನಾತೀತ ನಾಯಕರಾಗಿದ್ದು, ಸಂಘಟನೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಇವರು ಒಂದು ಪಕ್ಷವನ್ನು ಅಧಿಕಾರಕ್ಕೆ ತರುವ ಅಥವಾ ಅಧಿಕಾರದಿಂದ ದೂರವಿಡುವ ಸಾಮರ್ಥ್ಯ ಹೊಂದಿದ್ದಾರೆ. ಆದ್ದರಿಂದ ಇವರ ವಿರುದ್ಧ ಮಾತನಾಡುವಾಗ ಎಚ್ಚರ ಇರಬೇಕು. ಹಗುರವಾಗಿ ಮಾತನಾಡುವುದನ್ನು ಮುಂದುವರಿಸಿದಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದರು.

ಗೋಷ್ಠಿಯಲ್ಲಿ ಮುಖಂಡರಾದ ಮಂಜುನಾಥ್, ಶಿವನಂಜಯ್ಯ ರಮ್ಮನಹಳ್ಳಿ, ವಾಲ್ಮೀಕಿ ನಿಂಗರಾಜು, ಮಯೂರ ಕಲ್ಲುಣಿಕೆ, ರಾಮಚಂದ್ರ ಬನ್ನಿಕುಪ್ಪೆ ಕಾಂಕ್ರೀಟ್ ರಾಜು ಇದ್ದರು.

ಬಿಜೆಪಿ ಶಾಸಕ ಬಸವರಾಜ ಮತ್ತಿಮಡು ಕಾರು ಪಲ್ಟಿ

ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರು

ಕಲಬುರಗಿ: ಭಾನುವಾರ ಇಲ್ಲಿ ನಡೆದ ಅಪಘಾತದಲ್ಲಿ ಬಿಜೆಪಿ ಶಾಸಕ ಬಸವರಾಜ್ ಮತ್ತಿಮಡು ಅವರು ಸಂಚರಿಸುತ್ತಿದ್ದ ಕಾರು ಪಲ್ಟಿಯಾಗಿದ್ದು, ಅವರು ಸ್ವಲ್ಪದರಲ್ಲೇ ಅಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಕಲಬುರಗಿ ಗ್ರಾಮಾಂತರ ಶಾಸಕ ಮತ್ತಿಮಡು ಅವರ ಕಾರು ಪಾಳಾ ಗ್ರಾಮದ ಬಳಿ ಅಪಘಾತಕ್ಕೀಡಾಗಿದೆ. ಶಾಸಕರು ಇತರ ಕೆಲವು ಮುಖಂಡರೊಂದಿಗೆ ಶಹಾಬಾದ್ ಕಡೆಗೆ ಹೋಗುತ್ತಿದ್ದಾಗ ಕಾರು ಪಲ್ಟಿಯಾಗಿದೆ. ಅದೃಷ್ಟವಶಾತ್ ಶಾಸಕ ಹಾಗೂ ಇತರರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮತ್ತಿಮಡು ಅವರನ್ನು ಕೂಡಲೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಸ್ಥಿತಿ ಸ್ಥಿರವಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು ಮತ್ತು ನಾಳೆ...



ಇಂದಿನ ಪಂಚಾಂಗ

15.1.2024 ಸೋಮವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024 ರಿಂದ 23.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ವ್ಯವಸ್ಥಾಪಕರು:** ಸಂಕ್ರಾಂತಿ ಪ್ರಯುಕ್ತ 111ನೇ ವರ್ಷದ ಸಾಮೂಹಿಕ ಗೋಪೂಜೆ, ಗೋವುಗಳಿಗೆ ಆಹಾರ ನೀಡುವ ಕಾರ್ಯಕ್ರಮ, ಸ್ಥಳ: ನಂಜರಾಜ ಬಹದ್ದೂರ್ ಛತ್ರದ ಬಳಿ, ವಿನೋಬಾ ರಸ್ತೆ, ಬೆಳಗ್ಗೆ 11 ಗಂಟೆಗೆ.

■ **ಹೆಬ್ಬಾರ್ ಶ್ರೀವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀವೈಷ್ಣವ ಉಪಸಭಾ:** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ.ಶೆಲ್ವನಾರಾಯಣರಿಂದ ತಿರುಪ್ಪಾವ್ವ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ, ರಾಮಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15ರಿಂದ.

■ **ರಂಗಾಯಣ ಮೈಸೂರು, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ:** ಮೈಸೂರು ಸಂಕ್ರಾಂತಿ ರಂಗಹಬ್ಬ, 'ಕಣಿವೆಯ ಹಾಡು' ನಾಟಕ, ರಚನೆ: ಅತೋಲ್ ಫ್ಯೂಗಾರ್ಡ್, ಕನ್ನಡಾನುವಾದ: ಡಾ.ಮೀರಾ ಮೂರ್ತಿ, ಪ್ರಸ್ತುತಿ: ನಟನ, ಮೈಸೂರು ಸ್ಥಳ: ಭೂಮಿಗೀತಾ, ರಂಗಾಯಣ, ಸಂಜೆ 6.30ಕ್ಕೆ.

■ **ಸೌಹಾರ್ದ ಕರ್ನಾಟಕ, ಇನ್ಸಾಫ್:** ಸೌಹಾರ್ದ ಸಂಕ್ರಾಂತಿ ಸಂಭ್ರಮ, ಸ್ಥಳ: ಉದಯಗಿರಿ ಸರ್ಕಲ್, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



6.10 ಚಿಂತನ: ರಾಮಚಂದ್ರ ದೊಂಗಡೆ, 6.15 ಮಕರ ಸಂಕ್ರಾಂತಿ ವಿಶೇಷ ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ– ಮಕರ ಸಂಕ್ರಾಂತಿ ವಿಶೇಷ ಗೀತಾರಾಧನ, 6.50 ರೈತರಿಗೆ ಸಲಹೆ, 9.00 ನೆನಪಿನಂಗಳ– ಸಾಹಿತಿ ಡಾ.ಪ್ರಭುಶಂಕರ್ ಅವರೊಂದಿಗೆ ಡಾ.ಜಿ.ಹೆಚ್. ನಾಯಕ್ ಅವರು ನಡೆಸಿದ ಸಂದರ್ಶನ, 10.00ಡಾ. ಆರ್.ಕೆ.ಶ್ರೀಕಂಠನ್–ಹಾಡುಗಾರಿಕೆ–11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. 12.30 ದೇವರನಾಮ: ಬಾಂಬೆ ಸಹೋದರಿಯರು, ಶಂಕರ್ ಶ್ಯಾನುಭೋಗ್, 12.45 ನಮ್ಮ ಆರೋಗ್ಯ–ದಂತ ಆರೋಗ್ಯ ರಕ್ಷಣೆ "ನೂತನ ಚಿಕಿತ್ಸಾ ವಿಧಾನಗಳು" ಕುರಿತು ಡಾ.ರೋಹಿಣಿ ವಿ. ಅವರೊಂದಿಗೆ ಮಾತುಕತೆಯಲ್ಲಿ ಭಾಗವಹಿಸುವವರು ಬೇದ್ರೆ ಮಂಜುನಾಥ್, 1.25 ಭಾವಗೀತೆಗಳು–ಎ.ಎನ್.ಶೀಲಾ, 3.00 ಡಾ.ಎಂ.ಎಲ್.ವಸಂತಕುಮಾರಿ–ಹಾಡು ಗಾರಿಕೆ. 4.00 ಮಹಿಳಾರಂಗ: ಸಮುದ್ಯತಾ ಶ್ರೋತೃಗಳ ಸಂಘದ ಸದಸ್ಯೆಯರಿಂದ ಸಂಕ್ರಾಂತಿ ಕುರಿತ ಕಾರ್ಯಕ್ರಮ, ಪ್ರಸ್ತುತಿ: ಎಂ.ಎಸ್.ಭಾರತಿ, 4.45 ಹಿಂದಿ ಪಾಠ– ಅನುರಾಧಾ, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು–ಹೊನ್ನು"–ಸೌತೆ ಜಾತಿಯ ಬೆಳೆಗಳ ಕೀಟ ರೋಗ ನಿರ್ವಹಣೆ ಕುರಿತು ಸಂವಾದ–ಡಾ.ಜಿ.ಕೆ.ಸುದರ್ಶನ್ ಹಾಗೂ ಡಾ.ಜಿ.ಕೆ.ರಾಮೇಗೌಡ. 9.30 ವಿಕಸಿತ ಸಂಕಲ್ಪ ಭಾರತ ಸಂದರ್ಶನ: ಸದಾನಂದ ಗೌಡ, ಮಾಜಿ ಮುಖ್ಯಮಂತ್ರಿಗಳು, ಕೇಂದ್ರದ ಮಾಜಿ ಸಚಿವರು ಹಾಗೂ ಹಾಲಿ ಸಂಸದರು.

ನಾಳಿನ ಪಂಚಾಂಗ

16.1.2024 ಮಂಗಳವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024ರಿಂದ 23.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ, ರಾಷ್ಟ್ರೀಯ ಸೇವಾ ಯೋಜನಾ ಘಟಕ, ಎನ್‌ಸಿಸಿ, ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಯೂತ್ ರೆಡ್ ಕ್ರಾಸ್, ಕ್ರೀಡಾ ವಿಭಾಗ, ಐಕ್ಯೂಸಿಸಿ ಘಟಕ:** ರಾಷ್ಟ್ರೀಯ ಯುವ ದಿನಾಚರಣೆ, ಸ್ವಾಮಿ ವಿವೇಕಾನಂದರ 161ನೇ ಜಯಂತ್ಯುತ್ಸವ, ಪ್ರಧಾನ ಭಾಷಣ: ಚಾರ್ಟೆಡ್ ಅಕೌಂಟೆಂಟ್ ಸಿ.ಎ.ಬಸವರಾಜೇಂದ್ರ, ಅಧ್ಯಕ್ಷತೆ: ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಸ್.ಮರೀಗೌಡ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11 ಗಂಟೆಗೆ.

■ **ಉತ್ತಿಷ್ಠ ಭಾರತ ಪ್ರತಿಷ್ಠಾನ:** ದಿನದರ್ಶಿಕೆ ಹಾಗೂ ಮಣ್ಣು ಉಳಿಸಿ ಜನಜಾಗೃತಿ ಅಭಿಯಾನ, ಉಪಸ್ಥಿತಿ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ದತ್ತ ಕ್ರಿಯಾ ಶಿಕ್ಷಕ ಜಿ.ಮೋಹನ್, ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ವಾಟರ್ ಫೋರಂ ಮೈಸೂರು, ಮೈಸೂರ್ ಸ್ಕೂಲ್ ಆಫ್ ಆರ್ಕಿಟೆಕ್ಚರ್:** ಕುಕ್ಕರಹಳ್ಳಿ ಕೆರೆಗೆ ನೀರು, 'ಪೂರ್ಣಯ್ಯ ನಾಲೆ' ರಾಜಕೀಯ ಪುನಶ್ಚೇತನ, ಇಂದಿನ ಪರಿಸ್ಥಿತಿ ಮತ್ತು ಮುಂದಿನ ಅವಕಾಶದ ಬಗ್ಗೆ ಕಾರ್ಯಾಗಾರ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮೈವಿವಿ, ಸಂಜೆ 4ಕ್ಕೆ

■ **ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಸತ್ಯಸಂಕಲ್ಪ ತೀರ್ಥರು ಹಾಗೂ ಶ್ರೀ ಸತ್ಯ ಸಂತುಷ್ಟ ತೀರ್ಥರ ಮೂಲ ಬೃಂದಾವನ ಸನ್ನಿಧಾನ:** ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ಉದ್ಘಾಟನಾ ಪರ್ವಕಾಲದ ನಿಮಿತ್ತ ಸಮಗ್ರ ರಾಮಾಯಣ ಪ್ರವಚನ ಮಾಲಿಕೆ, ಪಂಡಿತ್ ಶ್ರೀ ಗುರುರಾಜಾಚಾರ್ಯ ಕಮಲಾಪುರ ಅವರಿಂದ ಬಾಲಕಾಂಡ ಕುರಿತು ಪ್ರವಚನ, ಸ್ಥಳ: ಉತ್ತರಾದಿ ಮಠ, ಅಗ್ರಹಾರ, ಸಂಜೆ 6 ಗಂಟೆಗೆ.

■ **ರಂಗಾಯಣ ಮೈಸೂರು, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ:** ಮೈಸೂರು ಸಂಕ್ರಾಂತಿ ರಂಗಹಬ್ಬ, C ಕಾರ್ಡ್ ಕ್ಯಾನ್ಸರ್ ಕಥಾನಕಗಳು; ವಿನ್ಯಾಸ, ರಂಗಪಠ್ಯ, ನಿರ್ದೇಶನ: ಪ್ರೊ.ಎಸ್.ಆರ್.ರಮೇಶ್, ಪ್ರಸ್ತುತಿ: ಪರಿವರ್ತನ ರಂಗಸಮಾಜ, ಮೈಸೂರು, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀವೈಷ್ಣವ ಉಪಸಭಾ:** ತಿರುಪ್ಪಾವೈ ಪ್ರವಚನ, ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ.ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಂಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಮಹಾರಾಜ ಕಾಲೇಜು ಅತಿಥಿ ಉಪನ್ಯಾಸಕ ಡಾ.ರೇವಣ್ಣ ಅವರಿಂದ 'ಭಾರತ ಸಂವಿಧಾನದ ತಾತ್ವಿಕ ನೆಲೆಗಳು' ವಿಷಯ ಕುರಿತು ಉಪನ್ಯಾಸ, ಅಧ್ಯಕ್ಷತೆ: ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ (ಕೆ.ಆರ್.ನಗರ)ದ ನಿಲಯಪಾಲಕ ಕೆ.ಸಿದ್ದರಾಜು, ಸ್ಥಳ: ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಕೆ.ಆರ್.ನಗರ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ (ಮಂಗಳವಾರ)



ಬೆಳಗ್ಗೆ: 6.10 ಚಿಂತನ–ಕೆ.ಎಲ್.ಪದ್ಮಿನಿ ಹೆಗಡೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ–ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ.ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 8.30 ಪರಾಗ: ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.45 ಕರೆಗೊಂದು ಗೀತೆ, 10.00 ಡಾ.ಶ್ರೀಪಾದ ಪಿನಾಕಪಣಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.00 ವನಿತಾ ವಿಹಾರ: ಸ್ವಯಂ ಉದ್ಯೋಗಿ ಶ್ರೀದೇವಿ ರಮೇಶ್ ಅವರೊಂದಿಗೆ ಮಾತುಕತೆ, ನಡೆಸಿ ಕೊಡುತ್ತಾರೆ–ಎಂ.ಎಸ್.ಭಾರತಿ, 12.30 ದೇವರನಾಮ: ಸುಪ್ರಿಯಾ ರಘುನಂದನ್, ವೃಂದಗಾನ, 12.45 ಕಸ ವಿಲೇವಾರಿಯ ಕಾರ್ಮಿಕರು: ಮಾತನಾಡುತ್ತಾರೆ ಡಾ.ಪದ್ಮಶ್ರೀ, 1.20 ಭಾವಗೀತೆಗಳು: ಎ.ಜೆ.ದಿವ್ಯಾ, 3.00 ದ್ವಾರಂ ವೆಂಕಟಸ್ವಾಮಿ ನಾಯ್ಡು: ವಯೋಲಿನ್ ವಾದನ. **ಸಂಜೆ** 4.00 ಕಥಾ ಕಾಲಕ್ಷೇಪ: ಶ್ರೀ ಅಯ್ಯಪ್ಪ ಸ್ವಾಮಿ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ: ಕೃಷಿ ವಿಸ್ತರಣೆಯ ಪ್ರಾಮುಖ್ಯತೆ ಕುರಿರು ಸಂವಾದ, ಭಾಗವಹಿಸುತ್ತಾರೆ ಎನ್.ಟಿ.ನರೇಷ್ ಹಘೂ ಹೆಚ್.ಎಸ್.ನಿರಂಜನ್. **ರಾತ್ರಿ:** 9.30 ಈಮನಿ ಶಂಕರ ಶಾಸ್ತ್ರಿ–ವೀಣಾ ವಾದನ, 10.00 ಗಮಕ ವ್ಯಾಖ್ಯಾನ: ವಾಚನ–ಹೆ.ಯಜ್ಞೇಶ್. ವ್ಯಾಖ್ಯಾನ– ಸರ್ಪಂಗಳ ಈಶ್ವರಭಟ್.


ನಾಡಿನ ಸಮಸ್ತ ಜನತೆಗೆ
ಹಾಗೂ
ನನ್ನ ಎಲ್ಲಾ ಗೌರವಾನ್ವಿತ ಶಿಕ್ಷಕ ಬಂಧುಗಳಿಗೆ
ಮಕರ ಸಂಕ್ರಾಂತಿ
ಹಬ್ಬದ ಶುಭಾಶಯಗಳು
ಶುಭಕೋರುವವರು
ತಮ್ಮ ಸೇವಾಕಾಂಕ್ಷಿ
ಕೆ.ವಿವೇಕಾನಂದ
ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಪಕ್ಷದ ಪ್ರಬಲ ಟಿಕೆಟ್ ಆಕಾಂಕ್ಷಿ,
ಮಾಜಿ ಅಧ್ಯಕ್ಷರು, ಅರಣ್ಯ, ವಸತಿ ಹಾಗೂ ವಿಹಾರಧಾಮಗಳ ಸಂಸ್ಥೆ
ಮತ್ತು ಸಮಾಜ ಸೇವಕರು, ಮೈಸೂರು

ನಕ್ಕರೆ ಅದೇ ಸ್ವರ್ಗ

ಟೀಚರ್ : ಕ್ಲಾಸ್‌ನಲ್ಲಿ ನಾವು ಯಾರ ಜೊತೆಯೂ ಜಗಳವಾಡಬಾರದು ಯಾಕೆ ಗೊತ್ತಾ?

ಗುಂಡ : ಗೊತ್ತು, ಯಾಕಂದ್ರೆ ಎಕ್ಸಾಂ ಟೈಮ್‌ನಲ್ಲಿ ನಮ್ಮ ಪಕ್ಕದಲ್ಲಿ ಯಾರು ಬೀಳ್ತಾರೆ ಎಂದು ಗೊತ್ತಿರುವುದಿಲ್ಲ ಅದಕ್ಕೆ..!

ಮೈಸೂರು ಮಿತ್ರ

ಸೋಮವಾರ, 15 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನಾವು ಸಂತೋಷದಿಂದ ಇರುವುದೇ ನಾವು ನಮ್ಮ ಶತ್ರುಗಳಿಗೆ ಕೊಡುವ ಅತೀ ದೊಡ್ಡ ಶಿಕ್ಷೆ.–ಚಾಣಕ್ಯ ನೀತಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಮಳೆ ಬಂದಾಗ ಮನೆ ಮೇಲೆ ಜ್ಞಾನ, ಅಂಬಲಿ ಕುಡಿವಾಗ ಮೀಸೆ ಮೇಲೆ ಜ್ಞಾನ'

ನಿಮ್ಮ ಪತ್ರಗಳು

ಯುವನಿಧಿ ಎಂಬ ದುರ್ಬಲ ಯೋಜನೆ

ಮಾನ್ಯರೆ,

ಸ್ವಾಮಿ ವಿವೇಕಾನಂದರ ಉದ್ದೇಶವೇ ದೇಶದ ಯುವಕರನ್ನು ಸ್ವಾವಲಂಬಿಗಳನ್ನಾಗಿ ಶಕ್ತಿವಂತರನ್ನಾಗಿ ಮಾಡುವುದಿತ್ತು. ದುರದೃಷ್ಟವಶಾತ್ ಕಾಂಗ್ರೆಸ್ ಅವರ ಫೋಟೋ ಬಳಸಿಕೊಂಡು ಯುವಕರನ್ನು ದುರ್ಬಲರನ್ನಾಗಿ, ನಿರುದ್ಯೋಗಿಗಳನ್ನಾಗಿ, ನಿಶ್ಯಕ್ತರನ್ನಾಗಿ ಮಾಡಲು ಹೊರಟಿದೆ. ಇವರು ಕೊಡುವ ಯುವನಿಧಿ ಹಣಕ್ಕಾಗಿಯೇ ಯುವಕರು ಪದವಿ ಮುಗಿಸಿದ ನಂತರ ಸ್ನಾತಕೋತ್ತರ ಪದವಿಗೆ ಸೇರುವಂತಿಲ್ಲ. ಪದವಿ ಅಥವಾ ಡಿಪ್ಲೊಮಾ ಮುಗಿಸಿ ಕನಿಷ್ಠ ಆರು ತಿಂಗಳು ನಿರುದ್ಯೋಗಿಯಾಗಿಯೇ ಇರಬೇಕು. ಈ ಮಾನದಂಡಗಳನ್ನು ರೂಪಿಸಿದವರಿಗಾದರೂ ಜ್ಞಾನವಿರಬಾರದೇ...!?

ಕೇಂದ್ರದ ಹಲವಾರು ಯೋಜನೆಗಳು ಪರಿಶಿಷ್ಟ ಜಾತಿ/ಪಂಗಡದ ಯುವಕರಿಗೆ ಮತ್ತು ಮಹಿಳೆಯರಿಗೆ ಸ್ವಂತ ಉದ್ಯಮ ಶುರುಮಾಡಿ ಸ್ವಾವಲಂಬಿ ಗಳಾಗಲು ಕನಿಷ್ಠ 10 ಲಕ್ಷದಿಂದ ಶುರುವಾಗುವ ಆರ್ಥಿಕ ಸಹಾಯ ಮತ್ತು ಮುದ್ರಾ ಯೋಜನೆಗಳಿವೆ. ಇಂಥ ಬಲಿಷ್ಠ ಯೋಜನೆಗಳ ಮೂಲಕ ಯುವಕರನ್ನು ಸಬಲೀಕರಣ ಮಾಡುವ ಬದಲು ದುರ್ಬಲೀಕರಣ ಮಾಡುತ್ತಿರುವ ಈ ಕಾಂಗ್ರೆಸ್ ಸರ್ಕಾರವನ್ನು ಸ್ವಾಮಿ ವಿವೇಕಾನಂದರು ಕ್ಷಮಿಸಬಹುದೇ...!?

–ಪರಮಾನಂದ.ಎಂ.ಎಸ್, ರಾಜ್ಯ ಕಾರ್ಯದರ್ಶಿ, ಎಸ್‌ಸಿ ಮೋರ್ಚಾ, ಬಿಜೆಪಿ

ಸ್ವಚ್ಛ ನಗರಿ ಸ್ಥಾನ ಕುಸಿತಕ್ಕೆ ಯಾರು ಹೊಣೆ?

ಮಾನ್ಯರೆ,

ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ 2023ನೇ ಸಾಲಿನ ಸ್ವಚ್ಛ ನಗರ ಸರ್ವೇಕ್ಷಣೆಯಲ್ಲಿ, ಸಾಂಸ್ಕೃತಿಕ ನಗರಿ ಮೈಸೂರು 27ನೇ ಸ್ಥಾನಕ್ಕೆ ಕುಸಿದಿರುವುದಕ್ಕೆ ಮೈಸೂರು ನಗರಪಾಲಿಕೆ ಅಧಿಕಾರಿಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳ ವೈಫಲ್ಯವೇ ಕಾರಣ. ಕೆಲವು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಾರ್ವಜನಿಕರು ಸಹಕಾರ ನೀಡಲಿಲ್ಲ ಎಂದು ಹೇಳಿದ್ದಾರೆ, ಇದಕ್ಕೆ ಸಾರ್ವಜನಿಕರನ್ನು ದೂಷಿಸಿ ಪ್ರಯೋಜನವಿಲ್ಲ. ಕಸವನ್ನು, ಎಲ್ಲೆಂದರಲ್ಲಿ ಎಸೆದು ಹೋಗುತ್ತಾರೆ, ಎನ್ನುವ ಇವರು, ಮೊದಲು ಇಂತವರಿಗೆ ತಿಳುವಳಿಕೆ ನೀಡಬೇಕು, ಅದು ಪ್ರಯೋಜನಕ್ಕೆ ಬಾರದಿದ್ದರೆ, ಹಣದ ರೂಪದಲ್ಲಿ ದಂಡ ವಿಧಿಸುವಂತಾಗಬೇಕು, ಆಗ ಸಾರ್ವಜನಿಕರೇ ಬುದ್ಧಿ ಕಲಿಯುತ್ತಾರೆ. 2015 ಮತ್ತು 2016ರಲ್ಲಿ, ಮೊದಲ ಸ್ಥಾನ ಪಡೆದಿದ್ದ ಮೈಸೂರು, ಕೇವಲ 8 ವರ್ಷಗಳಲ್ಲಿ 27ನೇ ಸ್ಥಾನಕ್ಕೆ ಕುಸಿದಿರುವುದು ಹೇಗಿದೆ ಎಂದರೆ, ಎಸ್‌ಎಸ್‌ಎಲ್‌ಸಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದವನು, ಪಿಯುಸಿಯಲ್ಲಿ ಫೇಲ್ ಆದಂತಾಗಿದೆ. ಬೆಳಗ್ಗೆಯೇ ಎದ್ದು ಚಳಿ, ಮಳೆ, ಗಾಳಿ ಎನ್ನದೇ ನಗರವನ್ನು ಸ್ವಚ್ಛ ಮಾಡುವ ಪೌರಕಾರ್ಮಿಕರನ್ನು ನಗರಪಾಲಿಕೆ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎನಿಸುತ್ತದೆ. ಒಟ್ಟಿನಲ್ಲಿ ನಗರಪಾಲಿಕೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ನಿರಾಸಕ್ತಿಯೇ ಮೈಸೂರು 27ನೇ ಸ್ಥಾನಕ್ಕೆ ಕುಸಿತಕ್ಕೆ ಕಾರಣ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ದೇವಸ್ಥಾನದ ಆವರಣದಲ್ಲಿ ಮರಗಳ ಹನನ ಸರಿಯೇ?

ಮಾನ್ಯರೆ,

ಮೈಸೂರು ಜಿಲ್ಲೆಯ ಸರಗೂರು ತಾಲೂಕು ಮುಳ್ಳೂರು ಗ್ರಾಮದಲ್ಲಿ ಸುಮಾರು 800 ವರ್ಷಗಳ ಹಿಂದಿನ ಪುರಾತನ ಚೋಳರ ಕಾಲದ ದೇವಾಲಯವಿದ್ದು, ಇದರ ಸಂರಕ್ಷಣೆಯ ಹೊಣೆಯನ್ನು ಪ್ರಾಚ್ಯವಸ್ತು ಮತ್ತು ಪುರಾತತ್ವ ಇಲಾಖೆ ನಿರ್ವಹಿಸುತ್ತಿದೆ. ಪಾರಂಪರಿಕ ಪ್ರಾಚೀನ ದೇವಾಲಯದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಮತ್ತು ಅಧಿಕಾರಿಗಳು ದೇವಸ್ಥಾನದ ಸರಹದ್ದಿನ ಒಳಗಡೆ ಇದ್ದ ಅನೇಕ ಮರಗಳನ್ನು ಕಾಮಗಾರಿಯ ಕುಂಟು ನೆಪವೊಡ್ಡಿ ಅರಣ್ಯ ಇಲಾಖೆ, ಭಾರತೀಯ ಸರ್ವೇಕ್ಷಣಾ ಇಲಾಖೆಯ ಅನುಮತಿ ಪಡೆಯದೆ, ಗ್ರಾಮ ಪಂಚಾಯ್ತಿ, ಸಾರ್ವಜನಿಕರಿಗೂ ಮಾಹಿತಿ ನೀಡದೇ ಏಕಾ–ಏಕಿ ಕಡಿದು ಆತುರಾತುರವಾಗಿ ಸಾಗಣೆ ಮಾಡಿದೆ. ಜತೆಗೆ, ದೇವಸ್ಥಾನ ವ್ಯಾಪ್ತಿಯ ಒಳಗಡೆ ಜೆಸಿಬಿ ಯಂತ್ರದ ಮೂಲಕ ಸಾಲು–ಸಾಲು ಗುಂಡಿ ತೆಗೆದು ಇಲ್ಲಿನ ಪಾರಂಪರಿಕತೆಗೆ ಧಕ್ಕೆ ತಂದಿರುವುದು ಹಾಗೂ ಗುಂಡಿ ತೆಗೆದ ವೇಳೆ ನಿಧಿ, ನಿಕ್ಷೇಪಗಳು ದೊರೆತಿರಬಹುದು ಎಂಬ ಹಲವು ಅನುಮಾನಗಳು ಗ್ರಾಮಸ್ಥರಲ್ಲಿ ಕಾಡತೊಡಗಿವೆ.

ಈ ದೇವಾಲಯದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ವಿರುದ್ಧ ಈ ಹಿಂದೆಯೂ ಸಹ ಅನೇಕ ದೂರುಗಳು ಕೇಳಿ ಬಂದಿದ್ದರೂ, ಇಲಾಖೆಯು ಈವರೆಗೂ ಯಾವುದೇ ತನಿಖೆ ನಡೆಸದಿರುವುದು ಸಹ ಸಾರ್ವಜನಿಕರು ಮೇಲಾಧಿಕಾರಿಗಳಲ್ಲಿ ವಿಶ್ವಾಸ ಕಳೆದುಕೊಳ್ಳುವಂತೆ ಮಾಡಿದೆ. ಇನ್ನಾದರೂ ಈ ಪ್ರಕರಣದ ಬಗ್ಗೆ ಕೂಲಂಕಷ ತನಿಖೆ ನಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ಇಲ್ಲಿನ ಪಾರಂಪರಿಕತೆಯನ್ನು ಮುಂದಿನ ಪೀಳಿಗೆಗೂ ಪರಿಚಯಿಸಲಿ.

–ಶ್ರೀಕಂಠ, ಮುಳ್ಳೂರು ಗ್ರಾಮಸ್ಥ

ಇದರಿಂದ ಕೋವಿಡ್ ಸೋಂಕು ಹರಡುವುದಿಲ್ಲವೇ?

ಮಾನ್ಯರೆ,

ಕರ್ನಾಟಕ ರಾಜ್ಯ ಸರ್ಕಾರದ ಶಕ್ತಿ ಯೋಜನೆಯಿಂದ ರಾಜ್ಯದ ಮಹಿಳೆಯರಿಗೆ ಅನೇಕ ರೀತಿಯಲ್ಲಿ ಉಪಯುಕ್ತವಾಗಿದೆ. ಆದರೆ ಪ್ರಸ್ತುತ ಕೋವಿಡ್ ಸೋಂಕು ವ್ಯಾಪಕವಾಗಿ ಹರಡುತ್ತಿದೆ. ಪ್ರಕರಣಗಳ ಸಂಖ್ಯೆಯೂ ರಾಜ್ಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಜಾತ್ರೆಯ ರೀತಿ ಮಹಿಳೆಯರು ರಾಜ್ಯ ಸರ್ಕಾರದ ಬಸ್‌ಗಳಲ್ಲಿ ಮಾಸ್ಕ್ ಧರಿಸದೇ ಸಾಮಾಜಿಕ ಅಂತರವಿಲ್ಲದೇ ಪ್ರಯಾಣಿಸುತ್ತಿರುವುದರಿಂದ ಕೋವಿಡ್ ಹರಡುವ ಸಾಧ್ಯತೆ ಇದೆ. ಶಕ್ತಿ ಯೋಜನೆ ತಮಿಳುನಾಡಿನ ರೀತಿ ಕಿ.ಮೀ. ವ್ಯಾಪ್ತಿಯಲ್ಲಿ ಪ್ರಯಾಣಕ್ಕೆ ಅನುಮತಿ ನೀಡಿ, ಜನರ ಹಿತ ಕಾಪಾಡಿ.

–ನೊಂದ ಪ್ರಯಾಣಿಕರು, ಮೈಸೂರು.

ರಾಜ್ಯದ ಸ್ತಬ್ಧಚಿತ್ರಕ್ಕೆ ಅವಕಾಶ ನೀಡಲಿ

ಮಾನ್ಯರೆ,

ಜನವರಿ 26ರಂದು ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವದ ಮುಖ್ಯ ಪಥಸಂಚಲನದಲ್ಲಿ ಕರ್ನಾಟಕ ರಾಜ್ಯದ ಸ್ತಬ್ಧಚಿತ್ರವನ್ನು ಕೇಂದ್ರ ಸರ್ಕಾರ ನಿರಾಕರಿಸಿರುವುದು ರಾಜಕೀಯ ಪ್ರೇರಿತ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಕಾರಣ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಅಧಿಕಾರದ ಗದ್ದುಗೆಯನ್ನು ಏರಿರುವುದರಿಂದ ಹಾಗೂ ಅನೇಕ ಜನಪರ ಯೋಜನೆಗಳನ್ನು ಜಾರಿ ಮಾಡಿರುವುದರಿಂದ ಇದನ್ನು ಸಹಿಸದ, ಕೇಂದ್ರದಲ್ಲಿರುವ ಬಿಜೆಪಿ ಪಕ್ಷವು ಉದ್ದೇಶಪೂರ್ವಕವಾಗಿ ನಮ್ಮ ರಾಜ್ಯದ ಸ್ತಬ್ಧಚಿತ್ರವನ್ನು ನಿರಾಕರಣೆ ಮಾಡಲಾಗಿದೆ ಎನ್ನುವುದು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆರೋಪವಾಗಿದೆ.ಕಳೆದ ಬಾರಿಯಲ್ಲೆಲ್ಲ ಉತ್ತಮ ಸಂದೇಶವನ್ನು ಸಾರುವ ಸ್ತಬ್ಧಚಿತ್ರವನ್ನು ನೀಡಿ ದೇಶದ ಉದ್ದಕ್ಕೂ ನಮ್ಮ ರಾಜ್ಯದ ವೈವಿಧ್ಯತೆಯನ್ನು ಬಿತ್ತರಿಸಿ ಬಹುಮಾನವನ್ನು ಸಹ ಪಡೆದುಕೊಂಡಿರುವ ಹೆಮ್ಮೆ ನಮ್ಮ ಕರ್ನಾಟಕಕ್ಕೆ ಇದೆ. ಈಗಿರುವಾಗ ಯಾವುದೇ ರಾಜಕೀಯ ದ್ವೇಷ ಮಾಡದೇ ಕೇಂದ್ರ ಸರ್ಕಾರ ಈ ಬಾರಿ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ನಮ್ಮ ರಾಜ್ಯವನ್ನು ಪ್ರತಿನಿಧಿಸುವ ಸ್ತಬ್ಧಚಿತ್ರಕ್ಕೆ ಅವಕಾಶ ನೀಡುವಂತಾಗಲಿ.


–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ವಿಚಾರವಿಲ್ಲದ ಆಚಾರ ಸಂಚಕಾರ!



> "ಇಂದಿಗೂ ವಿದ್ಯಾವಂತ ಸಮುದಾಯದವರೂ ಸೇರಿದಂತೆ ಎಷ್ಟೋಜನ ಕಷ್ಟ ಬಂದಾಗ ಪರಿಹಾರ ಹುಡುಕದೆ, ಅನಾರೋಗ್ಯ ಉಂಟಾದಾಗ ವೈದ್ಯರ ಬಳಿ ಹೋಗದೆ ಜ್ಯೋತಿಷಿಯ/ಪೂಜಾರಿಯ ಬಳಿ ಮೊದಲು ಹೋಗಿ ಪರಿಹಾರ ಪಡೆಯುವ ಪರಿಪಾಠ ಹೊಂದಿದ್ದಾರೆ. ಇವರಿಗೆ ದೈಹಿಕ ಖಾಯಿಲೆಗಿಂತ ಮಾನಸಿಕ ಖಾಯಿಲೆ ಹೆಚ್ಚಾಗಿರುತ್ತದೆ. ದೈಹಿಕ ಖಾಯಿಲೆಯನ್ನು ವೈದ್ಯರು ಗುಣಪಡಿಸಬಹುದು, ಆದರೆ ಮಾನಸಿಕ ಖಾಯಿಲೆಗೆ ಜ್ಯೋತಿಷಿಗಳೇ ಬೇಕಾಗುತ್ತಾರೆ, ಅವರು ಆಚಾರದ ಹೆಸರಿನಲ್ಲಿ ಸೂಚಿಸುವ ವಿಚಾರವಿಲ್ಲದ ಪರಿಹಾರಗಳೇ ಅವರ ಮಾನಸಿಕ ಖಾಯಿಲೆಗೆ ದೊಡ್ಡ ಪರಿಹಾರವಾಗುತ್ತದೆ. ಇರಲಿ ಮಾನಸಿಕ ಖಾಯಿಲೆಗೆ ಇದನ್ನು ಮದ್ದು ಎಂದುಕೊಳ್ಳೋಣ, ಆದರೆ ಅದರಿಂದ ಅನೇಕರು ಅಪಾಯವನ್ನು ಎದುರಿಸಿದ್ದಾರೆ. ಅವರ ಪರಿಹಾರವು ಅನೇಕರ ಜೀವವನ್ನು ತೆಗೆದಿವೆ. ಈ ಪ್ರಕರಣಗಳು ಹೆಚ್ಚಾಗಿ ಬೆಳಕಿಗೆ ಬರುವುದಿಲ್ಲ.

ಹತ್ತಾರು ವರ್ಷಗಳ ಕಾಲ ವೈದ್ಯಕೀಯ ಶಾಸ್ತ್ರ ವಿದ್ಯಾಭ್ಯಾಸ ಮಾಡಿ, ಅನೇಕ ವಿಚಾರ ಸಂಕಿರಣಗಳಿಂದ ತಮ್ಮ ಕ್ಷೇತ್ರದಲ್ಲಿ ಜ್ಞಾನ ವೃದ್ಧಿಮಾಡಿಕೊಂಡ, ದೇವರ ಪ್ರತಿರೂಪ ಎಂದು ಕರೆಯಲ್ಪಡುವ ವೈದ್ಯರು ವಿದ್ಯಾವಂತ ರೋಗಿಗೆ ಚಿಕಿತ್ಸೆಯ ವಿಧಾನ ಶಿಫಾರಸ್ಸು ಮಾಡಿದಾಗ, ರೋಗಿಗೆ ಅವರ ಮೇಲೆ ನಂಬಿಕೆ ಇಲ್ಲದೆ, ಮತ್ತೊಬ್ಬ ವೈದ್ಯರ ಬಳಿ ಎರಡನೇ ಅಭಿಪ್ರಾಯ ಪಡೆಯುವ ಕಾಲವಿದು. ಆದರೆ ಜ್ಯೋತಿಷ್ಯ ಶಾಸ್ತ್ರದಲ್ಲಿ ಪಾರಂಗತರಾಗಿದ್ದಾರೋ ಇಲ್ಲವೋ, ಅವರು ಹೇಳುವ ಪರಿಹಾರ ವಿಧಾನಗಳನ್ನು ಎರಡನೇ ಅಭಿಪ್ರಾಯ ಪಡೆಯದೆ, ಎಷ್ಟು ದುಡ್ಡು ಖರ್ಚಾದರೂ ಸರಿ ಮಾಡಿಸಿಬಿಡುವ ಕಾಲಘಟ್ಟದಲ್ಲಿ ನಾವಿದ್ದೇವೆ. ಇಂದಿಗೂ ವಿಜ್ಞಾನ ತಂತ್ರಜ್ಞಾನ ಎಷ್ಟೇ ಮುಂದುವರಿದಿದ್ದರೂ, ಜನರು ಎಷ್ಟೇ ವಿದ್ಯಾವಂತರಾಗಿದ್ದರೂ ಮೂಢನಂಬಿಕೆಯಿಂದ ವಿಚಾರವಿಲ್ಲದ ಆಚಾರಗಳಿಂದ ಹೊರ ಬರಲಾಗದೇ ಇರುವುದು ವಿಪರ್ಯಾಸ.

ದೇವರ ಅಸ್ತಿತ್ವದ ಮೇಲೆ ನಂಬಿಕೆ ಇರುವ ಆಸ್ತಿಕರಿಗೆ ತಾವು ದೇವರಿಗೆ ಸಲ್ಲಿಸುವ ಪೂಜೆಯಿಂದ ದೇವರು ತಮ್ಮನ್ನು ಕಾಪಾಡುತ್ತಾನೆ ಎಂಬ ನಂಬಿಕೆ ಹಾಗೂ ಸಮಾಧಾನ ಇದ್ದೇ ಇರುತ್ತದೆ. ದೇವರನ್ನು ಸಮಾಧಾನಪಡಿಸಬಹುದೇನೋ? ಆದರೆ ದೇವರ ಹಾಗೂ ಭಕ್ತರ ನಡುವೆ ಇರುವವರನ್ನು ಸಮಾಧಾನಪಡಿಸುವುದು ಅಷ್ಟು ಸುಲಭವಲ್ಲ. ನಮ್ಮ ಪೂರ್ವಜರು ಅನುಸರಿಸಿರುವ ಕೆಲವು ಆಚಾರಗಳಿಗೆ ಖಂಡಿತಾ ಅರ್ಥ ಇದ್ದೇ ಇರುತ್ತದೆ. ಆದರೆ ಅವುಗಳನ್ನು ತಿರುವು ಮುರುವು ಮಾಡಿ, ಸ್ವಾರ್ಥ ಸಾಧನೆಗಾಗಿ ಇಂದಿನ ಡೋಂಗಿ ಆಚಾರ್ಯರು ಮಾಡಿರುವ ಆಚಾರಗಳಿಗೆ ಮಾತ್ರ ಯಾವುದೇ ಅರ್ಥವಿರುವುದಿಲ್ಲ. ದೇವರನ್ನು ಸಂಪ್ರೀತಿಗೊಳಿಸಲು ಅರ್ಚಕರು, ಜ್ಯೋತಿಷಿಗಳು ಆಚಾರದ ಬಗ್ಗೆ ಸೂಚಿಸುವ ಪರಿಹಾರಗಳು ಮಾತ್ರ ವಿಚಿತ್ರವಾಗಿರುತ್ತವೆ. ವೈಚಾರಿಕ ಮನೋಭಾವ ಇರುವವರು ಸಹ ಇವರುಗಳ ಮಂಕುಬೂದಿಗೆ ಒಳಗಾಗದೇ ಇರುವುದಿಲ್ಲ. ನಮ್ಮ ದೇಶದಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ನಿದ್ರೆ ಕೆಟ್ಟು ಓದಿ ವೈದ್ಯನಾಗಿ ಹಣ ಸಂಪಾದಿಸುವುದಕ್ಕಿಂತ ಸುಲಭವಾಗಿ ಒಂದಷ್ಟು ಜ್ಯೋತಿಷ್ಯ ಶಾಸ್ತ್ರದ ಅಧ್ಯಯನ ಮಾಡಿ, ಜನರನ್ನು ಹೆದರಿಸಿ ಇಲ್ಲಸಲ್ಲದ ಪೂಜೆ, ಶಾಂತಿ ಮಾಡಿಸಿ ವೈದ್ಯರಿಗಿಂತ ಖ್ಯಾತಿ ಗಳಿಸಿದ, ವೈದ್ಯರಿಗಿಂತ ಸಿರಿವಂತರಾದ ಅನೇಕ ಜನರಿದ್ದಾರೆ.

ಇಂದಿಗೂ ವಿದ್ಯಾವಂತ ಸಮುದಾಯದವರೂ ಸೇರಿದಂತೆ ಎಷ್ಟೋ ಜನ ಕಷ್ಟ ಬಂದಾಗ ಸೂಕ್ತ ಪರಿಹಾರ ಹುಡುಕದೆ, ಅನಾರೋಗ್ಯ ಉಂಟಾದಾಗ ವೈದ್ಯರ ಬಳಿ ಮೊದಲು ಹೋಗದೆ ಜ್ಯೋತಿಷಿಯ, ಪೂಜಾರಿಯ ಬಳಿ ಮೊದಲು ಹೋಗಿ ಪರಿಹಾರ ಪಡೆಯುವ ಪರಿಪಾಠ ಹೊಂದಿದ್ದಾರೆ. ಇವರಿಗೆ ದೈಹಿಕ ಖಾಯಿಲೆಗಿಂತ ಮಾನಸಿಕ ಖಾಯಿಲೆ ಹೆಚ್ಚಾಗಿರುತ್ತದೆ. ದೈಹಿಕ ಖಾಯಿಲೆಯನ್ನು ವೈದ್ಯರು ಗುಣಪಡಿಸಬಹುದು, ಆದರೆ ಮಾನಸಿಕ ಖಾಯಿಲೆಗೆ ಜ್ಯೋತಿಷಿಗಳೇ ಬೇಕಾಗುತ್ತಾರೆ, ಅವರು ಆಚಾರದ ಹೆಸರಿನಲ್ಲಿ ಸೂಚಿಸುವ ವಿಚಾರವಿಲ್ಲದ ಪರಿಹಾರಗಳೇ ಅವರ ಮಾನಸಿಕ ಖಾಯಿಲೆಗೆ ದೊಡ್ಡ ಪರಿಹಾರವಾಗುತ್ತದೆ. ಇರಲಿ ಮಾನಸಿಕ ಖಾಯಿಲೆಗೆ ಇದನ್ನು ಮದ್ದು ಎಂದುಕೊಳ್ಳೋಣ, ಆದರೆ ಅದರಿಂದ ಅನೇಕರು ಅಪಾಯವನ್ನು ಎದುರಿಸಿದ್ದಾರೆ. ಪರಿಹಾರವು ಅನೇಕರ ಜೀವವನ್ನು ತೆಗೆದಿವೆ. ಅವುಗಳು ಬೆಳಕಿಗೆ ಬಂದಿರುವುದಿಲ್ಲ ಅಷ್ಟೆ.

2021ರ ಜನವರಿಯಲ್ಲಿ ಆಂಧ್ರಪ್ರದೇಶದ ಮದನಪಲ್ಲಿಯಲ್ಲಿ ನಡೆದ ದಾರುಣ ಘಟನೆ ಎಲ್ಲರ ಮೈ ಜುಮ್ಮೆನ್ನಿಸುವಂತಿದೆ. ಆಚಾರದಲ್ಲಿ ಅತಿಯಾದ ನಂಬಿಕೆ ಇಟ್ಟಿದ್ದ ಕುಟುಂಬದ ಮೂರ್ಖ ನಡೆಯಿಂದ ಇಬ್ಬರು ಯುವತಿಯರು ತಮ್ಮ ಅಮೂಲ್ಯ ಜೀವವನ್ನೇ ಕಳೆದುಕೊಂಡ ಹೃದಯವಿದ್ರಾವಕ ಘಟನೆ ಇದು. ಎಂಎಸ್‌ಸಿ, ಎಂ.ಫಿಲ್, ಪಿ.ಎಚ್‌ಡಿ. ಮುಗಿಸಿ ರಸಾಯನಶಾಸ್ತ್ರದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ವಿ.ಪುರುಷೋತ್ತಮ ನಾಯ್ಡು ಹಾಗೂ ರಸಾಯನಶಾಸ್ತ್ರ ವಿಷಯದಲ್ಲಿ ಚಿನ್ನದ ಪದಕದೊಂದಿಗೆ ಎಂ.ಎಸ್‌ಸಿ ಮುಗಿಸಿ ಉಪನ್ಯಾಸಕಿಯಾಗಿದ್ದ ಅವರ ಪತ್ನಿ ವಿ.ಪದ್ಮಜ ಅವರಿಗೆ ಅನೇಕ ಅಂಧಶ್ರದ್ಧೆಗಳಿದ್ದವು. ಅನೇಕ ಧಾರ್ಮಿಕ ಆಚರಣೆಗಳನ್ನು ನಂಬಿದ್ದ ಅವರು ಮನೆಯಲ್ಲಿ ಅನೇಕ ರೀತಿಯ ಪೂಜೆ ಪುನಸ್ಕಾರಗಳನ್ನು ಮಾಡುತ್ತಿದ್ದರು. ಆದರೆ ಮನೆಯ ಒಳಗಡೆ ಯಾರಿಗೂ ಪ್ರವೇಶ ನೀಡುತ್ತಿರಲಿಲ್ಲ. ಅವರಿಗೆ ಇಬ್ಬರು ಮಕ್ಕಳು, ಅರಣ್ಯ ನಿರ್ವಹಣೆ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ಅಲಖ್ಯ ಒಬ್ಬಳಾದರೆ, ವ್ಯವಹಾರ ನಿರ್ವಹಣೆಯಲ್ಲಿ ಪದವಿ ಪಡೆದ ದಿವ್ಯ ಮತ್ತೊಬ್ಬಳು. ಕೋವಿಡ್ ನಿರ್ಬಂಧವಿದ್ದ ಕಾರಣ ಹೆಚ್ಚು ಹೊರ ಬರದೆ ಎಲ್ಲರೂ ಮನೆಯಲ್ಲಿಯೇ ಇದ್ದರು.

ಇಡೀ ಕುಟುಂಬ ದೇವರು, ಅವತಾರ, ಪುನರ್ಜನ್ಮ ಇವುಗಳ ಕುರಿತು ಅಪಾರ ನಂಬಿಕೆ ಹೊಂದಿದ್ದರು. ಒಂದು ದಿನ ತಮ್ಮ ಮಕ್ಕಳು ಪುನರ್ಜನ್ಮ ಪಡೆಯುತ್ತಾರೆ ಎಂದು ಬಲವಾಗಿ ನಂಬಿ ಪೂಜೆ ಮಾಡಿದ ನಂತರ ಡಂಬಲ್ಸ್‌ನಲ್ಲಿ ಅವರ ತಲೆಗೆ ಹೊಡೆದು ದಂಪತಿಗಳು ಕೊಂದಿದ್ದಾರೆ. ಮತ್ತೆ ಹುಟ್ಟಿ ಬರುತ್ತಾರೆ ಎಂಬುದಾಗಿ ಅವರಿಗೆ ಅಚಲವಾದ ನಂಬಿಕೆ ಇತ್ತು. ಆದರೆ ಅದು ಹಾಗಾಗಲಿಲ್ಲ. ಮೂಢ ನಂಬಿಕೆಯಿಂದ ಅನ್ಯಾಯವಾಗಿ ತಮ್ಮ ತಮ್ಮ ಮಕ್ಕಳನ್ನು ತಾವೇ ಕೊಂದುಬಿಟ್ಟರು. ವಿದ್ಯಾವಂತ ಕುಟುಂಬದಲ್ಲಿ ನಡೆದ ಈ ಘಟನೆ ಅನೇಕರ ಕಣ್ಣು ತೆರೆಸುವಂತಾಗಬೇಕು. ಆಚಾರ ಏನೇ ಹೇಳಿದರೂ ವಿಚಾರವಿಲ್ಲದೆ ಅದನ್ನು ಒಪ್ಪಿಕೊಳ್ಳಬಾರದು, ಅಂಧ ಶ್ರದ್ಧೆಯಿಂದ ಅನುಸರಿಸಬಾರದು. ಅದನ್ನೇ ನಿಜವಾಗಿ ಶಿಕ್ಷಣ ಎನ್ನುವುದು. ಎಷ್ಟೇ ಅಧ್ಯಯನ ಮಾಡಿದ್ದರೂ, ಇಡೀ ಕುಟುಂಬ ಅಕ್ಷರಸ್ಥರಾಗಿದ್ದರೇ ಹೊರತು ವಿದ್ಯಾವಂತರಾಗಿರಲಿಲ್ಲ. ಏಕೆಂದರೆ ಅವರಿಗೆ ವಿವೇಚನೆ, ವೈಚಾರಿಕ ಮನೋಭಾವವೇ ಇರಲಿಲ್ಲ. ಶಿಕ್ಷಣ ಮೂಲ ಉದ್ದೇಶವೇ ವಿವೇಕ, ವೈಚಾರಿಕತೆ ಬೆಳೆಸುವುದು ಅಲ್ಲವೇ?

ಮನುಷ್ಯ ಹುಟ್ಟಿದಾಗಿನಿಂದಲೂ ವಿಚಾರಗಳ ಜೊತೆಗೆ ಆಚಾರಗಳೂ ಇವೆ. ಶಿಸ್ತುಬದ್ಧ ಜೀವನ ನಡೆಸಲು ಮನುಷ್ಯ ಆಸ್ತಿಕನಾದರೆ ಮಾನವೀಯತೆ ಬೆಳೆಸಿಕೊಳ್ಳುತ್ತಾನೆ. ದೇವರ ಮೇಲೆ ಭಕ್ತಿಗಿಂತ ಭಯವೇ ಹೆಚ್ಚಾಗಿರುವ ಪರಿಣಾಮ ಮನುಷ್ಯ ಕೆಲವು ಆಚಾರಗಳನ್ನು ರೂಢಿಸಿಕೊಂಡಿದ್ದಾನೆ. ದೇವರ ತೃಪ್ತಿಗೆ ದೇವರ ಮೂರ್ತಿಗೆ, ಫೋಟೋಗೆ ಅಲಂಕಾರ ಮಾಡುತ್ತಾನೋ ಇಲ್ಲವೋ ತನ್ನ ತೃಪ್ತಿಗೆ ಮಾಡುತ್ತಾನೆ. ದೇವರಿಗೆ ಮಾಡುವ ಅನೇಕ ಸೇವೆಗಳಾದ ಅಭಿಷೇಕ, ಅಲಂಕಾರ, ಆರತಿ, ಮೆರವಣಿಗೆ, ರಥೋತ್ಸವ ಹಾಗೂ ತೆಪ್ಪೋತ್ಸವಗಳು ಮನುಷ್ಯನ ಭಕ್ತಿಯ ಪರಾಕಾಷ್ಟೆಗಳು. ದೇವರು ಸಂಪ್ರೀತಿ ಹೊಂದುತ್ತಾನೋ ಇಲ್ಲವೋ

ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು

ಮನುಷ್ಯ ಮಾತ್ರ ಅವುಗಳಿಂದ ಸಂತೃಪ್ತಿ ಹೊಂದುತ್ತಾನೆ. ದೇವರಿಗೆ ಒಪ್ಪಿಸುವ ನೈವೇದ್ಯ ತಾನೆ ಏನು. ಅವೆಲ್ಲವೂ ದೇವರನ್ನು ಮೆಚ್ಚಿಸುವ ಆಚಾರದ ವಿಧಾನಗಳು. ಆದರೆ ಮಾಡುವ ಆಚಾರದಲ್ಲಿ ವಿಚಾರಗಳು ಇದ್ದರೆ ಒಳಿತು.

ದೇವರ ಮೇಲೆ ನಂಬಿಕೆ ಇರಲಿ. ಅದಕ್ಕೆ ಅಗತ್ಯವಿರುವಷ್ಟು ಪೂಜೆ ಪುನಸ್ಕಾರಗಳನ್ನು ಮಾಡಿಬಿಡಿ. ಆದರೆ ದೇವರ ಏಜೆಂಟರಂತೆ ವರ್ತಿಸುವವರ ಹುಚ್ಚಾಟಗಳಿಗೆ ಬಲಿಯಾಗದೇ ಇರುವ ಎಚ್ಚರಿಕೆ ಇರಬೇಕಷ್ಟೆ. ದೇವರ ಮೇಲೆ ಜನರಿಗೆ ಇರುವ ನಂಬಿಕೆಯನ್ನೇ ಬಂಡವಾಳ ಮಾಡಿಕೊಂಡು ಅವರನ್ನು ವಂಚಿಸುವ ಮಂದಿ ಅನೇಕರಿದ್ದಾರೆ. ಮೊದಲಿಗೆ ಅವರು ಭಯ ಹುಟ್ಟಿಸುತ್ತಾರೆ. ಭಯಕ್ಕೆ ಈಡಾದರೆ ಕಥೆ ಮುಗಿದಂತೆ. ನಯವಾದ ಮಾತು, ಜಾತಕ ಸರಿಯಿಲ್ಲ ಎಂದು ಹೆದರಿಸುವುದು, ಅಕಾಲಿಕ ಮರಣ ಸಂಭವಿಸಬಹುದು ಎನ್ನುವುದು, ಸಂಪತ್ತು ವೃದ್ಧಿಯಾಗುವ ಕನಸನ್ನು ಬಿತ್ತುವುದು, ಅನಾರೋಗ್ಯದಿಂದ ಗುಣಮುಖರಾಗುತ್ತೀರಿ ಎಂದು ನಂಬಿಸುವುದು, ಸಾಲದಿಂದ ಮುಕ್ತಿ ಪಡೆಯುತ್ತೀರಿ ಎಂದು ಆಸೆ ಹುಟ್ಟಿಸುವುದು, ವಧು, ವರ ಈ ವರ್ಷ ಸಿಕ್ಕು ಮದುವೆಯಾಗುತ್ತದೆ ಎಂಬ ಭರವಸೆ ಮೂಡಿಸುವುದು ಇವುಗಳೆಲ್ಲಾ ಆಚಾರದ ಹೆಸರಿನಲ್ಲಿ ನಡೆಯುವ ಅನಾಚಾರಗಳೇ ಆಗಿವೆ. ಕೆಲವು ಯೋಗ್ಯ ಜ್ಯೋತಿಷಿಗಳು ಜ್ಯೋತಿಷ್ಯ ಶಾಸ್ತ್ರವನ್ನು ಅಧ್ಯಯನ ಮಾಡಿ ಸೂಚಿಸುವ ಪರಿಹಾರಗಳು ಸರಳವಾಗಿಯೇ ಇರುತ್ತವೆ. ಆದರೆ ಎಡಬಿಡಂಗಿ ಜ್ಯೋತಿಷಿಗಳ ಪರಿಹಾರಗಳು ಮಾತ್ರ ಭಯಾನಕವಾಗಿರುತ್ತವೆ.

ಆಚಾರವಂತ ಕುಟುಂಬದಲ್ಲಿ ಹುಟ್ಟಿ ಬೆಳೆದರೂ, ಬಸವಣ್ಣನವರು ಕ್ರಾಂತಿಯೋಗಿ ಬಸವಣ್ಣನವರಾಗಿದ್ದು ಅರ್ಥವಿಲ್ಲದ ಆಚಾರಗಳನ್ನು ಪ್ರಶ್ನಿಸುವ ಮೂಲಕ ಎಂಬುದನ್ನು ತಿಳಿಯಬೇಕು. ತಾನು ಧರಿಸುವ ಜನಿವಾರ ತನ್ನ ಸಹೋದರಿಯರಿಗೆ ಏಕೆ ಇಲ್ಲ? ಎಂದು ಪ್ರಶ್ನಿಸುವ ಮೂಲಕ ಅವರು ವಿಚಾರ ಕ್ರಾಂತಿಯನ್ನು ಚಿಕ್ಕವಯಸ್ಸಿಗೆ ಹೊಂದಿದ್ದರು. ಅವರ ವಚನಗಳಲ್ಲಿ ಡಾಂಭಿಕ ಭಕ್ತಿಯ ಕುರಿತು ಕುಹಕವಾಡಿದ್ದಾರೆ, ಅವರ ವಚನಗಳನ್ನು ಅಧ್ಯಯನ ಮಾಡಿದರೆ ವೈಚಾರಿಕ ಮನೋಭಾವ ಮೂಡುವುದರಲ್ಲಿ ಅನುಮಾನವೇ ಇಲ್ಲ. 'ನೀರ ಕಂಡಲ್ಲಿ ಮುಳುಗುವರಯ್ಯಾ, ಮರವ ಕಂಡಲ್ಲಿ ಸುತ್ತುವರಯ್ಯಾ, ಬತ್ತುವ ಜಲವ, ಒಣಗುವ ಮರವ ನೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವಾ' ಎಂದು ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ.

ಅನೇಕ ವಿಜ್ಞಾನದ ವಿಚಾರಗಳನ್ನು ಸಾಕ್ಷಿ ಇಲ್ಲದೆ, ಪ್ರಾಯೋಗಿಕವಾಗಿ ಕಾಣದೆ ಜನ ನಂಬುವುದಿಲ್ಲ, ಒಪ್ಪುವುದಿಲ್ಲ. ಆದರೆ ಆಚಾರದ ವಿಚಾರದಲ್ಲಿ ಬಹಳ ಬೇಗ ನಂಬುತ್ತಾರೆ, ಅದನ್ನು ಪ್ರಶ್ನಿಸುವುದು ಅಪರಾಧ ಎಂಬ ಮನೋಭಾವ ಅವರಲ್ಲಿದೆ, ಅದನ್ನೇ ಮೌಢ್ಯತೆ ಎನ್ನುವುದು. ವಿಜ್ಞಾನದ ವಿಚಾರ ನಂಬದವರು ವಾಮಾಚಾರ ನಂಬುತ್ತಿರುವುದು ವಿಪರ್ಯಾಸ. ಇಂದಿಗೂ ನಮ್ಮ ದೇಶದಲ್ಲಿ ನರಬಲಿಯಂತಹ ಅಮಾನುಷ ಕೃತ್ಯಗಳು ರೂಢಿಯಲ್ಲಿವೆ ಎಂದರೆ ನಂಬಲಾಗದು. ಅನೇಕ ಪವಾಡಗಳನ್ನು ಸೃಷ್ಟಿಸುವ ಬಾಬಾಗಳನ್ನು ನಮ್ಮ ದೇಶದಲ್ಲಿ ಬೇಗ ನಂಬುತ್ತಾರೆ. ಆದರೆ ಪವಾಡ ಬಯಲು ಕಾರ್ಯಕ್ರಮದಲ್ಲಿ ಜಾಗೃತಿ ಮೂಡಿಸುವವರನ್ನೇ ಪ್ರಶ್ನಿಸುತ್ತಾರೆ. ಜೀವವಿಲ್ಲದ ಕಲ್ಲದೇವರ ನಂಬುವಷ್ಟು, ಪೂಜಿಸುವಷ್ಟು ನಮ್ಮ ಜೀವನಕ್ಕೆ ನೆರವಾಗುವ, ಹತ್ತಿರವೇ ಇರುವ ದೈವರೂಪಿಯನ್ನು ನಂಬದಿರುವುದು, ಪೂಜಿಸದಿರುವುದು ಒಂದು ವಿಡಂಭನೆಯೇ ಸರಿ.

ಒಂದು ಊರಿನಲ್ಲಿ ವರ್ಷಕ್ಕೊಮ್ಮೆ ಜರುಗುವ ಬಸವೇಶ್ವರ ಜಾತ್ರೆ ನಡೆಯುತ್ತಿರುತ್ತದೆ. ಬಸವನ ಕಲ್ಲಿನ ದೊಡ್ಡ ಮೂರ್ತಿ ಇರುವ ದೇವಸ್ಥಾನಕ್ಕೆ ಸುತ್ತಲೂ ತಳಿರು ತೋರಣಗಳ ಅಲಂಕಾರ ನಡೆದಿರುತ್ತದೆ. ಬಾಳೆಕಂಬ, ಮಾವಿನ ಸೊಪ್ಪು, ಇತರೆ ಹಸಿರು ಸೊಪ್ಪುಗಳಿಂದ ಇಡೀ ಗುಡಿ ಅಲಂಕಾರಗೊಳ್ಳುತ್ತಿರುತ್ತದೆ. ಹಬ್ಬದಂದು ನೈವೇದ್ಯಕ್ಕೆ ತಯಾರಿಯೂ ನಡೆದಿರುತ್ತದೆ. ಅಂದು ಸಂಜೆ ಜಮೀನಿನಲ್ಲಿ ತಮ್ಮ ಕಾಯಕ ಮುಗಿಸಿ ಮನೆಕಡೆಗೆ ಬರುತ್ತಿದ್ದ ಎತ್ತಿನ ಜೋಡಿಗಳು ಹೊಟ್ಟೆ ಹಸಿವಿನಿಂದ ದೇವಸ್ಥಾನದ ಗೇಟಿಗೆ ಕಟ್ಟಿದ್ದ ಬಾಳೆಕಂಬದ ಎಲೆಗಳು, ಮಾವಿನ ಸೊಪ್ಪನ್ನು ಮೇಯಲು ಹೋಗುತ್ತವೆ. ಇದನ್ನು ಕಂಡ ಭಕ್ತ ಮಹಾಶಯರು ದೊಡ್ಡ ಕೋಲಿನಿಂದ ಹೊಡೆದು ಓಡಿಸುತ್ತಾರೆ. ಅಲ್ಲಿದ್ದ ಸಂತರೊಬ್ಬರು 'ಅಯ್ಯಾ ಕಲ್ಲಿನ ಬಸವನಿಗೆ, ಉಣ್ಣದ ಬಸವನಿಗೆ ಏನೆಲ್ಲಾ ತಯಾರಿ ಮಾಡಿರುವಿರಿ, ಆದರೆ ಉಣ್ಣುವ ಬಸವನ ಹೊಡೆದು ಓಡಿಸಿದಿರಿ, ಜೀವಂತ ಬಸವನಿಂದಲ್ಲವೇ ಜಮೀನಲ್ಲಿ ವ್ಯವಸಾಯ ನಡೆಯುವುದು, ಅವುಗಳೇ ಅಲ್ಲವೇ ಕಣ್ಣಿಗೆ ಕಾಣುವ ದೇವರುಗಳು' ಎಂದು ಹೇಳಿದಾಗ ಭಕ್ತರಿಗೆ ತಮ್ಮ ಮೌಢ್ಯತೆಯ ಅರಿವಾಗುತ್ತದೆ. 'ಉಂಬುವ ಜಂಗಮ ಬಂದರೆ ನಡೆಯೆಂಬರು, ಉಣದ ಲಿಂಗಕ್ಕೆ ಬೋನವ ಹಿಡಿ ಎಂಬರು' ಎಂಬ ಬಸವಣ್ಣನವರ ಮತ್ತೊಂದು ವಚನ ಉಲ್ಲೇಖನೀಯ? ಎಲ್ಲದಕ್ಕೂ ಇತಿಮಿತಿ ಇರುವಂತೆ ನಂಬಿಕೆಗೂ ಇರಬೇಕು. ಆಚಾರ ಅನುಸರಿಸುವ ಭರದಲ್ಲಿ ವಿಚಾರ ಮರೆಯಬಾರದು. ಏನಂತೀರಿ?

ಪದ ತಾಂಬೂಲ :
ಸದಾಚಾರವಿದ್ದಲ್ಲಿ ಅನಾಚಾರವಿರದು

ಭಾನುವಾರ ರೈತ ಸಂತೆಯಲ್ಲಿ ಸಾವಯವ ಕೃಷಿ ಉತ್ಪನ್ನಗಳಿಗೆ ಡಿಮ್ಯಾಂಡ್

ಮೈಸೂರು, ಜ.14(ಎಸ್‌ಪಿಎನ್)– ಮೈಸೂರಿನ ವಿಜಯನಗರ ಒಂದನೇ ಹಂತದಲ್ಲಿರುವ 'ಭಾನುವಾರ ರೈತ ಸಂತೆ ಮಾರು ಕಟ್ಟೆ' ಆವರಣದಲ್ಲಿ ಕಳೆದ ಒಂದೂವರೆ ವರ್ಷದಿಂದ ಸಾವಯವ ತರಕಾರಿ, ಹಣ್ಣು, ಸೊಪ್ಪು, ಅಕ್ಕಿ, ಬೆಲ್ಲ, ಗಾಣದ ಎಣ್ಣೆ ಬಗೆ ಬಗೆಯ ದೇಶಿ ತಿನಿಸುಗಳ ಖರೀದಿಗೆ ಮೈಸೂರಿನ ಅಧಿಕ ಸಂಖ್ಯೆಯ ಗ್ರಾಹಕರನ್ನು ಆಕರ್ಷಿಸುತ್ತಿದ್ದು, ಕನಿಷ್ಠ (ಪ್ರತಿ ಭಾನುವಾರ) ಒಂದೂವರೆ ಸಾವಿರ ಗ್ರಾಹಕರು ಈ ಆವರಣಕ್ಕೆ ಭೇಟಿ ನೀಡುತ್ತಿದ್ದಾರೆ.



ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ 'ಭಾನುವಾರ ರೈತ ಸಂತೆ ಮಾರುಕಟ್ಟೆ' ಆವರಣದಲ್ಲಿ ಗ್ರಾಹಕರು ಸಾವಯವ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತಿರುವುದು.

ಆರೋಗ್ಯವಂತ ಸಮಾಜಕ್ಕೆ ಉತ್ತಮ ಆಹಾರ ಎಂಬ ಸದುದ್ದೇಶದಿಂದ ಆರಂಭವಾಗಿರುವ ಈ ಮಾರುಕಟ್ಟೆ ಸಾವಯವ ರೈತರು ಬೆಳೆದ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಮಾತ್ರ ಸೀಮಿತವಾಗಿದ್ದು, ಯಾವುದೇ ದಲ್ಲಾಳಿಗಳಿಗೆ ಪ್ರವೇಶಕ್ಕೆ ಅವಕಾಶ ಇಲ್ಲ. ಹಾಗಾಗಿ ಇಲ್ಲಿ ಶುದ್ಧ ರಾಸಾಯನಿಕ ಮುಕ್ತ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದು, ಇದಕ್ಕೆ ಮೈಸೂರಿನ ಜನತೆ ಕೂಡ ಆಕರ್ಷಿತರಾಗುತ್ತಿದ್ದಾರೆ ಎನ್ನುತ್ತಾರೆ ಸಖತ್ ಸೊಪ್ಪು ಖ್ಯಾತಿಯ ವೇಣುಗೋಪಾಲ್.

2 ಸಾವಿರಕ್ಕೂ ಹೆಚ್ಚು: ಜಿಲ್ಲೆಯಲ್ಲಿ ಸಾವಯವ ಕೃಷಿ ಅಳವಡಿಸಿಕೊಂಡ ರೈತರ ಸಂಖ್ಯೆ ಎರಡು ಸಾವಿರಕ್ಕೂ ಹೆಚ್ಚು. ಅಂತಹ ರೈತರು ಮಾತ್ರ ತಾವು ಬೆಳೆದ (ರಾಸಾಯನಿಕ ಸಿಂಪಡಿಸದೇ ಬೆಳೆದ) ತರಕಾರಿ, ಹಣ್ಣು ಸೊಪ್ಪು, ತಿನಿಸುಗಳ ಮಾರಾಟಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಇದನ್ನು ಹೆಚ್ಚಿನ ಜನರಿಗೆ ಸಿಗುವಂತೆ ಮಾಡಲು ಇದೀಗ ಪ್ರತಿ ತಿಂಗಳಿಗೊಮ್ಮೆ ಸಾವಯವ ಕೃಷಿಯಿಂದಾಗುವ ಪ್ರಯೋಜನ ಬಗ್ಗೆ ವಿಚಾರ ಸಂಕಿರಣಗಳನ್ನು ಈ ಆವರಣದಲ್ಲೇ ಮಾಹಿತಿ ನೀಡಲು ಚಿಂತನೆ ನಡೆದಿದೆ ಎನ್ನುತ್ತಾರೆ ಸಾವಯವ ಕೃಷಿ ಹೋರಾಟಗಾರ ವೇಣುಗೋಪಾಲ್.

ವಿವಿಧ ಆರ್ಗ್ಯಾನಿಕ್ ಸಂಸ್ಥೆಗಳು, ಸಾವ 'ಯವ ಕೃಷಿ ಉಳಿಸಿ ಹೋರಾಟದಲ್ಲಿ ತೊಡಗಿಸಿಕೊಂಡಿರುವ 36 ಮಂದಿ ರೈತರು, ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆ ಆವರಣಕ್ಕೆ ಪ್ರತಿ ಭಾನುವಾರ ಬೆಳಗ್ಗೆ 7 ಗಂಟೆಗೆ ತಂದು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ. ಇದರ ಖ್ಯಾತಿ ಬೇರೆಬೇರೆ ಜಿಲ್ಲೆಗಳಿಗೂ ವ್ಯಾಪಿಸಿದೆ ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಕಲಬೆರಕೆ ಮುಕ್ತ ಆಹಾರ: ಪ್ರತಿ ಭಾನುವಾರ ವಿವಿಧ ಬಡಾವಣೆಗಳಿಂದ ಆಗಮಿಸುವ ಗ್ರಾಹಕರಿಗೆ ತರಕಾರಿ, ಸೊಪ್ಪು, ಅಕ್ಕಿ ಖರೀದಿಸುವುದರ ಜೊತೆಗೆ ಇಲ್ಲಿನ ದೇಶಿ ಆಹಾರ ತಯಾರಿಸುವಲ್ಲಿ ಖ್ಯಾತಿಗಳಿಸಿರುವ ಹರೀಶ್ ಎಂಬುವರು ತಯಾರಿಸಿರುವ ಮಸಾಲೆ ದೋಸೆ, ಇಡ್ಲಿ, ವಡೆಪಾವ್ ಸೇರಿದಂತೆ ತಿನಿಸುಗಳಿಗೆ ಬಾರೀ ಡಿಮ್ಯಾಂಡ್ ಇದ್ದು, ಸಾವಿರ ಮಂದಿ ಇಲ್ಲಿ ರುಚಿ ಸವಿಯಲಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ ಆಹಾರವೂ ವಿಷಮಯವಾಗುತ್ತಿದೆ. ನಗರ ಪ್ರದೇಶಗಳಲ್ಲಿ ಮಧುಮೇಹ, ಹೃದ್ರೋಗ ಸೇರಿದಂತೆ ನಾನಾ ಕಾಯಿಲೆಗಳಿಂದ ಬಳಲುತ್ತಿರುವವರ ಸಂಖ್ಯೆ ಅಧಿಕವಾಗುತ್ತಿದೆ. ಹಾಗಾಗಿ ಜನರಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ಆಹಾರ ಉತ್ಪನ್ನಗಳನ್ನು ನೀಡಬೇಕು ಎಂಬ ಉದ್ದೇಶದಿಂದ ಈ ಕಾರ್ಯ ಮುಂದುವರೆಸಲಾಗುತ್ತಿದೆ ಎಂದರು.

ಮಧ್ಯವರ್ತಿಗಳ ಹಾವಳಿ ಇಲ್ಲ: ರೈತರು ತಾವು ಬೆಳೆದ ಉತ್ಪನ್ನಗಳನ್ನು ಈ ಮೊದಲು ದಲ್ಲಾಳಿಗಳ ಮೂಲಕವೇ ಮಾರುವ ಸನ್ನಿವೇಶ ಸೃಷ್ಟಿಯಾಗುತ್ತಿತ್ತು. ಆಗ ಅವರು ನಿಗದಿಪಡಿಸಿದ ಬೆಲೆಯನ್ನಷ್ಟೇ ಪಡೆಯಬೇಕಿತ್ತು. ಪ್ರಸ್ತುತ ಸಾವಯವ ಸಂತೆಯಲ್ಲಿ ನೇರವಾಗಿ ರೈತರೇ ಮಾರುವುದರಿಂದ ಲಾಭವೆಲ್ಲಾ ರೈತರಿಗೆ ಸಿಗಲಿದೆ ಎನ್ನುತ್ತಾರೆ ಮತ್ತೊರ್ವ ಸಾವಯುವ ಕೃಷಿಕ ಶ್ಯಾಮ್ ಸುಂದರ್.

ಲಾಭವೂ ಇಲ್ಲ, ನಷ್ಟವೂ ಇಲ್ಲ: ಜನರಿಗೆ ಕಡಿಮೆ ಬೆಲೆಯಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಲು ಚಿಂತನೆ ನಡೆಸಿದೆ. ಸಂತೆ ಆರಂಭಕ್ಕೆ ಪೂರ್ವಭಾವಿಯಾಗಿ ಮಾರುಕಟ್ಟೆ ವಿಶ್ಲೇಷಣೆ ಮಾಡಿ ಅಂದಿನ ಬೆಲೆ ಖಚಿತಪಡಿಸಿಕೊಂಡು ಮಾರುಕಟ್ಟೆಗಿಂತ ಪ್ರತಿಯೊಂದು ಪದಾರ್ಥವನ್ನು ಕನಿಷ್ಠ ನಾಲ್ಕೈದು ರೂ. ಕಡಿಮೆಗೆ ಮಾರಾಟ ಮಾಡಬೇಕು ಎಂಬ ಉದ್ದೇಶವಿದೆ. ಹೀಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಸಾವಯವ ಕೃಷಿಕರಿಗೆ ಅನುಕೂಲವಾಗಲಿದೆ ಎನ್ನುತ್ತಾರೆ ಗ್ರಾಹಕ ಕಿರಣ್.

ಯೋಗಾಪಟುಗಳೂ ಸಾಥ್: ಜಯಲಕ್ಷ್ಮೀಪುರಂ, ಗೋಕುಲಂನಲ್ಲಿ ವಿದೇಶಗಳಿಂದ ಆಗಮಿಸಿ, ಯೋಗಾಭ್ಯಾಸ ಮಾಡುತ್ತಿರುವ ವಿದೇಶಿಗರು, ಪ್ರತಿ ಭಾನುವಾರ ಇಲ್ಲಿ ಸಿಗುವ ದೇಶಿ ತಿಂಡಿ–ತಿನಿಸುಗಳನ್ನು ತಿನ್ನಲು ಆಗಮಿಸುತ್ತಿದ್ದಾರೆ. ಅಲ್ಲದೆ, ಸಕ್ಕರೆ ರಹಿತ ಪದಾರ್ಥಗಳ ತಿನಿಸುಗಳಿಗೆ ಹೆಚ್ಚಿನ ಬೇಡಿಕೆ ಇಡುತ್ತಿದ್ದಾರೆ ಎನ್ನುತ್ತಾರೆ ಮತ್ತೊರ್ವ ದೇಶಿ ಆಹಾರ ತಯಾರಿಕಿ ಸೀಮಾ.

ಮಿನಿ ರೈತ ಮಾರುಕಟ್ಟೆಗೆ ಸ್ವಚ್ಛತೆಗೆ ಆಗ್ರಹ: ಸ್ನೇಕ್ ಶ್ಯಾಂ ರಸ್ತೆಯಲ್ಲಿರುವ ಮಿನಿ ರೈತ ಮಾರಾಟ ಮಳಿಗೆಯಲ್ಲಿ ಡೈಲಿ ತರಕಾರಿ ವ್ಯಾಪಾರ ನಡೆಯುತ್ತಿದ್ದು, ಇಲ್ಲಿನ ಆವರಣದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದು ಇಲ್ಲಿನ ವ್ಯಾಪಾರಿಗಲು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ಸಖತ್ ಸೊಪ್ಪು ಖ್ಯಾತಿಯ ವೇಣುಗೋಪಾಲ್ ಅವರು ಗ್ರಾಹಕರಿಗೆ ಸಾವಯುವ ಸೊಪ್ಪು ನೀಡುತ್ತಿರುವುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 15 ಸೋಮವಾರ 2024

ಸಂಪುಟ: 44 | ಸಂಚಿಕೆ: 269 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಶುಭಾಶಯಗಳು



ನಾಡಿನ ಸಮಸ್ತರಿಗೂ ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು

ಬಿಡುವು

ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 16.01.2024ರ ಮಂಗಳವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಸಡಗರ-ಸಂಭ್ರಮದ ಜಾನುವಾರುಗಳ ಕಿಚ್ಚು ಹಾಯಿಸುವಿಕೆ

ಮೈಸೂರು, ಜ.14(ಎಂಟಿವೈ)–ಸುಗ್ಗಿ ಹಬ್ಬ ಸಂಕ್ರಾಂತಿ ಹಿನ್ನೆಲೆಯಲ್ಲಿ ಭಾನುವಾರ ಸಂಜೆಯೇ ಮೈಸೂರಿನ ವಿವಿಧೆಡೆ ಜಾನುವಾರುಗಳಿಗೆ ಕಿಚ್ಚು ಹಾಯಿಸಿ ಸಂಭ್ರಮಿಸಲಾಯಿತು.

ಈ ವರ್ಷ ಸಂಕ್ರಾಂತಿ ಹಬ್ಬ ಸೋಮವಾರ ಬಂದಿದ್ದು, ಅಂದು ಬಸವೇಶ್ವರನ ವಾರವಾದ ಕಾರಣ ಜಾನುವಾರುಗಳಿಗೆ ಕಿಚ್ಚು ಹಾಯಿಸುವ ಸಂಪ್ರದಾಯವಿಲ್ಲ. ಈ ಹಿನ್ನೆಲೆಯಲ್ಲಿ ಭಾನುವಾರವೇ ಎಲ್ಲೆಡೆ ಕಿಚ್ಚು ಹಾಯಿಸಲಾಯಿತು. ಅದರಲ್ಲೂ ಮೈಸೂರಿನ ಹೊರವಲಯದ ಸಿದ್ದಲಿಂಗಪುರದಲ್ಲಿ ಪ್ರತೀ ವರ್ಷದಂತೆ ಈ ಬಾರಿಯೂ ಸಂಭ್ರಮದಿಂದ ಕಿಚ್ಚು ಹಾಯಿಸಲಾಯಿತು. ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಸರ್ವೀಸ್ ರಸ್ತೆಯಲ್ಲಿ ಭಾನುವಾರ ಸಂಜೆ ನಡೆದ ಸಂಕ್ರಾಂತಿಯ ಕಿಚ್ಚು ಹಾಯಿಸುವ ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಸಂಭ್ರಮದಿಂದ ಪಾಲ್ಗೊಂಡಿದ್ದರು.

ತಾವು ಸಾಕಿರುವ ಜಾನುವಾರುಗಳಿಗೆ ಅಲಂಕಾರ ಮಾಡಿ ಬೃಹತ್ ಹೂವಿನ ಹಾರವನ್ನು ಹಾಕಿ ಕಿಚ್ಚು ಹಾಯಿಸಲು ಮೆರವಣಿಗೆ ಮೂಲಕ ಕರೆತಂದ ಸಿದ್ದಲಿಂಗಪುರ ಗ್ರಾಮಸ್ಥರು ಹಾಗೂ ಕೆ.ಆರ್.ಮಿಲ್ ಕಾಲೋನಿ ನಿವಾಸಿಗಳು ಕಿಚ್ಚು ಹಾಯಿಸಲು ನಿಗದಿ ಮಾಡಿದ್ದ ಸ್ಥಳದಲ್ಲಿ ಭತ್ತದ ಹುಲ್ಲು ಹಾಕಿ ಆಳೆತ್ತರಕ್ಕೆ ಬೆಂಕಿ ಚಿಮ್ಮುವಂತೆ ಮಾಡಿ, ಅದರಲ್ಲಿ ತಮ್ಮ ಜಾನುವಾರುಗಳನ್ನು ಕೊಂಡೊಯ್ದು ಕಿಚ್ಚು ಹಾಯಿಸಿದರು.




ಮೈಸೂರು ತಾಲೂಕಿನ ಸಿದ್ದಲಿಂಗಪುರದಲ್ಲಿ ಭಾನುವಾರ ಸಂಜೆ ಸಂಕ್ರಾಂತಿ ಹಿನ್ನೆಲೆಯಲ್ಲಿ ನಡೆದ ಕಿಚ್ಚು ಹಾಯಿಸುವ ಕಾರ್ಯಕ್ರಮದಲ್ಲಿ ಬೆಂಕಿಯ ಕೆನ್ನಾಲಿಗೆಯನ್ನು ಸೀಳಿ ಹಾರುತ್ತಿರುವ ಜಾನುವಾರು. ಚಿತ್ರ: ಲಕ್ಷ್ಮಿನಾರಾಯಣ ಯಾದವ್.

ಈ ವೇಳೆ ಕೆಲವು ಕುರಿ ಮತ್ತು ಟಗರುಗಳನ್ನು ರೈತರು ಕಿಚ್ಚು ಹಾಯಿಸಲು ಕರೆತಂದದ್ದು ವಿಶೇಷವಾಗಿತ್ತು. ಜಾತ್ರೋಪಾದಿಯಲ್ಲಿ ನಡೆದ ಕಿಚ್ಚು ಹಾಯಿಸುವ ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳಲು ವಿವಿಧೆಡೆಯಿಂದ ಜನರು ಮಾತ್ರವಲ್ಲದೆ, ಛಾಯಾಗ್ರಾಹಕರುಗಳು ಆಗಮಿಸಿದ್ದು ವಿಶೇಷವಾಗಿತ್ತು. ಹಳೇ ಮೈಸೂರು ಭಾಗದಲ್ಲಿ ಸಿದ್ದಲಿಂಗಪುರದ ಕಿಚ್ಚು ಹಾಯಿಸುವ ಜಾತ್ರೆಗೆ ಹೆಚ್ಚಿನ ಮಹತ್ವವಿದ್ದು, ಪ್ರಸಿದ್ಧಿ ಪಡೆದಿದೆ. ಗ್ರಾಮಸ್ಥರು ತಮ್ಮ ಜಾನುವಾರುಗಳನ್ನು ಮೆರವಣಿಗೆಯಲ್ಲಿ ಕರೆತರುವುದನ್ನು ನೋಡುವುದಕ್ಕೆ ನಗರ ಪ್ರದೇಶದ ನೂರಾರು ಮಂದಿ ಆಗಮಿಸುವುದು ವಾಡಿಕೆ. ಈ ಹಿನ್ನೆಲೆಯಲ್ಲಿ ಇಂದು ಸಿದ್ದಲಿಂಗಪುರದಲ್ಲಿ ನಡೆದ ಕಿಚ್ಚು ಹಾಯಿಸುವ ಸಂಭ್ರಮದ ಜಾತ್ರೆ ಅಪಾರ ಸಂಖ್ಯೆಯ ಜನರನ್ನು ಆಕರ್ಷಿಸಿತು.

ವಿವಿಧೆಡೆ: ಮೈಸೂರಿನ ಅಗ್ರಹಾರ, ಕುಂಬಾರಕೊಪ್ಪಲು, ಕೆ.ಜಿ.ಕೊಪ್ಪಲು, ನಂಜುಮಳಿಗೆ, ಚಾಮುಂಡಿಪುರಂ, ಹುಲ್ಲಿನ ಬೀದಿ, ಯರಗನಹಳ್ಳಿ, ಕುರುಬಾರಹಳ್ಳಿ, ಪಡುವಾರಹಳ್ಳಿ, ರಮ್ಮನಹಳ್ಳಿ, ಮೂಡಲಹುಂಡಿ, ವರಕೋಡು, ವರುಣ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಭಾನುವಾರ ಸಂಜೆ ಜಾನುವಾರುಗಳಿಗೆ ಕಿಚ್ಚು ಹಾಯಿಸಲಾಯಿತು. ಜಾನುವಾರುಗಳಿಗೆ ಸ್ನಾನ ಮಾಡಿಸಿ, ಅಲಂಕಾರ ಮಾಡಿ ಕಿಚ್ಚು ಹಾಯಿಸಿ ಸಂಭ್ರಮಿಸಲಾಯಿತು.

ಅನಂತಕುಮಾರ್ ಹೆಗಡೆ ವಿರುದ್ಧ ಪ್ರಕರಣ ದಾಖಲು

ಕಾರವಾರ: ಬಾಬ್ರಿ ಮಸೀದಿ ನಿರ್ನಾಮವಾದಂತೆ ಭಟ್ಕಳದ ಚಿನ್ನದ ಪಳ್ಳಿಯೂ ನಿರ್ನಾಮವಾಗುತ್ತದೆ ಎಂದು ವಿವಾದಾತ್ಮಕ ಹೇಳಿಕೆ ನೀಡಿದ್ದ ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಪೊಲೀಸರು ಸುಮೋಟೊ ಪ್ರಕರಣ ದಾಖಲಿಸಿದ್ದಾರೆ. ಕುಮಟಾದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ್ದ ಅವರು, ಎಲ್ಲೆಲ್ಲಿ ದೇವಸ್ಥಾನ ಒಡೆದು ಮಸೀದಿಗಳನ್ನು ಕಟ್ಟಿದ್ದಾರೋ ಅಲ್ಲೆಲ್ಲ ಮತ್ತೆ ದೇವಸ್ಥಾನ ನಿರ್ಮಾಣವಾಗಲಿದೆ. ಅದೇ ರೀತಿ ಭಟ್ಕಳದ ಚಿನ್ನದ ●9ನೇ ಪುಟಕ್ಕೆ



ಭಾರತ್ ಜೋಡೋ ನ್ಯಾಯ್ ಯಾತ್ರೆಗೆ ಚಾಲನೆ

ಇಂಫಾಲಾ, ಜ.14– ಜನಾಂಗೀಯ ಕಲಹ ಪೀಡಿತ ಮಣಿಪುರದ ತೌಬಲ್ ಜಿಲ್ಲೆಯಲ್ಲಿ ಕಾಂಗ್ರೆಸ್ ಎರಡನೇ ದೊಡ್ಡ ಪಾದಯಾತ್ರೆ ಭಾರತ್ ಜೋಡೋ ನ್ಯಾಯ್ ಯಾತ್ರೆಗೆ ಚಾಲನೆ ಸಿಕ್ಕಿದ್ದು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 6,713 ಕಿ.ಮೀ ದೂರ ಪಾದಯಾತ್ರೆ ಮಾಡಲಿದ್ದಾರೆ.

ಮಣಿಪುರದಲ್ಲಿ ಆಡಳಿತ ಯಂತ್ರ ವಿಫಲವಾಗಿದೆ: ರಾಹುಲ್ ಗಾಂಧಿ

ಖೋಂಗ್‌ಜೋಮ್ ಯುದ್ಧ ಸ್ಮಾರಕದಿಂದ ಯಾತ್ರೆ ಪ್ರಾರಂಭವಾಗಿದ್ದು ಇದು 100 ಲೋಕಸಭಾ ಕ್ಷೇತ್ರಗಳು ಮತ್ತು 337 ವಿಧಾನಸಭಾ ಕ್ಷೇತ್ರಗಳನ್ನು ವ್ಯಾಪಿಸಿ 110 ಜಿಲ್ಲೆಗಳನ್ನು ಒಳಗೊಳ್ಳುವ ಮೂಲಕ 6,713 ಕಿ.ಮೀ. ದೂರವನ್ನು ಕ್ರಮಿಸಲಿದೆ. 67 ದಿನಗಳ ನಂತರ ಮಾರ್ಚ್ 20ರಂದು ಮುಂಬೈನಲ್ಲಿ ಯಾತ್ರೆ ಮುಕ್ತಾಯಗೊಳ್ಳಲಿದೆ. ●7ನೇ ಪುಟಕ್ಕೆ



ಭಾರತ್ ಜೋಡೋ ನ್ಯಾಯ್ ಯಾತ್ರೆಗೆ ರಾಹುಲ್ ಗಾಂಧಿ ಭಾನುವಾರ ಚಾಲನೆ ನೀಡಿದರು.

ಮಾಸಾಶನಕ್ಕಾಗಿ 5 ಕಿ.ಮೀ. ದೂರ ತೆವಳಿಕೊಂಡು ಬಂದ ಅಜ್ಜಿ

ರಾಜ್ಯ ಸರ್ಕಾರದ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ



ಬೆಂಗಳೂರು,ಜ.14–ಮಾಸಾಶನಕ್ಕಾಗಿ ಅಜ್ಜಿಯೊಬ್ಬರು 5 ಕಿ. ಮೀ. ದೂರ ತೆವಳಿಕೊಂಡು ಬಂದಿದ್ದಾರೆ.

ದಾವಣಗೆರೆ ಜಿಲ್ಲೆ ಹರಿಹರ ತಾಲೂಕು ಕುಣಿಬೆಳಕೆರೆ ಗ್ರಾಮದ ಅಜ್ಜಿ, ರಸ್ತೆಯ ಬದಿಯಲ್ಲಿ ತೆವಳಿಕೊಂಡು ಸಾಗಿದ್ದಾರೆ.

ಈ ಫೋಟೋವನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಇಂತಹ ದೃಶ್ಯಗಳು ಪುನರಾವರ್ತನೆ ಆಗಬಾರದು. ಕೂಡಲೇ ಆ ತಾಯಿಗೆ ಸರಕಾರ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು ಎಂದು ಮಾಜಿ ಸಿಎಂ ಒತ್ತಾಯಿಸಿದ್ದಾರೆ.

ರಾಜ್ಯ ಸರ್ಕಾರ ಗ್ಯಾರಂಟಿಗಳನ್ನು ಕೊಟ್ಟು ಜನರ ಬದುಕು ಹಸನು ಮಾಡುತ್ತಿದ್ದೇವೆ ಎಂದು ಹೇಳುತ್ತಿದೆ. ಹಸನು ಮಾಡುವ ಮಾತು ಒಳ್ಳೆಯದೇ.. ಆದರೆ, ಜನಜೀವನ ಹೇಗೆ ಹಳಿ ತಪ್ಪುತ್ತಿದೆ ಎನ್ನುತ್ತಿರುವುದಕ್ಕೆ ●7ನೇ ಪುಟಕ್ಕೆ



ಹರಿಹರ ತಾಲೂಕು ಕುಣಿಬೆಳಕೆರೆ ಗ್ರಾಮದ ಅಜ್ಜಿ ರಸ್ತೆಯ ಬದಿಯಲ್ಲಿ ತೆವಳಿಕೊಂಡು ಸಾಗುತ್ತಿರುವುದು.

ಬಿಜೆಪಿ ನೂತನ ಜಿಲ್ಲಾಧ್ಯಕ್ಷರ ನೇಮಕ

ಎಲ್.ನಾಗೇಂದ್ರ ಮೈಸೂರು ನಗರಾಧ್ಯಕ್ಷ, ಎಲ್.ಆರ್.ಮಹದೇವಸ್ವಾಮಿ ಗ್ರಾಮಾಂತರ ಜಿಲ್ಲಾಧ್ಯಕ್ಷ



ಎಲ್.ನಾಗೇಂದ್ರ | ಮಹದೇವಸ್ವಾಮಿ | ನಿರಂಜನ್‌ಕುಮಾರ್ | ಇಂದ್ರೇಶ್‌ಕುಮಾರ್ | ರವಿ ಕಾಳಪ್ಪ | ಸಿದ್ದೇಶ್ ನಾಗೇಂದ್ರ

ಮೈಸೂರು,ಜ.14(ಎಸ್‌ಬಿಡಿ)–ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ನೂತನ ಅಧ್ಯಕ್ಷರನ್ನು ನೇಮಕ ಮಾಡಿದ್ದು, ಮೈಸೂರು ನಗರಾಧ್ಯಕ್ಷರಾಗಿ ಮಾಜಿ ಶಾಸಕ ಎಲ್.ನಾಗೇಂದ್ರ ಹಾಗೂ ಗ್ರಾಮಾಂತರ ಜಿಲ್ಲಾಧ್ಯಕ್ಷರಾಗಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇಮಕಗೊಂಡಿದ್ದಾರೆ.

ಚಾಮರಾಜನಗರ ಅಧ್ಯಕ್ಷರಾಗಿ ಮಾಜಿ ಶಾಸಕ ಸಿ.ಎಸ್. ನಿರಂಜನ್‌ಕುಮಾರ್, ಮಂಡ್ಯ ಅಧ್ಯಕ್ಷರಾಗಿ ಇಂದ್ರೇಶ್ ಕುಮಾರ್, ಹಾಸನ ಜಿಲ್ಲಾಧ್ಯಕ್ಷರಾಗಿ ಸಿದ್ದೇಶ್ ನಾಗೇಂದ್ರ, ಕೊಡಗು ಜಿಲ್ಲಾಧ್ಯಕ್ಷರಾಗಿ ರವಿ ಕಾಳಪ್ಪ ನಿಯುಕ್ತಿಗೊಂಡಿದ್ದಾರೆ.

ನೂತನ ಮೈಸೂರು ನಗರಾಧ್ಯಕ್ಷರಾಗಿರುವ ಎಲ್.ನಾಗೇಂದ್ರ ಅವರು ಮೈಸೂರು ಪಾಲಿಕೆ ಸದಸ್ಯರಾಗಿ, ಮುಡಾ ಅಧ್ಯಕ್ಷರಾಗಿ, ಚಾಮರಾಜ ಕ್ಷೇತ್ರದ ಶಾಸಕರಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳ ಮೂಲಕ ಜನಮನ್ನಣೆ ಗಳಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಪರಾಭವಗೊಂಡ ಇವರು ಪಕ್ಷದ ವಿವಿಧ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಸಂಘಟನೆಗೂ ಶ್ರಮಿಸಿದ್ದಾರೆ. ಎಲ್.ಆರ್.ಮಹದೇವಸ್ವಾಮಿ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ ಕೊರೊನಾ ಸಂಕಷ್ಟದಲ್ಲೂ ವಿವಿಧ ಮೂಲಗಳಿಂದ ಆರ್ಥಿಕ ಸಂಪನ್ಮೂಲ ಸಂಗ್ರಹಿಸಿ, ವಿವಿಧ ಮೃಗಾಲಯಗಳ ನಿರ್ವಹಣೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಪಕ್ಷದ ಸಂಘಟನೆಯಲ್ಲೂ ಅವಿರತವಾಗಿ ದುಡಿಯುತ್ತಿದ್ದ ಇವರನ್ನು ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಮೈಸೂರು ಬಿಷಪ್ ಕೆ.ಎ.ವಿಲಿಯಂ ರಾಜೀನಾಮೆ

ಮೈಸೂರು,ಜ.14(ಎಂಕೆ)– ಮೈಸೂರು ಧರ್ಮಕ್ಷೇತ್ರ, ಧರ್ಮ ಸಭೆ ಹಾಗೂ ಕ್ರೈಸ್ತ ಸಮುದಾಯದ ಒಳಿತಿಗಾಗಿ ಮೈಸೂರು ಬಿಷಪ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ನಿರ್ಗಮಿತ ಮೈಸೂರು ಬಿಷಪ್ ಕೆ.ಎ.ವಿಲಿಯಂ ಸ್ಪಷ್ಟಪಡಿಸಿದರು.

ನಗರದ ಬಿಷಪ್ ಹೌಸ್‌ನಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಮೈಸೂರು ಧರ್ಮ ಕ್ಷೇತ್ರದಲ್ಲಿ ಹುಟ್ಟಿ ಬೆಳೆದು, ಧರ್ಮ ಗುರುವಾಗಿ ಸೇವೆ ಮಾಡುವ ಅವಕಾಶ ದೇವರು ಕರುಣಿಸಿದ್ದರು. ನನ್ನ ಕೈಲಾದಷ್ಟು ಸೇವೆಯನ್ನು ಎಲ್ಲರ ಬೆಂಬಲದೊಂದಿಗೆ ಮಾಡಿದ್ದೇನೆ. ಸಮಾಜ ಎಂದ ಮೇಲೆ ಜನರ ದಿಕ್ಕು ತಪ್ಪಿಸುವವರು ಇದ್ದೇ ಇರುತ್ತಾರೆ. ಇಲ್ಲ–ಸಲ್ಲದ ವಿಷಯಗಳನ್ನು ಹೇಳುವುದು, ವಿಷಯವೇ ಗೊತ್ತಿಲ್ಲದೆ ಜನರನ್ನು ದಿಕ್ಕು ತಪ್ಪಿಸಲಾಗುತ್ತಿದೆ. ಎಲ್ಲಾ ಆರೋಪಗಳಿಂದ ಮುಕ್ತನಾಗಿದ್ದು, ವಿಶಾಲ ಅಖಿಲ ಧರ್ಮ ಕ್ಷೇತ್ರದಲ್ಲಿ ●9ನೇ ಪುಟಕ್ಕೆ



ಮೈಸೂರು ನಗರದಲ್ಲಿರುವ ಬಿಷಪ್ ಹೌಸ್‌ನಲ್ಲಿ ಭಾನುವಾರ ನಿರ್ಗಮಿತ ಮೈಸೂರು ಬಿಷಪ್ ಕೆ.ಎ.ವಿಲಿಯಂ ಸುದ್ದಿಗೋಷ್ಠಿ ನಡೆಸಿದರು. ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷ ಮ್ಯಾಥ್ಯೂ ಬೆಂಜಮಿನ್ ಸುರೇಶ್, ಮೈಸೂರು ಕ್ಯಾಥೋಲಿಕ್ ಅಸೋಸಿಯೇಷನ್‌ನ ಕಾರ್ಯದರ್ಶಿ ಪ್ರೇಮಾನಂದ್ ಡಿ ಮೆಲ್ಲೋ ಇನ್ನಿತರರಿದ್ದರು.

> ❝ ಮೈಸೂರು ಧರ್ಮಕ್ಷೇತ್ರದಲ್ಲಿ ಸೇವೆ ಮಾಡಲು ಅವಕಾಶ ಮಾಡಿಕೊಟ್ಟ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಈಗ ಒಂದು ಧರ್ಮ ಕ್ಷೇತ್ರಕ್ಕೆ ಸೀಮಿತನಾಗಿದ್ದ ನನಗೆ ವಿಶಾಲ ಅಖಿಲ ಧರ್ಮ ಸಭೆಗೆ ಸೇವೆ ಮಾಡುವ ಭಾಗ್ಯ ದೊರೆತಿದೆ. ದೇವರಿಗೆ ಎಲ್ಲವೂ ಗೊತ್ತಿದೆ. ದೇವರಲ್ಲಿ ನಂಬಿಕೆ ಇಟ್ಟು ಬಾಳಬೇಕು. ನನ್ನಲ್ಲಿ ಸತ್ಯ ಇರುವುದರಿಂದಲೇ ಇಂದು ಎಲ್ಲರ ಮುಂದಿದ್ದೇನೆ. ಪ್ರೀತಿ, ಕ್ಷಮೆ, ಕರುಣೆ, ಸಹನೆ ಎಂಬುದು ಕ್ರೈಸ್ತ ಧರ್ಮದಲ್ಲಿದೆ. ಅದನ್ನು ಜಾರಿಗೆ ತರುವುದು ಮುಖ್ಯ. ದ್ವೇಷಕ್ಕೆ ಪ್ರತಿಯಾಗಿ ದ್ವೇಷ ಮಾಡುವುದು ಸರಿಯಲ್ಲ. ಈ ಲೋಕದಲ್ಲಿ ನಾವುಗಳಿರುವುದು ಎಷ್ಟು ದಿನಗಳು... ಇಲ್ಲಿ ಸೋಲು ಎಂಬುದು ಬರುವುದಿಲ್ಲ. – ಕೆ.ಎ.ವಿಲಿಯಂ, ನಿರ್ಗಮಿತ ಮೈಸೂರು ಬಿಷಪ್

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ವಿದ್ಯುತ್ ಕಂಬಗಳ ನಿರ್ವಹಣೆಗೆ ಸೆಸ್ಕ್ ಮೊರೆ ಹೋದ ಹೆದ್ದಾರಿ ಪ್ರಾಧಿಕಾರ

ವಿದ್ಯುತ್ ಕಂಬಗಳ ಕಂಬಿ ಕಳವು ಪ್ರಕರಣದಿಂದ ತತ್ತರಿಸಿದ ಹೆದ್ದಾರಿ ಪ್ರಾಧಿಕಾರ

ಮೈಸೂರು,ಜ.14(ಎಂಟಿವೈ)–ಮಂಡ್ಯದ ರಾಗಿ ಮುದ್ದನಹಳ್ಳಿ ಬಳಿ ಮೈಸೂರು–ಬೆಂಗಳೂರು ನಡುವಿನ 'ಎಕ್ಸ್‌ಪ್ರೆಸ್ ವೇ'ನಲ್ಲಿ ಅಳವಡಿಸಿದ್ದ ವಿದ್ಯುತ್ ಕಂಬ ಉರುಳಿ ಬಿದ್ದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್‌ಹೆಚ್‌ಎಐ), ಹೆದ್ದಾರಿಯಲ್ಲಿರುವ ವಿದ್ಯುತ್ ಕಂಬಗಳ ನಿರ್ವಹಣೆ ಮಾಡುವಂತೆ ಸೆಸ್ಕ್ ಮೊರೆ ಹೋಗಲು ನಿರ್ಧರಿಸಿದೆ.

ನೂತನವಾಗಿ ನಿರ್ಮಿಸಿರುವ 'ಎಕ್ಸ್‌ಪ್ರೆಸ್ ವೇ'ನಲ್ಲಿ ಎರಡೂ ಬದಿಯಲ್ಲಿ ಅಳವಡಿಸಿರುವ ವಿದ್ಯುತ್ ಕಂಬಗಳ ಸಪೋರ್ಟಿಂಗ್ ಕಬ್ಬಿಣದ ರಾಡ್‌ಗಳನ್ನು ಕಳ್ಳತನ ಮಾಡಲಾಗುತ್ತಿದ್ದು, ಅದನ್ನು ತಡೆಗಟ್ಟಲು ಹೆದ್ದಾರಿ ಪ್ರಾಧಿಕಾರಕ್ಕೆ ಸಾಧ್ಯವಾಗುತ್ತಿಲ್ಲ. ಇದರಿಂದ ಎಕ್ಸ್‌ಪ್ರೆಸ್ ವೇನಲ್ಲಿರುವ ವಿದ್ಯುತ್ ಕಂಬಗಳು ಅಭದ್ರತೆಯಿಂದ ಕೂಡಿದ್ದು, ವಾಹನ ಸವಾರರಿಗೆ ಆತಂಕವನ್ನುಂಟು ಮಾಡುತ್ತಿವೆ. ಮಂಡ್ಯ ಜಿಲ್ಲೆಯ ರಾಗಿಮುದ್ದನಹಳ್ಳಿ ಬಳಿ ಕಳೆದ ಶುಕ್ರವಾರ 'ಎಕ್ಸ್‌ಪ್ರೆಸ್ ವೇ'ನಲ್ಲಿ ರಸ್ತೆ ಬದಿ ಅಳವಡಿಸಿದ್ದ ವಿದ್ಯುತ್ ಕಂಬ ಧರೆಗುರುಳಿತ್ತು. ಇದರಿಂದ ಬೈಕ್ ಸವಾರರೊಬ್ಬರು ಗಾಯಗೊಂಡಿದ್ದರು. ರಾಗಿ ಮುದ್ದನಹಳ್ಳಿ ಬಳಿ ●9ನೇ ಪುಟಕ್ಕೆ



ಮೈಸೂರು–ಬೆಂಗಳೂರು 'ಎಕ್ಸ್‌ಪ್ರೆಸ್ ವೇ'ನಲ್ಲಿ ಅಳವಡಿಸಿದ್ದ ವಿದ್ಯುತ್ ಕಂಬ ಉರುಳಿ ಬಿದ್ದಿರುವುದು.

> ❝ ಎಕ್ಸ್‌ಪ್ರೆಸ್ ವೇನಲ್ಲಿರುವ ವಿದ್ಯುತ್ ಕಂಬಗಳ ನಿರ್ವಹಣೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸೆಸ್ಕ್‌ಗೆ ಮನವಿ ಮಾಡಿದೆ. ಹೆದ್ದಾರಿಯಲ್ಲಿರುವ ವಿದ್ಯುತ್ ಕಂಬಗಳ ನಿರ್ವಹಣೆಯನ್ನು ಆರಂಭದ ಒಂದು ವರ್ಷ ಹೆದ್ದಾರಿ ಪ್ರಾಧಿಕಾರವೇ ಮಾಡಬೇಕಾದ ನಿಯಮವಿದೆ. ಈ ಹಿನ್ನೆಲೆಯಲ್ಲಿ ಇದುವರೆಗೂ ಸೆಸ್ಕ್ ವ್ಯಾಪ್ತಿಗೆ ಎಕ್ಸ್‌ಪ್ರೆಸ್ ವೇನಲ್ಲಿರುವ ವಿದ್ಯುತ್ ಕಂಬಗಳ ನಿರ್ವಹಣೆ ಒಳಪಟ್ಟಿಲ್ಲ. ಈ ಸಂಬಂಧ ಪತ್ರ ವ್ಯವಹಾರ ನಡೆಸಲಾಗಿದೆ. ಕಂಬಗಳ ದುರಸ್ತಿಗೆ ಬೇಕಾದ ಹಣವನ್ನು ಹೆದ್ದಾರಿ ಪ್ರಾಧಿಕಾರ ಭರಿಸಲಿದೆ. –ಸೋಮಶೇಖರ್, ಇಇ, ಸೆಸ್ಕ್ ಮಂಡ್ಯ ವಿಭಾಗ.

ಎಕ್ಸ್‌ಪ್ರೆಸ್ ವೇನಲ್ಲಿ ಇಬ್ಬರ ದುರ್ಮರಣ



ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಜಖಂಗೊಂಡ ಕಾರನ್ನು ಸ್ಥಳಾಂತರಿಸುತ್ತಿರುವುದು.

ಮದ್ದೂರು, ಜ.14– ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ ಹೊಡೆದು ಸಂಭವಿಸಿದ ಭೀಕರ ಅಪಘಾತದಲ್ಲಿ ಇಬ್ಬರು ಮೃತಪಟ್ಟು, ಮತ್ತೋರ್ವ ತೀವ್ರ ಗಾಯಗೊಂಡಿರುವ ಘಟನೆ ಪಟ್ಟಣದ ಹೊರವಲಯದ ಕೆ.ಕೋಡಿಹಳ್ಳಿ ಸಮೀಪದ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಭಾನುವಾರ ಮುಂಜಾನೆ ಸಂಭವಿಸಿದೆ.

ಕಾರು ಡಿಕ್ಕಿ ಹೊಡೆದ ರಭಸಕ್ಕೆ ಹೆದ್ದಾರಿಯಲ್ಲಿ ಅಳವಡಿಸಿದ್ದ ಒಂದು ಲಕ್ಷ ರೂ. ಮೌಲ್ಯದ ಸಿಸಿ ಕ್ಯಾಮರಾ ಧ್ವಂಸಗೊಂಡಿದೆ ಅಲ್ಲದೆ ಹಲವು ಪೊಲೀಸ್ ಬ್ಯಾರಿಕೇಡ್‌ಗಳು ಜಖಂಗೊಂಡಿವೆ.

ಬೆಂಗಳೂರಿನ ಜೆ.ಪಿ. ನಗರದಲ್ಲಿರುವ ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿಯ ರೀಜನಲ್ ●9ನೇ ಪುಟಕ್ಕೆ

ಜಿಲ್ಲೆಯಲ್ಲಿ ಕಳೆಗಟ್ಟಿದ ಸುಗ್ಗಿ ಸಂಭ್ರಮ

ಮಕರ ಸಂಕ್ರಾಂತಿ ಸ್ವಾಗತಕ್ಕೆ ಸಕ್ಕರೆ ನಾಡು ಸಜ್ಜು




ಸಂಕ್ರಾಂತಿ ಹಬ್ಬದ ಅಂಗವಾಗಿ ಸಾರ್ವಜನಿಕರು ಎಳ್ಳು, ಬೆಲ್ಲ ಖರೀದಿಯಲ್ಲಿ ಮುಂದಾಗಿರುವುದು.

ಮಂಡ್ಯ, ಜ.14– ರೈತಾಪಿ ಜನರೇ ಹೆಚ್ಚಿರುವ ಸಕ್ಕರೆನಾಡು ಮಂಡ್ಯ ಜಿಲ್ಲೆಯಲ್ಲಿ ವರ್ಷದ ಮೊದಲ ಹಬ್ಬ, ರೈತರ ಹಬ್ಬವೆಂದೇ ಕರೆಯಲ್ಪಡುವ ಸಂಕ್ರಾಂತಿ ಸ್ವಾಗತಕ್ಕೆ ಜಿಲ್ಲೆಯ ಜನರು ಸಜ್ಜಾಗಿದ್ದಾರೆ.

ಬರದ ನಡುವೆಯೂ ಸಂಕ್ರಾಂತಿ ಹಬ್ಬ ಆಚರಣೆಗೆ ಜನರು ಸಿದ್ಧತೆ ನಡೆಸಿದ್ದು, ಇದರ ಭಾಗವಾಗಿ ಮಾರುಕಟ್ಟೆಗಳಲ್ಲಿ ಹೂ, ಹಣ್ಣು, ಕಬ್ಬು, ಇನ್ನಿತರೆ ವಸ್ತುಗಳನ್ನು ಖರೀದಿಸಲು ಜನ ಮುಗಿಬೀಳುತ್ತಿದ್ದ ದೃಶ್ಯ ಕಂಡು ಬಂತು.

ಸಂಕ್ರಾಂತಿ ಹಿನ್ನಲೆಯಲ್ಲಿ ನಗರ ಪ್ರದೇಶದ ಜನರು ಸಾಮಾಗ್ರಿಗಳನ್ನು ಖರೀದಿಸಿ ಮನೆ ಆವರಣವನ್ನು ತೋರಣಗಳಿಂದ ಅಲಂಕರಿಸಿ, ಎಳ್ಳು– ಬೆಲ್ಲ ಬೀರಲು ಸಿದ್ಧತೆ ನಡೆಸುತ್ತಿದ್ದರೆ, ಹಳ್ಳಿ ಪ್ರದೇಶದ ಜನ ಭತ್ತ, ಕಬ್ಬನ್ನು ಕಟಾವು ಮಾಡಿ, ರಾಶಿ ಪೂಜೆ, ನೇಗಿಲು ಪೂಜೆಯಿಂದ ಹಿಡಿದು, ಎಳ್ಳು–ಬೆಲ್ಲ ಹಂಚುವ ಜೊತೆಗೆ ಜಾನುವಾರು ಕಿಚ್ಚು ಹಾಯಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಇಂದು (ಸೋಮವಾರ) ಹಬ್ಬ ಇರುವುದರಿಂದ ಮಧ್ಯಾಹ್ನದವರೆಗೂ ಹಬ್ಬ ಆಚರಿಸಿ, ನಂತರ ಜಾನುವಾರುಗಳನ್ನು ತೊಳೆದು ಅಲಂಕಾರ ಮಾಡಿ, ಅವುಗಳನ್ನು ಸಂಜೆ ವೇಳೆಗೆ ಕಿಚ್ಚು ಹಾಯಿಸಿ, ಸಂಭ್ರಮಿಸಲು ಜನ ಕಾಯುತ್ತಿದ್ದಾರೆ.

ಮನೆಯ ಹಿರಿಯರು ಪೂಜೆ, ಪುನಸ್ಕಾರ, ರಾಶಿ ಪೂಜೆಯಲ್ಲಿ ತೊಡಗಿಕೊಂಡರೆ ಯುವತಿಯರು ಮತ್ತು ಮಕ್ಕಳು ಹೊಸ ಬಟ್ಟೆ ತೊಟ್ಟು ಮನೆ ಮನೆಗೆ ತೆರಳಿ ಎಳ್ಳು–ಬೆಲ್ಲ ಬೀರಲು ಸಜ್ಜಾಗಿದ್ದಾರೆ. ಇತ್ತ ಯುವಕರು ಮಾತ್ರ ಗ್ರಾಮೀಣ ಪ್ರದೇಶದಲ್ಲಿ ತಮ್ಮ ಜಾನುವಾರುಗಳು ಹಾಗೂ ನಗರ ಪ್ರದೇಶದಲ್ಲಿ ಸಾವಿರಾರು ರೂ. ಕೊಟ್ಟು ಗೂಳಿಗಳನ್ನು ಖರೀದಿಸಿ ಇಲ್ಲವೇ ಬಿಡಾಡಿ ದನಗಳಿಗೆ ಅಲಂಕಾರ ಮಾಡಿ, ವಿಜೃಂಭಣೆಯಿಂದ ಕಿಚ್ಚು ಹಾಯಿಸಲು ಸಜ್ಜಾಗಿದ್ದಾರೆ.

ಮತ್ತೊಂದೆಡೆ ಮಂಡ್ಯ ನಗರದಲ್ಲಿ ಜಾನುವಾರುಗಳನ್ನು ಕಿಚ್ಚು ಹಾಯಿಸಲು ಸರ್‌ಎಂವಿ ಕ್ರೀಡಾಂಗಣದಲ್ಲಿ ಸಿದ್ಧತೆ ನಡೆಸಲಾಗುತ್ತಿದೆ. ಮತ್ತೊಂದೆಡೆ ನಾಳೆ ಸೋಮವಾರವಾಗಿರುವುದರಿಂದ ಕೆಲವರು ಮಂಗಳವಾರ ಕಿಚ್ಚು ಹಾಯಿಸುವ ಕಾರ್ಯ ಮಾಡಲಿದ್ದಾರೆ. ಮಂಡ್ಯದ ವಿವಿಧ ದೇಗುಲಗಳಲ್ಲೂ ಸಂಕ್ರಾಂತಿ ಹಿನ್ನಲೆಯಲ್ಲಿ ವಿಶೇಷ ಪೂಜೆ, ಪುನಸ್ಕಾರಗಳನ್ನು ಹಮ್ಮಿಕೊಂಡಿದ್ದು, ನಾಳೆ ಶ್ರದ್ಧಾ, ಭಕ್ತಿಯಿಂದ ವಿವಿಧ ಪೂಜೆ, ಪುನಸ್ಕಾರಗಳು ನೆರವೇರಲಿವೆ.

ಮಕ್ಕಳಲ್ಲಿ ನೈತಿಕ ಶಿಕ್ಷಣ, ಮೌಲ್ಯಗಳನ್ನು ಬೆಳೆಸಬೇಕು

ಶೈಕ್ಷಣಿಕ ಸಮಾಲೋಚನಾ ಸಭೆಯಲ್ಲಿ ಡಿಡಿಪಿಐ ಶಿವರಾಮೇಗೌಡ



ಮೂಡಲಕೊಪ್ಪಲು ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಶೈಕ್ಷಣಿಕ ಸಮಾಲೋಚನಾ ಸಭೆಯನ್ನು ಡಯಟ್ ಪ್ರಾಂಶುಪಾಲ ಪುರುಷೋತ್ತಮ್ ಉದ್ಘಾಟಿಸಿದರು.

ಪಾಂಡವಪುರ, ಜ.14– ಶಿಕ್ಷಣದ ಜೊತೆಗೆ ಮಕ್ಕಳಲ್ಲಿ ನೈತಿಕ ಶಿಕ್ಷಣ, ಮೌಲ್ಯಗಳನ್ನು ಬೆಳೆಸಬೇಕು ಎಂದು ಡಿಡಿಪಿಐ ಶಿವರಾಮೇಗೌಡ ತಿಳಿಸಿದರು.

ತಾಲೂಕಿನ ಮೂಡಲಕೊಪ್ಪಲು ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ 2023–24ನೇ ಸಾಲಿನ ಶೈಕ್ಷಣಿಕ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ಶಿಕ್ಷಕರು ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಅಲ್ಲದೇ ಉತ್ತಮ ಫಲಿತಾಂಶ ನೀಡುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕು. ಮಕ್ಕಳ ಕಲಿಕೆ ಹಂತಗಳನ್ನು ಗುರುತಿಸಿ ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ಹೆಚ್ಚು ಅಭ್ಯಾಸಗಳನ್ನು ಮಾಡಿಸಿ ಮಕ್ಕಳು ಅನುತೀರ್ಣರಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತೀರ್ಣರಾದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮೊಟಕುಗೊಳಿಸುವ ಸಾಧ್ಯತೆ ಇರುತ್ತದೆ. ಹೀಗಾಗಿ ಶಾಲೆಗಳಲ್ಲಿ ಪೋಷಕರ ಸಭೆ ನಡೆಸಿ ಮನೆಗಳಲ್ಲೂ ಸಹ ಮಕ್ಕಳು ನಿರಂತರವಾಗಿ ಕಲಿಕಾ ಅಭ್ಯಾಸ ನಡೆಸುವಂತೆ ಸಲಹೆ ನೀಡಬೇಕು. ಶಾಲೆಗಳಲ್ಲಿ ಕಿರು ಪರೀಕ್ಷೆ ನಡೆಸುವ ಮೂಲಕ ವಿದ್ಯಾರ್ಥಿಗಳು ಧೈರ್ಯವಾಗಿ ಪರೀಕ್ಷೆ ಎದುರಿಸುವ ಸಾಮರ್ಥ್ಯ ಬೆಳೆಸಬೇಕು ಎಂದರು.

ವಿದ್ಯಾರ್ಥಿಗಳಿಗೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಯೂ ಮುಖ್ಯ. ಶಿಕ್ಷಣದ ಜೊತೆಗೆ ಮಕ್ಕಳಲ್ಲಿ ನೈತಿಕ ಶಿಕ್ಷಣ, ಮೌಲ್ಯಗಳನ್ನು ಬೆಳೆಸಬೇಕು. ಕೇವಲ ಅಂಕಗಳಿಸುವುದು ಮುಖ್ಯವಲ್ಲ. ಸಮಾಜದಲ್ಲಿ ಉತ್ತಮ ನಾಗರಿಕನಾಗಿ ಬದುಕುವುದು ಮುಖ್ಯವಾಗುತ್ತದೆ ಎಂದರು.

ಡಯಟ್ ಪ್ರಾಂಶುಪಾಲ ಪುರುಷೋತ್ತಮ್ ಮಾತನಾಡಿ, ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು. ಪ್ರತಿಯೊಬ್ಬ ಶಿಕ್ಷಕರು ಇಲಾಖೆಯ ಕೆಲಸ ಕಾರ್ಯಗಳನ್ನು ಉತ್ತಮವಾಗಿ ಮಾಡುವ ಮೂಲಕ ಗುರಿ ಸಾಧನೆಯತ್ತ ಮುನ್ನಡೆಯಬೇಕು ಎಂದರು.

ನಿವೃತ್ತ ಜಂಟಿ ನಿರ್ದೇಶಕ ಮರಿಸ್ವಾಮೀಗೌಡ ಮಾತನಾಡಿ, ಪ್ರತಿಯೊಬ್ಬ ಶಿಕ್ಷಕರು ಇಲಾಖೆಗಳ ಮಾರ್ಗಸೂಚಿ, ಸುತ್ತೋಲೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಕೆಲಸ ಮಾಡಬೇಕು. ಜೊತೆಗೆ 1–10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೂ ಸಿಇಟಿ, ನೀಟ್, ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರಕವಾದ ಶಿಕ್ಷಣ ನೀಡಬೇಕು ಎಂದರು.

ಬಿಇಓ ಬಿ.ಚಂದ್ರಶೇಖರ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಭಯ ಹೋಗಲಾಡಿಸಬೇಕು. ಹಲವಾರು ವರ್ಷಗಳ ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಅಧ್ಯಯನ ಮಾಡಿಸಿ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಬೇಕು ಎಂದರು.

ಇದೇ ವೇಳೆ ರಾಮನಗರ ಡಯಟ್ ಉಪನ್ಯಾಸಕ ಕೆ.ಪಿ.ಬಾಬು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಬಿಆರ್‌ಸಿ ಪ್ರಕಾಶ್, ನಿವೃತ್ತ ಪ್ರಾಧ್ಯಾಪಕ ಡಾ.ಹೆಚ್.ಆರ್.ತಿಮ್ಮೇಗೌಡ, ಮುಖ್ಯಶಿಕ್ಷಕ ಲಿಂಗರಾಜು, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಮರಿಸ್ವಾಮೀಗೌಡ, ಸಹ ಶಿಕ್ಷಕ ಸಂಘದ ನಾಗೇಗೌಡ, ತಾಲೂಕು ಅಧ್ಯಕ್ಷ ಕೇಶವಮೂರ್ತಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಜಯರಾಮು, ಮುಖ್ಯಶಿಕ್ಷಕ ಸಂಘದ ಅಧ್ಯಕ್ಷ ರಮೇಶ್, ಉಪಾಧ್ಯಕ್ಷ ಮಹದೇವಪ್ಪ ಎಸ್‌ಡಿ ಎಂಸಿ ಅಧ್ಯಕ್ಷ ವೆಂಕಟೇಶ್, ವಿಜಿಕುಮಾರ್ ಇನ್ನಿತರರಿದ್ದರು.

ಸಮಾಲೋಚಕ ಹುದ್ದೆಗೆ ಅರ್ಜಿ ಆಹ್ವಾನ

ಮಂಡ್ಯ, ಜ.14– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಯುವಸ್ಪಂದನ ಕೇಂದ್ರದಲ್ಲಿ ಯುವ ಪರಿವರ್ತಕ ಹಾಗೂ ಯುವ ಸಮಾಲೋಚಕರಾಗಿ ಕಾರ್ಯ ನಿರ್ವಹಿಸಲು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಸ್ವವಿವರಗಳನ್ನೊಳಗೊಂಡ ಅರ್ಜಿಯನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಜ.19 ಕೊನೆ ದಿನ.

ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುರ್ಜರ್‌ಗೆ ಕಾಂಗ್ರೆಸ್ ಟೀಕಿಸುವ ನೈತಿಕತೆ ಇಲ್ಲ



ಮಂಡ್ಯ, ಜ.14– ಕಳೆದ 4 ವರ್ಷಗಳಿಂದ ಜಿಲ್ಲಾ ಬಿಜೆಪಿ ಉಸ್ತುವಾರಿ ವಹಿಸಿಕೊಂಡಿದ್ದ ಕೇಂದ್ರ ಕೈಗಾರಿಕಾ ಸಚಿವ ಕಿಶನ್‌ಪಾಲ್ ಗುರ್ಜರ್ ಅವರು ಕನಿಷ್ಠ 10 ಬಾರಿ ಮಂಡ್ಯ ಜಿಲ್ಲೆಗೆ ಭೇಟಿ ನೀಡಿದ್ದು, ಕೇವಲ ಕಾಂಗ್ರೆಸ್ ಪಕ್ಷದ ಟೀಕೆಗೆ ಸೀಮಿತವಾಗಿದ್ದರೆ ಹೊರತು ತಮ್ಮ ಇಲಾಖೆಯಿಂದ ಜಿಲ್ಲೆಗೆ ಒಂದೇ ಒಂದು ಕಾರ್ಖಾನೆ ತಂದು ಜಿಲ್ಲೆಯ ನಿರುದ್ಯೋಗ ಸಮಸ್ಯೆ ನಿವಾರಿಸಲು ಮುಂದಾಗಲಿಲ್ಲ. ಇಂತಹ ವ್ಯಕ್ತಿಗೆ ಕಾಂಗ್ರೆಸ್ ಪಕ್ಷ ಟೀಕಿಸಲು ಯಾವುದೇ ನೈತಿಕತೆ ಇಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಕಿಡಿಕಾರಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, 2 ದಿನಗಳ ಕಾಲ ಮಂಡ್ಯ ಪ್ರವಾಸ ಹಮ್ಮಿಕೊಂಡಿದ್ದ ಸಚಿವ ಗುರ್ಜರ್ ದೇಶಕ್ಕೆ ಮೋದಿಯೇ ಗ್ಯಾರಂಟಿ ಎಂದಿದ್ದಾರೆ. 2014ರಲ್ಲಿ ಅಧಿಕಾರಕ್ಕೆ ಬರಲು ಮೋದಿ ನೀಡಿದ ಗ್ಯಾರಂಟಿ ನಕಲಿ ಎಂಬುದು ಜನರಿಗೆ ತಿಳಿದಿದೆ. ವಿದೇಶದಿಂದ ಕಪ್ಪು ಹಣ ತಂದು ಪ್ರತಿಯೊಬ್ಬರ ಅಕೌಂಟಿಗೆ 15 ಲಕ್ಷ ಹಾಕುವುದಾಗಿ ಹೇಳಿದ್ದರು. 2 ಕೋಟಿ ಉದ್ಯೋಗ ಸೃಷ್ಟಿಸುತ್ತೇನೆ ಎಂದು ಹೇಳಿದ್ದರು. ಆದರೆ ಅವರ ಗ್ಯಾರಂಟಿಗೂ ರಾಜ್ಯದಲ್ಲಿ ಕಾಂಗ್ರೆಸ್ ಕೊಟ್ಟ ಗ್ಯಾರಂಟಿಗಳಿಗೂ ಬಹಳ ವ್ಯತ್ಯಾಸವಿದೆ ಎಂದಿದ್ದಾರೆ. ಜೆಡಿಎಸ್–ಬಿಜೆಪಿ ಮೈತ್ರಿಯಿಂದ ಕಾಂಗ್ರೆಸ್‌ಗೆ ಯಾವುದೇ ತೊಂದರೆ ಇಲ್ಲ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕೇವಲ ಓಟ್ ಬ್ಯಾಂಕ್ ಗಿಮಿಕ್ ಆಗಿದ್ದು, ಕಾಂಗ್ರೆಸ್ ಪಕ್ಷ ಎಂದೂ ಧರ್ಮದ ಆಧಾರದಲ್ಲಿ ರಾಜಕಾರಣ ಮಾಡುವುದಿಲ್ಲ. ಮಂಡ್ಯ ಜಿಲ್ಲೆಗೆ ಬಂದು ಧರ್ಮ ಧರ್ಮಗಳ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿರುವ ಕೇಂದ್ರ ಸಚಿವ ಗುರ್ಜರ್ ಕ್ಷಮೆಯಾಚಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಪುಸ್ತಕ ಬಹುಮಾನಕ್ಕಾಗಿ ಅರ್ಜಿ ಆಹ್ವಾನ

ಮಂಡ್ಯ, ಜ.14– ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರತಿ ವರ್ಷದಂತೆ 2022ನೇ ಸಾಲಿನ ಪುಸ್ತಕ ಬಹುಮಾನಕ್ಕಾಗಿ ಅರ್ಜಿ ಆಹ್ವಾನಿಸಿದೆ. ಪ್ರತಿ ಪ್ರಕಾರದಲ್ಲಿ ವಿಮರ್ಶಕರು ಆಯ್ಕೆ ಮಾಡುವ ಒಂದು ಕೃತಿಗೆ ಬಹುಮಾನ ನೀಡಲಾಗುವುದು. ಬಹುಮಾನಕ್ಕೆ ಸಲ್ಲಿಸುವ ಕೃತಿಗಳು 2022ರ ಜ.1ರಿಂದ 2022ರ ಡಿ.31ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರುವ ಕೃತಿಗಳಾಗಿರಬೇಕು. ಕೃತಿಯಲ್ಲಿ ಪ್ರಥಮ ಮುದ್ರಣ 2022 ಎಂದು ಮುದ್ರಿತವಾಗಿರಬೇಕು.

ಅರ್ಜಿ ಸಲ್ಲಿಸಲು ಪ್ರಕಟವಾದ ಪುಸ್ತಕಗಳ ತಲಾ 4 ಪ್ರತಿಗಳನ್ನು ರಿಜಿಸ್ಟ್ರಾರ್ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ ಬೆಂಗಳೂರು–56002 ಇಲ್ಲಿಗೆ ರಿಜಿಸ್ಟರ್ ಅಂಚೆ ಕೊರಿಯರ್ ಮೂಲಕ ಅಥವಾ ಖುದ್ದಾಗಿ ಸಲ್ಲಿಸಬೇಕಾಗಿದ್ದು, ಫೆ.20 ಕೊನೆ ದಿನ ಎಂದು ರಿಜಿಸ್ಟರ್ ಎನ್.ಕರಿಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪ್ರಾಪ್ತ ಬಾಲಕಿ ಅಪಹರಣ: ಯುವಕ ಬಂಧನ

ಲವ್ ಜಹಾದ್ ಎಂದು ಆರೋಪಿಸಿ ಹಿಂದೂ ಸಂಘಟನೆಗಳ ಪ್ರತಿಭಟನೆ



ಕೆ.ಆರ್.ಪೇಟೆ, ಜ.14– ಅಪ್ರಾಪ್ತ ಬಾಲಕಿಯನ್ನು ಅಪಹರಿಸಿದ್ದ ಪ್ರಕರಣದಲ್ಲಿ ಕೆ.ಆರ್.ಪೇಟೆ ಪೊಲೀಸರು ಯುವಕನನ್ನು ಬಂಧಿಸಿದ್ದು, ಇದೊಂದು ಲವ್ ಜಹಾದ್ ಪ್ರಕರಣ ಎಂದು ಆರೋಪಿಸಿ ಹಿಂದೂ ಪರ ಸಂಘಟನೆಗಳು ಪೊಲೀಸ್ ಠಾಣೆಯ ಮುಂದೆ ಭಾನುವಾರ ರಾತ್ರಿ ಪ್ರತಿಭಟನೆ ನಡೆಸಿದವು.

ಕೆ.ಆರ್.ಪಟ್ಟಣದ ನಿವಾಸಿಯಾಗಿರುವ ಕೋಳಿ ಅಂಗಡಿಯಲ್ಲಿ ಕೆಲಸ ಮಾಡುವ ಸಯ್ಯದ್ ನಾಸೀರ್(21) ಬಂಧಿತನಾಗಿದ್ದು, ಈತನಿಂದ ಅಪಹರಣಕ್ಕೊಳಗಾಗಿದ್ದಳು ಎನ್ನಲಾದ ಬಾಲಕಿಯನ್ನು ಸಾಂತ್ವಾನ ಕೇಂದ್ರಕ್ಕೆ ಕಳುಹಿಸಲಾಗಿದೆ.

ವಿವರ: ಕೆ.ಆರ್.ಪೇಟೆ ಪಟ್ಟಣದ ಅಪ್ರಾಪ್ತ ಬಾಲಕಿ ಜ.12ರಂದು ನಾಪತ್ತೆಯಾಗಿದ್ದು, ಈ ಸಂಬಂಧ ಆಕೆಯ ತಾಯಿ ಪೊಲೀಸರಿಗೆ ಅದೇ ದಿನ ದೂರು ಸಲ್ಲಿಸಿದ್ದರು. ಅಪ್ರಾಪ್ತ ಬಾಲಕಿಯರು ನಾಪತ್ತೆಯಾದರೂ ಕೂಡ ಅಪಹರಣ ಪ್ರಕರಣ ದಾಖಲಿಸಬೇಕೆಂಬ ಸುಪ್ರೀಂ ಕೋರ್ಟ್ ಆದೇಶದನ್ವಯ ಪೊಲೀಸರು ಅಪಹರಣ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದರು.

ಈ ಬಾಲಕಿಯು ಸಯ್ಯದ್ ನಾಸೀರ್ ಜೊತೆ ಚಿಕ್ಕಬಳ್ಳಾಪುರದಲ್ಲಿ ಇರುವುದರ ಬಗ್ಗೆ ಮಾಹಿತಿ ಪಡೆದಿದ್ದ ಕೆ.ಆರ್.ಪೇಟೆ ಠಾಣೆಯ ವಿಶೇಷ ಪೊಲೀಸ್ ತಂಡ ಶನಿವಾರ ಚಿಕ್ಕಬಳ್ಳಾಪುರಕ್ಕೆ ತೆರಳಿದ್ದು, ಸಯ್ಯದ್ ನಾಸೀರ್ ಮತ್ತು ಬಾಲಕಿಯನ್ನು ಇಂದು ಕೆ.ಆರ್. ಪೇಟೆಗೆ ಕರೆತಂದರು.

ವಿಷಯ ತಿಳಿಯುತ್ತಿದ್ದಂತೆಯೇ ಠಾಣೆ ಮುಂದೆ ಜಮಾಯಿಸಿದ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಗೆ ಮುಂದಾದರು. ಈ ವೇಳೆ ಮಾತನಾಡಿದ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಕಾರ್ಯದರ್ಶಿ ಬಸವರಾಜ್ ಹೊಸಆನಂದೂರು ಅವರು ಮಂಡ್ಯದಲ್ಲಿ ಹಲವಾರು ಲವ್ ಜಹಾದ್ ಪ್ರಕರಣಗಳು ನಡೆದಿದೆ ಎಂದು ಆರೋಪಿಸಿದರು. ನಮ್ಮ ಹೆಣ್ಣು ಮಕ್ಕಳ ರಕ್ಷಣೆಗಾಗಿ ಬುಧವಾರ ಕೆಆರ್.ಪೇಟೆಯಲ್ಲಿ ವಿಶ್ವ ಹಿಂದೂ ಪರಿಷತ್, ಭಜರಂಗ ದಳ ಜಂಟಿಯಾಗಿ ಸಾರ್ವಜನಿಕರೊಡಗೂಡಿ ಲವ್ ಜಹಾದ್‌ನಿಂದ ಆಗಬಹುದಾದ ಅನಾಹುತದ ಬಗ್ಗೆ ಹೆಣ್ಣು ಮಕ್ಕಳಿಗೆ ಜಾಗೃತಿ ಮೂಡಿಸಲಾಗುವುದು ಎಂದರು. ಈ ಪ್ರಕರಣದಲ್ಲಿ ತಪ್ಪಿತಸ್ಥ ಯುವಕನನ್ನು ಪೋಕ್ಸೋ ಕಾಯ್ದೆಯಡಿ ಬಂಧಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಅಂತರ ಜಿಲ್ಲಾ ಖದೀಮರಿಬ್ಬರ ಬಂಧನ

43.55 ಲಕ್ಷ ರೂ.ಮೌಲ್ಯದ ಚಿನ್ನಾಭರಣ, ಬೆಳ್ಳಿ ಪದಾರ್ಥ ವಶ




ಖದೀಮರಿಂದ ವಶಪಡಿಸಿಕೊಂಡು ಚಿನ್ನಾಭರಣದೊಂದಿಗೆ ಪೊಲೀಸರ ತಂಡ.

ಮೈಸೂರು, ಜ.14(ಎಂಕೆ)– ರಾತ್ರಿ ವೇಳೆ ಮನೆ ಕಳ್ಳತನ ಮಾಡುತ್ತಿದ್ದ ಇಬ್ಬರು ಅಂತರ ಜಿಲ್ಲಾ ಖದೀಮರನ್ನು ಬಂಧಿಸಿರುವ ನರಸಿಂಹರಾಜ ಠಾಣೆ ಪೊಲೀಸರು, ಬಂಧಿತರಿಂದ 43.55 ಲಕ್ಷ ರೂ. ಮೌಲ್ಯದ 700 ಗ್ರಾಂ ಚಿನ್ನಾಭರಣ ಹಾಗೂ 6 ಕೆ.ಜಿ ಬೆಳ್ಳಿ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ರಾಜೀವ್‌ನಗರ 2ನೇ ಹಂತದ ನಿವಾಸಿ ಸೈಯದ್ ಅಯೂಬ್ (31), ಗೌಸಿಯಾನಗರ ಸುಲ್ತಾನ್ ರಸ್ತೆಯ 13ನೇ ಕ್ರಾಸ್ ನಿವಾಸಿ ಮೊಹಮ್ಮದ್ ಮುನ್ನ (36) ಬಂಧಿತ ಆರೋಪಿಗಳು. ಮೈಸೂರು ಸೇರಿದಂತೆ ವಿವಿಧೆಡೆ ರಾತ್ರಿ ವೇಳೆ ಕಳ್ಳತನ ಮಾಡುತ್ತಿದ್ದ ಬಂಧಿತ ಆರೋಪಿಗಳ ವಿರುದ್ಧ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆ, ನಂಜನಗೂಡು ಟೌನ್, ಮೈಸೂರಿನ ಜಯಲಕ್ಷ್ಮಿಪುರಂ, ಚನ್ನರಾಯಪಟ್ಟಣ ಟೌನ್, ದಾವಣಗೆರೆಯ ವಿದ್ಯಾನಗರ ಹಾಗೂ ಕೊಳ್ಳೆಗಾಲ ಟೌನ್ ಪೊಲೀಸ್ ಠಾಣೆಯಲ್ಲಿ ಕಳವು ಪ್ರಕರಣ ದಾಖಲಾಗಿರುವುದು ವಿಚಾರಣೆ ವೇಳೆ ತಿಳಿದು ಬಂದಿದೆ.

ಎನ್‌ಆರ್ ವಿಭಾಗದ ಎಸಿಪಿ ಅಶ್ವಥ್ ನಾರಾಯಣ್ ಮಾರ್ಗದರ್ಶನದಲ್ಲಿ ನರಸಿಂಹರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್ ಕೆ.ತಳವಾರ್, ಪಿಎಸ್‌ಐ ಎಸ್.ಕೆ.ಗಣೇಶ್, ಸಿಬ್ಬಂದಿಗಳಾದ ಟಿ.ಎಂ.ಆದಂ, ಲಿಂಗರಾಜು, ಎಂ.ಮೋಹನ್ ಕುಮಾರ್, ಸಿ.ಸುನೀಲ್ ಕುಮಾರ್, ದೊಡ್ಡೇಗೌಡ, ಕೆ.ಈರೇಶ್, ಸಿ.ಬಸವರಾಜು, ಪರಶುರಾವ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಜ.17ರವರೆಗೆ ಭಾರಿ ರಿಯಾಯಿತಿ ಮಾರಾಟ



ಮೈಸೂರು,ಜ.14(ಪಿಎಂ)– ಮೈಸೂರಿನ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ ಮತ್ತು ವಿನೋಬಾ ರಸ್ತೆಯ ನಂಜರಾಜ ಬಹದ್ದೂರ್ ಛತ್ರದಲ್ಲಿ ನಡೆಯುತ್ತಿರುವ ಬ್ರ್ಯಾಂಡೆಡ್ ಉಡುಪುಗಳ ಸ್ಟಾಕ್ ಕ್ಲಿಯರೆನ್ಸ್ ಮಾರಾಟ ಮೇಳವು ಜ.17ರವರೆಗೆ ನಡೆಯಲಿದ್ದು, ಬೆಳಗ್ಗೆ 10ರಿಂದ ರಾತ್ರಿ 10ರವರೆಗೆ ಗ್ರಾಹಕರು ಭೇಟಿ ನೀಡಬಹುದು.

ಮಹಿಳೆಯರು, ಪುರುಷರು ಮತ್ತು ಮಕ್ಕಳ ಉಡುಪುಗಳ ಖರೀದಿಗೆ ಶೇ.80ರಷ್ಟು ರಿಯಾಯಿತಿ ದೊರೆಯಲಿದೆ. ಫಾರ್ಮಲ್ಸ್, ಕ್ಯಾಶುಯಲ್ ಶರ್ಟ್, ಟಿ–ಶರ್ಟ್, ಜೀನ್ಸ್, ಟಾಪ್ಸ್, ಕುರ್ತಿ, ಸೀರೆ, ಜಾಕೆಟ್, ಒಳ ಉಡುಪುಗಳು, ಪಾದರಕ್ಷೆಗಳು, ಪರಿಕರಗಳು, ಬೆಡ್‌ಶೀಟ್‌ಗಳು ಲಭವಿವೆ ಎಂದು ಪ್ರಕಟಣೆ ತಿಳಿಸಿದೆ.

ಘನತೆಯನ್ನು ಹಾಳು ಮಾಡುವ ದುಶ್ಚಟದಿಂದ ದೂರವಿರಿ

ಬಸವ ಮಾರ್ಗ ಫೌಂಡೇಷನ್‌ನ ಕಾರ್ಯವನ್ನು ಶ್ಲಾಘಿಸಿದ ಗಣ್ಯರು



ಮೈಸೂರಿನ ಬಸವಮಾರ್ಗ ಸಂಸ್ಥೆಯ ಉಚಿತ ಶಿಬಿರದ ಸಮಾರೋಪ ಸಮಾರಂಭಕ್ಕೆ ಭಾನುವಾರ ಶಾಸಕ ಕೆ.ಹರೀಶ್ ಗೌಡ ಚಾಲನೆ ನೀಡಿದರು.

ಮೈಸೂರು, ಜ.14–ಪ್ರತಿಯೊಬ್ಬ ವ್ಯಕ್ತಿಗೂ ಒಂದೊಂದು ಚಟ ಇರುತ್ತದೆ. ಆದರೆ, ಆ ಚಟ ಮತ್ತೊಬ್ಬರಿಗೆ ತೊಂದರೆ ಕೊಡಬಾರದು. ಹಾಗೆ ತೊಂದರೆ ಕೊಟ್ಟರೆ ಅದು ದುಶ್ಚಟವಾಗಿ ಪರಿವರ್ತನೆಯಾಗುತ್ತದೆ ಎಂದು ಕೆ.ಆರ್. ಆಸ್ಪತ್ರೆಯ ಮನೋವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎನ್. ರವೀಶ್ ತಿಳಿಸಿದರು.

ಹೆಬ್ಬಾಳ ರಿಂಗ್ ರಸ್ತೆಯಲ್ಲಿರುವ ಬಸವಮಾರ್ಗ ಫೌಂಡೇಷನ್‌ನಲ್ಲಿ ನಡೆದ 36ನೇ ಉಚಿತ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ದುಶ್ಚಟ ಸಮಾಜದಲ್ಲಿ ನಮ್ಮ ಘನತೆಯನ್ನು ಹಾಳು ಮಾಡಿಬಿಡುತ್ತದೆ. ಹೀಗಾಗಿ ಯಾರೇ ಆಗಲಿ ದುಶ್ಚಟಗಳ ದಾಸರಾಗಬಾರದು. ಇಂದಿನ ಆಧುನಿಕ ಯುಗದಲ್ಲಿ ಹಣ ಸಂಪಾದನೆ, ವಸ್ತುಗಳ ಸಂಗ್ರಹಣೆಗೆ ಹೆಚ್ಚಿನವರು ಬಯಸುತ್ತಿದ್ದಾರೆ. ಆದರೆ ಅವರಿಗೆ ಬದುಕಿನ ಸೌಂದರ್ಯವನ್ನು ಸವಿಯಲು ಸಾಧ್ಯವಾಗುವುದಿಲ್ಲ. ಇದನ್ನು ಬಿಟ್ಟು ಉತ್ತಮ ಜೀವನ ರೂಪಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಬಸವಮಾರ್ಗ ಸಂಸ್ಥೆ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಈ ವೇಳೆ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ವ್ಯಸನಿಗಳು ಬಸವಮಾರ್ಗ ಫೌಂಡೇಷನ್ ಸೇರಿ ಕುಡಿತದಿಂದ ದೂರವಾದ ಬಳಿಕ ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಬೇಕು. ಸಮಾಜ ಮುಖಿಯಾಗಿ ಬದುಕು ಸಾಗಿಸಬೇಕು. ಆಗಲೇ ಬಸವಮಾರ್ಗ ಸಂಸ್ಥೆ ಮತ್ತು ಬಸವರಾಜು ಅವರ ಕಾರ್ಯಕ್ಕೆ ಸಾರ್ಥಕತೆ ಸಿಗುತ್ತದೆ. ಈಗ ನಾಲ್ಕು ವರ್ಷ ಪೂರೈಸಿರುವ ಬಸವಮಾರ್ಗ ಸೂರ್ಯ, ಚಂದ್ರ ಇರುವವರೆಗೂ ಇರಬೇಕು ಎಂದು ಹಾರೈಸಿದರು.

ಬಸವಮಾರ್ಗ ಫೌಂಡೇಷನ್ ವತಿಯಿಂದ ಸಾವಿರಾರು ಮಂದಿ ಉತ್ತಮ ಬದುಕು ಕಟ್ಟಿಕೊಂಡಿದ್ದಾರೆ. ಇದರ ಹಿಂದೆ ನಮ್ಮೂರಿನ ಹುಡುಗ ಬಸವರಾಜು ಅವರ ಶ್ರಮ ಅಪಾರವಾಗಿದೆ. ಎಲ್ಲರನ್ನೂ ಸಹಿಸಿಕೊಂಡು ಅವರಿಗೆ ಉತ್ತಮ ಜೀವನ ರೂಪಿಸುವ ನಿಟ್ಟಿನಲ್ಲಿ ದೊಡ್ಡ ಪ್ರಯತ್ನ ಮಾಡಿದ್ದಾರೆ. ಸಾವಿರಾರು ಮಂದಿಗೆ ದಾರಿದೀಪವಾಗಿದ್ದಾರೆ. ಮುಂದೆ ದೊಡ್ಡ ಮಟ್ಟದಲ್ಲಿ ಸೇವೆ ಮಾಡುವ ಗುರಿ ಹೊಂದಿರುವ ಬಸವರಾಜುಗೆ ನನ್ನ ಸಂಪೂರ್ಣ ಬೆಂಬಲ ಇದೆ ಎಂದು ತಿಳಿಸಿದರು.

ಬ್ರಹ್ಮ ಕುಮಾರಿ ಈಶ್ವರಿಯ ವಿದ್ಯಾಲಯದ ರಾಜಯೋಗ ಉಪನ್ಯಾಸಕಿ ಬಿ.ಕೆ.ಸಂಧ್ಯಾ ಅವರು ಮಾತನಾಡಿ, ರಕ್ತ ಮೂಳೆ, ಮಾಂಸಗಳಿಂದ ಮಾಡಲ್ಪಟ್ಟಿರುವ ಮಾನವನ ಶರೀರ ತುಂಬಾ ಬೆಲೆ ಬಾಳುವಂತದ್ದು. ಅದನ್ನು ಪರಮಾತ್ಮ ನಮಗೆ ಉಡುಗೊರೆಯಾಗಿ ಕೊಟ್ಟಿದ್ದಾನೆ. ಇದನ್ನು ನಾವು ಜೋಪಾನವಾಗಿ ಇಟ್ಟುಕೊಳ್ಳಬೇಕು. ಇದರ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದದ್ದು ನಮ್ಮ ಕೈಯಲ್ಲಿ ಇದೆ. ಇದನ್ನು ನಾವು ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಬೆಳೆಸಿಕೊಳ್ಳಬೇಕು. ದುಶ್ಚಟಗಳನ್ನು ದಾಟಿ ಉತ್ತಮ ಬದುಕನ್ನು ರೂಪಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಸ್ಥಾಪಕ ಎಸ್.ಬಸವರಾಜು, ನೂರಾರು ಮಂದಿ ಶಿಬಿರಾರ್ಥಿಗಳು, ಅವರ ಪೋಷಕರು, ಬಸವ ಮಾರ್ಗ ಸಂಸ್ಥೆಯ ಸಿಬ್ಬಂದಿ ಭಾಗಿಯಾಗಿದ್ದರು.

ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗಾಗಿ ವಿವೇಕ ವ್ಯಾಸಂಗ ಕೇಂದ್ರ



ರಾಮಕೃಷ್ಣ ಆಶ್ರಮದ ವಿವೇಕ ವ್ಯಾಸಂಗ ಕೇಂದ್ರದ ಕಟ್ಟಡ.

ಮೈಸೂರು, ಜ.14(ಎಸ್‌ಬಿಡಿ)– ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ಯುವಕರಿಗಾಗಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ 'ವಿವೇಕ ವ್ಯಾಸಂಗ ಕೇಂದ್ರ' ಕಲ್ಪಿಸಿದೆ.

ಯಾದವಗಿರಿಯಲ್ಲಿರುವ ಆಶ್ರಮದ ಹಿಂಭಾಗದಲ್ಲಿರುವ 'ಅಬ್ಬಿ ನಿವಾಸ'ದಲ್ಲಿ ಆರಂಭಿಸಿರುವ ವ್ಯಾಸಂಗ ಕೇಂದ್ರ ಜ.19ರಂದು ಉದ್ಘಾಟನೆಗೊಳ್ಳಲಿದ್ದು, ವಾರದ ಎಲ್ಲಾ ದಿನಗಳಲ್ಲೂ ಬೆಳಗ್ಗೆ 9ರಿಂದ ರಾತ್ರಿ 8ರವರೆಗೆ ಸೇವೆಗೆ ಲಭ್ಯವಿರಲಿದೆ.

ವಿವೇಕ ವ್ಯಾಸಂಗ ಕೇಂದ್ರದಲ್ಲಿ ಪರೀಕ್ಷಾರ್ಥಿಗಳಿಗೆ ಪ್ರಶಾಂತ ಹಾಗೂ ಆಧ್ಯಾತ್ಮಿಕ ವಾತಾವರಣವನ್ನು ಒದಗಿಸಲಾಗುತ್ತಿದ್ದು, ಪ್ರತಿಯೊಬ್ಬರಿಗೂ ಪ್ರತ್ಯೇಕ ಓದುವ ಮೇಜು, ಆರಾಮದಾಯಕ ಆಸನ ಸೇರಿದಂತೆ ಅಗತ್ಯ ಪೀಠೋಪಕರಣದ ಜೊತೆಗೆ ವೇಗದ ಅಂತರ್ಜಾಲದ ಸೌಲಭ್ಯವೂ ಇರಲಿದೆ. ಗ್ರಂಥಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯ ಪುಸ್ತಕಗಳು, ಹಲವು ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಕಲ್ಪಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಅಲ್ಪಾವಧಿಯ ತರಬೇತಿ ಹಾಗೂ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಾಯಕಾರಿಯಾಗುವ ಕೋರ್ಸ್‌ಗಳನ್ನು ಸಹ ಆಯೋಜಿಸಲು ಉದ್ದೇಶಿಸಲಾಗಿದೆ. ಶುದ್ಧ ನೀರು, ಶೌಚಾಲಯ, ವಾಹನಗಳಿಗೆ ಪಾರ್ಕಿಂಗ್ ಸೌಲಭ್ಯವೂ ಇದೆ. ಶ್ರೀರಾಮಕೃಷ್ಣ ಆಶ್ರಮವು ರಾಮಕೃಷ್ಣ ವಿದ್ಯಾಶಾಲೆ ಜೊತೆಗೆ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗಾಗಿ 'ವಿವೇಕ ಶಿಕ್ಷಣ' ಮತ್ತು 'ಗದಾಧರ ಅಭ್ಯುದಯ ಪ್ರಕಲ್ಪ' ಎಂಬ ಯೋಜನೆಯ ಮೂಲಕ ಕಳೆದ 25 ವರ್ಷಗಳಿಂದ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಸೇವೆ ನೀಡುತ್ತಿದ್ದು, ಇದೀಗ ವಿವೇಕ ವ್ಯಾಸಂಗ ಕೇಂದ್ರದ ಮೂಲಕ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ನೆರವಾಗುತ್ತಿದೆ.

'ವಿವೇಕ ವ್ಯಾಸಂಗ ಕೇಂದ್ರ'ದ ಸೌಲಭ್ಯ ಪಡೆದುಕೊಳ್ಳುವವರು https://www.srkmys.org/vsc ಗೆ ಭೇಟಿ ನೀಡಿ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.7019487367 ಅಥವಾ mysuru.vsc@gmail.com ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಸ್ವಾಮಿ ವಿವೇಕಾನಂದರ 163ನೇ ಜಯಂತಿಯನ್ನು ಮೈಸೂರು ವಿವಿ ಸ್ನಾತಕ ಗ್ರಂಥಾಲಯದಲ್ಲಿ ಆಚರಿಸಲಾಯಿತು. ಗ್ರಂಥಪಾಲಕರಾದ ಡಾ. ವೈ.ಎಲ್.ಸೋಮಶೇಖರ, ಎಸ್.ಪ್ರಸಾದ್, ಎಸ್. ಸೌಮ್ಯ ಕೆ. ಮಂಜುಳ ಹಾಗೂ ಗ್ರಂಥಾಲಯದ ಸಿಬ್ಬಂದಿ ಹಾಜರಿದ್ದರು.

ರಾಮಕೃಷ್ಣಾಶ್ರಮದಿಂದ ವಿವೇಕಾನಂದರಿಗೆ ಗೌರವ ಸಮರ್ಪಣೆ



ಮೈಸೂರು, ಜ.12(ಎಸ್‌ಪಿಎನ್)– ಮೈಸೂರು ರಾಮಕೃಷ್ಣಾಶ್ರಮ ವತಿಯಿಂದ ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಚೆಲುವಾಂಬ ಉದ್ಯಾನವನದ ಬಳಿಯ ಸ್ವಾಮಿ ವಿವೇಕಾನಂದರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅವರು, ಪುಷ್ಪಾರ್ಚನೆ ಸಲ್ಲಿಸಿದರು.

ನಂತರ ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಮೆರವಣಿಗೆಯಲ್ಲಿ ಚೆಲುವಾಂಬ ಉದ್ಯಾನವನದಿಂದ ಹೊರಟು, ಮಾತೃ ಮಂಡಳಿ ವೃತ್ತ, ಟೆಂಪಲ್ ರಸ್ತೆ ಮೂಲಕ ರಾಮಕೃಷ್ಣ ವಿದ್ಯಾಸಂಸ್ಥೆ ಆವರಣ ತಲುಪಿತು. ಈ ಮೆರವಣಿಗೆಯಲ್ಲಿ ಒಂಟಿಕೊಪ್ಪಲು ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿಗಳು, ರಾಮಕೃಷ್ಣಾಶ್ರಮದ ವಿದ್ಯಾರ್ಥಿಗಳು ಸೇರಿದಂತೆ ಇತರೆ ಶಾಲಾ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ಹಲವು ಘೋಷಣೆಗಳನ್ನು ಕೂಗಿದರು.

ಈ ವೇಳೆ ರಾಮಕೃಷ್ಣಾಶ್ರಮದ ಯುಕ್ತೇಶಾನಂದ ಜೀ ಮಹಾರಾಜ್, ಮಹಾ ಮೇದಾನಂದ ಜೀ ಮಹಾರಾಜ್ ಸೇರಿದಂತೆ ಇತರೆ ಯತಿಗಳು, ರಾಮಕೃಷ್ಣಾಶ್ರಮ ವಿದ್ಯಾಸಂಸ್ಥೆಯ ಪ್ರಾಂಶುಪಾಲ ಎಸ್.ಬಾಲಾಜಿ ಸೇರಿದಂತೆ ಬೋಧಕ ವೃಂದ, ಭಕ್ತಾದಿಗಳು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ
ಸೋಮವಾರ 15 ಜನವರಿ 2024

ಎರಡು ಚಿರತೆ ಸೆರೆ




ಹೆಚ್.ಡಿ.ಕೋಟೆ ತಾಲೂಕಿನ ಬದನಕುಪ್ಪೆ ಗ್ರಾಮದಲ್ಲಿ ಸೆರೆಸಿಕ್ಕ ಹೆಣ್ಣು ಚಿರತೆ

ಮೈಸೂರು, ಜ.14(ಎಸ್‌ಬಿಡಿ)– ಜಿಲ್ಲೆಯ ಹೆಚ್.ಡಿ.ಕೋಟೆ ಹಾಗೂ ತಿ.ನರಸೀಪುರ ತಾಲೂಕಿನಲ್ಲಿ ಎರಡು ಚಿರತೆಗಳು ಶನಿವಾರ ಸೆರೆಯಾಗಿವೆ.

ಹೆಚ್.ಡಿ.ಕೋಟೆ ವ್ಯಾಪ್ತಿಯ ಅಂತರ ಸಂತೆ ಹೋಬಳಿ, ಬದನಕುಪ್ಪೆ ಗ್ರಾಮದಲ್ಲಿ ಇಡಲಾಗಿದ್ದ ಬೋನ್‌ನಲ್ಲಿ ಸುಮಾರು 3 ವರ್ಷದ ಹೆಣ್ಣು ಚಿರತೆ ಸೆರೆಯಾಗಿದ್ದು, ಪರೀಕ್ಷೆಯ ನಂತರ ಅದಕ್ಕೆ ಇಯರ್ (ಕಿವಿ) ನೋಚಿಂಗ್ ಮಾಡಿ, ಮೈಕ್ರೋ ಚಿಪ್ ಅಳವಡಿಸಿ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ತಿ.ನರಸೀಪುರ ವ್ಯಾಪ್ತಿಯ ತಲಕಾಡು ವಿಭಾಗದಲ್ಲಿ ಐದು ದಿನಗಳ ಹಿಂದೆ ಕಬ್ಬಿನ ಗದ್ದೆಯಲ್ಲಿ ಸುಮಾರು 5 ವಾರಗಳ ಮರಿ ಪತ್ತೆಯಾಗಿತ್ತು. ತಾಯಿಯೊಂದಿಗೆ ಮರಿಯನ್ನು ಒಂದುಗೂಡಿಸುವ ನಿಟ್ಟಿನಲ್ಲಿ ಇಡಲಾಗಿದ್ದ ಬೋನ್‌ಗೆ ತಾಯಿ ಚಿರತೆ ಸೆರೆಯಾಗಿದೆ. ಆ ಚಿರತೆಗೂ ವೈದ್ಯಕೀಯ ಪರೀಕ್ಷೆ ನಡೆಸಿ, ಇಯರ್ ನೋಚಿಂಗ್ ಮಾಡಿ, ಮೈಕ್ರೊ ಚಿಪ್ ಅಳವಡಿಸಲಾಗಿದೆ.



ತಲಕಾಡು ಬಳಿ ಸೆರೆಸಿಕ್ಕ ತಾಯಿ ಚಿರತೆ. ಮತ್ತೊಂದು ಚಿತ್ರದಲ್ಲಿ ಮರಿ ಚಿರತೆಯನ್ನು ಕಾಣಬಹುದು.



ತಾಯಿ ಮತ್ತು ಮರಿ ಒಂದುಗೂಡಿಸುವ ಪ್ರಕ್ರಿಯೆ ಮುಂದುವರೆದಿದೆ ಎಂದು ಡಿಸಿಎಫ್ ಬಸವರಾಜು ತಿಳಿಸಿದ್ದಾರೆ.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ದಲಿತ ಸಂಘರ್ಷ ಸಮಿತಿ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ ಸಭೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಪ್ರಬಲ ಆಕಾಂಕ್ಷಿ ಮಳವಳ್ಳಿ ಬಿ.ಸೋಮಶೇಖರ್ ಅವರನ್ನು ಬೆಂಬಲಿಸಿ, ಮುಂದಿನ ಸಂಘಟನೆಯನ್ನು ರೂಪಿಸಲು ತೀರ್ಮಾನಿಸಲಾಯಿತು. ದೇವನೂರು ಶಿವಮಲ್ಲು, ಮಾರಳ್ಳಿ ರಂಗಸ್ವಾಮಿ, ಹಾರೋಹಳ್ಳಿ ನಟರಾಜ್, ಚೋರನಹಳ್ಳಿ ಶಿವಣ್ಣ, ದೇವೇಂದ್ರ, ಕಿರಗೂರ ಸ್ವಾಮಿ, ಕೋಟೆ ದೇವರಾಜ್ ತಳ್ಳಿ, ಸಣ್ಣ ಮಧು, ವರುಣ ಮಹೇಶ್, ನಂಜನಗೂಡ್ ಶಿವಮೂರ್ತಿ ಮತ್ತಿತರರು ಸಭೆಯಲ್ಲಿದ್ದರು.

ಐದನೇ ಪುಟದಿಂದ

ಭಾರತ್ ಜೋಡೋ ನ್ಯಾಯ್ ಯಾತ್ರೆಗೆ ಚಾಲನೆ





ಮಣಿಪುರದಲ್ಲಿ ನಡೆದ ಭಾರತ್ ಜೋಡೋ ನ್ಯಾಯ್ ಯಾತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ರಾಹುಲ್ ಗಾಂಧಿ ಅವರು, ನಾನು 2004ರಿಂದ ರಾಜಕೀಯದಲ್ಲಿದ್ದೇನೆ. ನಾನು ಮೊದಲ ಬಾರಿಗೆ ಭಾರತದ ಆಡಳಿತ ವ್ಯವಸ್ಥೆ ಕುಸಿದ ರಾಜ್ಯಕ್ಕೆ ಬಂದಿದ್ದೇನೆ. ಅದನ್ನು ನಾವು ಮಣಿಪುರ ಎಂದು ಕರೆಯುತ್ತೇವೆ. ಇಲ್ಲಿ ಹಿಂಸೆ ನಡೆಯುತ್ತಿದ್ದರೂ ಪ್ರಧಾನಿ ಎಲ್ಲಿದ್ದಾರೆ. ನಿನ್ನ ಕಣ್ಣೀರು ಒರೆಸಲು ನಿನ್ನನ್ನು ಅಪ್ಪಿಕೊಳ್ಳಲು ಬಂದಿಲ್ಲ ಎಂದು ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ಭಾರತದ ಜನರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ತೀವ್ರ ಅನ್ಯಾಯವನ್ನು ಅನುಭವಿಸುತ್ತಿರುವ ಕಾರಣ ಈ 'ನ್ಯಾಯ್ ಯಾತ್ರೆ' ಆರಂಭಿಸಿದ್ದೇವೆ ಎಂದು ರಾಹುಲ್ ಗಾಂಧಿ ಹೇಳಿದರು. ಈ ಯಾತ್ರೆಯು ಚುನಾವಣಾ ಯಾತ್ರೆಯಲ್ಲ. ಸೈದ್ಧಾಂತಿಕವಾದುದು ಎಂದು ಕಾಂಗ್ರೆಸ್ ಹೇಳಿಕೊಂಡಿದೆ. ನರೇಂದ್ರ ಮೋದಿ ಸರ್ಕಾರದ 10 ವರ್ಷಗಳ 'ಅನ್ಯಾಯ'ದ ವಿರುದ್ಧ ಯಾತ್ರೆ ಕೈಗೊಳ್ಳಲಾಗುತ್ತಿದೆ ಎಂದು ಹೇಳಲಾಗಿದೆ. ಪಕ್ಷವು ನಿರುದ್ಯೋಗ, ಹಣದುಬ್ಬರ ಮತ್ತು ಸಾಮಾಜಿಕ ನ್ಯಾಯದಂತಹ ಸಮಸ್ಯೆಗಳನ್ನು ಯಾತ್ರೆಯ ಮೂಲಕ ಪ್ರಸ್ತಾಪಿಸುತ್ತದೆ. ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಅವರು ಯಾವುದೇ ಸ್ಥಳದಲ್ಲಿ ಯಾತ್ರೆಯಲ್ಲಿ ಪಾಲ್ಗೊಳ್ಳುವಂತೆ ವಿರೋಧ ಪಕ್ಷದ ನಾಯಕರಿಗೆ ಆಹ್ವಾನ ನೀಡಿದ್ದಾರೆ.

ತೆವಳಿಕೊಂಡು ಬಂದ ಅಜ್ಜಿ

ಈ ದೃಶ್ಯವೇ ಜೀವಂತ ಸಾಕ್ಷಿ. ಮಾಶಾಸನಕ್ಕಾಗಿ 5 ಕಿ.ಮೀ. ದೂರ ತೆವಳಿಕೊಂಡು ಬಂದಿರುವ ಈ ಅಜ್ಜಿ ನಾಗರಿಕ ಸಮಾಜದ ಆತ್ಮಸಾಕ್ಷಿಯನ್ನೇ ಕಲಕಿದ್ದಾರೆ. ಆ ಅಜ್ಜಿ ಅನುಭವಿಸಿರುವ ಯಾತನೆ ನಾವೆಲ್ಲರೂ ತಲೆ ತಗ್ಗಿಸುವಂತೆ ಮಾಡಿದೆ ಹಾಗೂ ಸರ್ಕಾರದ ಕ್ಷಮತೆಯನ್ನೂ ಪ್ರಶ್ನಿಸಿದೆ ಎಂದು ಟೀಕಿಸಿದ್ದಾರೆ.

ನಾನು ಮುಖ್ಯಮಂತ್ರಿ ಆಗಿದ್ದಾಗ ವೃದ್ಧರು, ವಿಕಲಚೇತನರು, ವಿಧವೆಯರು, ದೇವದಾಸಿಯರು ಸೇರಿ ಸಮಾಜದ ವಿವಿಧ ದುರ್ಬಲ ಜನರಿಗೆ ಅನೇಕ ಕಾರ್ಯಕ್ರಮಗಳನ್ನು ಕೊಟ್ಟು, ಅವರ ಆರ್ಥಿಕ ಸಬಲೀಕರಣಕ್ಕೆ ಕ್ರಮ ವಹಿಸಿದ್ದೆ. ವೃದ್ಧಾಪ್ಯ ವೇತನ ವಿಕಲಚೇತನರ ಮಾಶಾಸನವನ್ನು ಏರಿಕೆ ಮಾಡಿದ್ದೆ. ಕಷ್ಟದಲ್ಲಿರುವವರಿಗೆ ಆಸರೆ ಕೊಡುವುದು ಆಡಳಿತ ನಡೆಸುವವರ ಕರ್ತವ್ಯ. ಗೃಹಲಕ್ಷ್ಮಿಯರಿಗೆ ರೂ. 2000 ಕೊಡುತ್ತೀರಿ ಸರಿ, ಆದರೆ ಇಂತಹ ಅಸಂಖ್ಯಾತ ವೃದ್ಧ ಅಮ್ಮಂದಿರ ಪರಿಸ್ಥಿತಿ ಏನು? ಸರಕಾರಕ್ಕೆ ಕನಿಕರ ಎನ್ನುವುದು ಇಲ್ಲವೇ? ಎಂದು ಪ್ರಶ್ನಿಸಿದ್ದಾರೆ. ರಾಜ್ಯ ಸರಕಾರ ಗ್ಯಾರಂಟಿಗಳನ್ನು ಜಾರಿ ಮಾಡಿದೆ, ಸಂತೋಷ. ಆದರೆ; ಬಡ, ಅಶಕ್ತ ಮಹಿಳೆಯರಿಗೆ ನೆರವಾಗುವ ವೃದ್ಧಾಪ್ಯ ವೇತನ, ವಿಧವಾ ವೇತನವನ್ನು ಸಕಾಲಕ್ಕೆ ಮತ್ತು ನಿಯಮಿತವಾಗಿ ಬಿಡುಗಡೆ ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ರಾಜಕಾರಣಿಗಳಿಗೆ ಎಲ್ಲಾ ಸಮುದಾಯದವರ ಸಹಕಾರ ಅಗತ್ಯ

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಜಯಂತಿಯಲ್ಲಿ ಶಾಸಕ ಗಣೇಶ್ ಪ್ರಸಾದ್ ಅಭಿಪ್ರಾಯ



ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ವತಿಯಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಲಾಯಿತು.

ಮುಂದಿನ ದಿನಗಳಲ್ಲಿ ಇದನ್ನು ಬದಿಗಿಟ್ಟು ಒಗ್ಗಟ್ಟಾಗಿ ಸಮುದಾಯದ ಕೆಲಸ ಮಾಡೋಣ. ನಾನು ಶಾಸಕನಾದ ನಂತರ ಸಮುದಾಯದ ಪರ ಅನೇಕ ಕೆಲಸಗಳನ್ನು ಮಾಡಿದ್ದು, ಕೆಲ ಅಧಿಕಾರಿಗಳಿಗೆ ಮೈಸೂರಿನಲ್ಲಿ ಪೋಸ್ಟಿಂಗ್ ಮಾಡಿಸಿದ್ದೇನೆ. ಹಳೆ ಪಿಂಚಣಿ ಯೋಜನೆ ಜಾರಿ ಕುರಿತು ಈಗಾಗಲೇ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ.
-ಹೆಚ್.ಎಂ.ಗಣೇಶ್ ಪ್ರಸಾದ್, ಶಾಸಕ

ಮೈಸೂರು,ಜ.14(ಜಿಎ)–ರಾಜಕಾರಣಿಗಳನ್ನು ಕೇವಲ ಒಂದು ಸಮಾಜ ಕೈ ಹಿಡಿಯುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಎಲ್ಲಾ ಸಮುದಾಯದ ಸಹಕಾರ ಮುಖ್ಯ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅಭಿಪ್ರಾಯಪಟ್ಟರು.

ಮೈಸೂರಿನ ಎಂ.ಜಿ.ರಸ್ತೆಯಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ವತಿಯಿಂದ ಭಾನುವಾರ ಆಯೋಜಿಸಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಜಯಂತಿ, ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಹಾಗೂ ನೂತನ ದಿನದರ್ಶಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಯಾವುದೇ ಸಮುದಾಯವಾದರೂ ಮುಂದುವರೆಯಲು ಒಗ್ಗಟ್ಟು ಬಹಳ ಮುಖ್ಯ. ಮೈಸೂರಿನ 9 ಕ್ಷೇತ್ರದಲ್ಲಿ ನಾನೊಬ್ಬನೇ ಸಮುದಾಯದ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಮೊದಲ ಬಾರಿ ಪಕ್ಷದಿಂದ ಟಿಕೆಟ್ ನೀಡಿದಾಗ ನಮ್ಮ ಸಮುದಾಯದವರೇ ಕಾಲು ಎಳೆದಿದ್ದರು. 2023ರ ಚುನಾವಣೆಯಲ್ಲಿ ನಾಲ್ಕು ಕಡೆ ನಮ್ಮ ಸಮುದಾಯದವರಿಂದಲೇ ನಮ್ಮವರು ಸೋತಿದ್ದಾರೆ. ಅದು ದುರಂತದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಮಹದೇವಪ್ರಸಾದ್ ಅವರ ಸ್ಥಾನ ತುಂಬುವ ದೃಷ್ಟಿಯಿಂದ ಅವರ ಮನೆಯವರಿಗೆ ಅವಕಾಶ ನೀಡಬೇಕೆಂದು ಸಿದ್ದರಾಮಯ್ಯ ಅವರು ಅವಕಾಶ ನೀಡಿದ್ದರು. ಅದರಂತೆ ನಮ್ಮ ತಾಯಿಯೂ 8 ತಿಂಗಳ ಕಾಲ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅದರಂತೆ ಈ ಬಾರಿ ನನಗೆ ಅವಕಾಶ ಕಲ್ಪಿಸಿದ್ದಾರೆ. ಚುನಾವಣೆಯಲ್ಲಿ ಎಲ್ಲಾ ಸಮುದಾಯದವರು ಸಹಾಯ ಮಾಡಿದ್ದಾರೆ. ರಾಜಕಾರಣಿಗಳಿಗೆ ಕೇವಲ ಒಂದು ಸಮಾಜ ಕೈ ಹಿಡಿಯುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಎಲ್ಲಾ ಸಮುದಾಯದ ಸಹಕಾರ ಮುಖ್ಯ ಎಂದು ತಿಳಿಸಿದರು.

ಕಳೆದ ಡಿಸೆಂಬರ್‌ನಲ್ಲಿ ದಾವಣಗೆರೆಯಲ್ಲಿ ನಡೆದ ಸಮುದಾಯದ ಸಮಾವೇಶದಲ್ಲಿ ಜನರೇ ಸೇರಲಿಲ್ಲ. ನಾವು ಒಗ್ಗಟ್ಟಾಗಿ ಸಾಗಲಿಲ್ಲ ಎಂದರೆ ಸಮಾಜದ ಏಳಿಗೆ ಆಗುವುದಿಲ್ಲ. ಅನೇಕ ಅವಕಾಶಗಳಿವೆ. ಅದನ್ನು ಬಳಸಿಕೊಳ್ಳಬೇಕು. ರಾಜಕೀಯ ಹೊರತುಪಡಿಸಿ ಬೇರೆ ಕ್ಷೇತ್ರದಿಂದ ಸಮಾಜದ ಕೆಲಸ ಮಾಡಬಹುದು. ಪಕ್ಷಭೇದ ಮರೆತು ಸಮುದಾಯದ ಅಭಿವೃದ್ಧಿಗೆ ಶ್ರಮಿಸೋಣ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮರಿಯಾಲ ಶ್ರೀ ಮುರುಘ ರಾಜೇಂದ್ರ ಸ್ವಾಮಿ ಮಹಾ ಸಂಸ್ಥಾನ ಮಠದ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಮೈಸೂರು ವಿವಿ ಗಣಕ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು, ಸಂಘದ ಜಿಲ್ಲಾಧ್ಯಕ್ಷ ಆಲೂರು ಬಸವರಾಜು, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಿವಮೂರ್ತಿ ಕಾನ್ಯ, ಜೆಎಸ್‌ಎಸ್ ಮಹಾವಿದ್ಯಾಪೀಠದ ಸಹಾಯಕ ನಿರ್ದೇಶಕ ನಿರಂಜನ ಮೂರ್ತಿ, ಸಂಘದ ಗೌರವಾಧ್ಯಕ್ಷ ಎಂ.ಕೆಸ್ವಾಮಿ, ರಾಜಶೇಖರ್, ಪುಟ್ಟಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಆಫ್ಘಾನ್ ವಿರುದ್ಧ ಟಿ20 ಸರಣಿ ಗೆದ್ದ ಭಾರತ



ಇಂದೋರ್, ಜ.14– ಯಶಸ್ವಿ ಜೈಸ್ವಾಲ್ ಹಾಗೂ ಶಿವಂ ದುಬೆ ಅವರ ಅರ್ಧಶತಕಗಳ ನೆರವಿನಿಂದ ಭಾರತ, ಆಫ್ಘಾನಿಸ್ತಾನ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ 6 ವಿಕೆಟ್ ಗೆಲುವು ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಟಿ20 ಸರಣಿಯನ್ನು 2–0 ಅಂತರದಲ್ಲಿ ಇನ್ನೂ ಒಂದು ಪಂದ್ಯ ಬಾಕಿ ಉಳಿದಿರುವಂತೆಯೇ ತನ್ನದಾಗಿಸಿಕೊಂಡಿದೆ.

ಇಲ್ಲಿನ ಹೋಳ್ಕರ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಆಫ್ಘಾನಿಸ್ತಾನ ನೀಡಿದ 173 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 15.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ಇನ್ನಿಂಗ್ಸ್ ಆರಂಭದಲ್ಲೇ ರೋಹಿತ್ ಶರ್ಮಾ ಶೂನ್ಯಕ್ಕೆ ನಿರ್ಗಮಿಸಿದರೂ, ನಂತರ ಜೊತೆಯಾದ ಯಶಸ್ವಿ ಜೈಸ್ವಾಲ್ ಹಾಗೂ ವಿರಾಟ್ ಕೊಹ್ಲಿ 57 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. 14 ತಿಂಗಳ ಬಳಿಕ ಟಿ20 ಕ್ರಿಕೆಟ್ ಆಡಿದ ವಿರಾಟ್ ಕೊಹ್ಲಿ 16 ಎಸೆತಗಳಲ್ಲಿ 29 ರನ್ ಸಿಡಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಶುಭಮನ್ ಗಿಲ್ ಸ್ಥಾನದಲ್ಲಿ ಬಿರುಸಿನ ಆಟವಾಡಿದ ಯಶಸ್ವಿ ಜೈಸ್ವಾಲ್, 34 ಎಸೆತಗಳಲ್ಲಿ 5 ಬೌಂಡರಿ, 6 ಸಿಕ್ಸರ್ ಒಳಗೊಂಡ 68 ರನ್ ಗಳಿಸಿದರು. ಮತ್ತೊಂದೆಡೆ ಅಬ್ಬರಿಸಿದ ಶಿವಂ ದುಬೆ 32 ಎಸೆತಗಳಲ್ಲಿ 5 ಬೌಂಡರಿ ಮತ್ತು 4 ಸಿಕ್ಸರ್ ಒಳಗೊಂಡ 63 ರನ್ ಬಾರಿಸಿ ಔಟಾಗದೇ ಉಳಿದರು. ಆಫ್ಘಾನಿಸ್ತಾನ ಪರ ಕರೀಂ ಜನತ್ 2, ಫಜಲ್ಹಕ್ ಫಾರೂಕಿ ಹಾಗೂ ನವೀನ್ ಉಲ್ ಹಕ್ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆಫ್ಘಾನಿಸ್ತಾನ 20 ಓವರ್‌ಗಳಲ್ಲಿ 172 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಗುರ್ಬಜ್ 14, ಗುಲ್ಬದಿನ್ ನೈಬ್ 57, ನಬಿ 14, ನಜೀಬುಲ್ಲಾ ಝುದ್ರಾನ್ 23, ಕರೀಮ್ ಜನತ್ 20, ಮುಜೀಬ್ ಉರ್ ರೆಹಮಾನ್ 21, ನಬಿ 14 ರನ್ ಗಳಿಸಿದರು. ಭಾರತದ ಪರ ಅರ್ಷದೀಪ್ ಸಿಂಗ್ 3, ರವಿ ಬಿಷ್ಣೋಯಿ, ಅಕ್ಷರ್ ಪಟೇಲ್ ತಲಾ 2, ಶಿವಂ ದುಬೆ 1 ವಿಕೆಟ್ ಪಡೆದರು. ಅಕ್ಷರ್ ಪಟೇಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಸರಣಿಯ 3ನೇ ಹಾಗೂ ಅಂತಿಮ ಪಂದ್ಯ ಉದ್ಯಾನ ನಗರಿ ಬೆಂಗಳೂರಿನಲ್ಲಿ ಜ.17ರಂದು ನಡೆಯಲಿದೆ.

ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಮೈಸೂರಲ್ಲಿ ಪ್ರತಿಭಟನೆ



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.14(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಏಕವಚನದಲ್ಲಿ ಮಾತನಾಡಿದ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಅವರ ನೇತೃತ್ವದಲ್ಲಿ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಸಂಸದ ಅನಂತಕುಮಾರ್ ಹೆಗಡೆ ಅವರ ಭಾವಚಿತ್ರಕ್ಕೆ ಬೆಂಕಿ ಹಚ್ಚಿ, ಚಪ್ಪಲಿಯಿಂದ ತುಳಿದು ಆಕ್ರೋಶ ವ್ಯಕ್ತಪಡಿಸಿದ ಸಿದ್ದರಾಮಯ್ಯರ ಅಭಿಮಾನಿಗಳು, ಓರ್ವ ಸಂಸದರಾಗಿ ಮುಖ್ಯಮಂತ್ರಿಗಳ ಬಗ್ಗೆ ಹೇಗೆ ಮಾತನಾಡಬೇಕು ಎನ್ನುವ ಜ್ಞಾನ ಇಲ್ಲವೇ? ಸಂಸದ ಸ್ಥಾನದಲ್ಲಿ ಇದ್ದು ಏನು ಬೇಕಾದರೂ ಮಾತನಾಡಬಹುದೇ ಎಂದು ಪ್ರಶ್ನಿಸಿದರು. ಈ ಬಾರಿ ಲೋಕಸಭಾ ಚುನಾವಣೆಗೆ ಬಿಜೆಪಿಯಿಂದ ಟಿಕೆಟ್ ಕೈ ತಪ್ಪುವ ಭೀತಿಯಿಂದ ಈ ರೀತಿ ಹೇಳಿಕೆ ನೀಡುತ್ತಿದ್ದಾರೆ. ಆದರೆ, ಸಿದ್ದರಾಮಯ್ಯನವರ ಬಗ್ಗೆ ಮಾತನಾಡುವಾಗ ಯೋಚಿಸಿ ಮಾತನಾಡಬೇಕು. ಸಿದ್ದರಾಮಯ್ಯನವರು ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಜನರು ಮೆಚ್ಚಿಕೊಂಡಿದ್ದಾರೆ. ಅದನ್ನು ಸಹಿಸದೇ ಈ ರೀತಿಯಲ್ಲಿ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಎಸ್.ಯೋಗೇಶ್ ಉಪ್ಪಾರ, ಲೋಕೇಶ್ ಕುಮಾರ್, ಎಚ್.ಎಸ್.ಪ್ರಕಾಶ್, ರವಿನಂದನ್, ರವಿ, ರಾಜಶೇಖರ್, ಸುನಿಲ್ ನಾರಾಯಣ್, ಶ್ರೀನಿವಾಸ್, ಚಂದ್ರಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ನಿತ್ಯ ಉಕ್ಕಿ ಹರಿಯುವ ಮ್ಯಾನ್‌ಹೋಲ್

ಮೈಸೂರು ಶಾರದಾದೇವಿನಗರದ ಸ್ವಾಮಿ ವಿವೇಕಾನಂದ ರಸ್ತೆಯಲ್ಲಿ ಅನೈರ್ಮಲ್ಯ



ಮೈಸೂರು, ಜ.14(ಪಿಎಂ)– ಇಲ್ಲೊಂದು ಒಳಚರಂಡಿಯ ಮ್ಯಾನ್‌ಹೋಲ್ ತಿಂಗಳಿಗೂ ಹೆಚ್ಚು ಕಾಲದಿಂದ ಉಕ್ಕಿ ಹರಿಯುತ್ತಿದ್ದು, ಸ್ಥಳೀಯರು ಇದರಿಂದ ಸೂಸುವ ದುರ್ವಾಸನೆಯಿಂದ ಕಿರಿಕಿರಿ ಅನುಭವಿಸುತ್ತಿದ್ದರೆ, ಇಲ್ಲಿ ಸಂಚರಿಸುವ ವಾಹನ ಸವಾರರು, ಪಾದಚಾರಿಗಳು ಪರದಾಡುವಂತಾಗಿದೆ.

ಮೈಸೂರಿನ ಶಾರದಾದೇವಿನಗರದ ಸ್ವಾಮಿ ವಿವೇಕಾನಂದ ರಸ್ತೆಯಲ್ಲಿ ಒಳಚರಂಡಿಯ ಮ್ಯಾನ್‌ಹೋಲ್‌ವೊಂದು ಪ್ರತಿದಿನ ಉಕ್ಕಿ ಹರಿಯುತ್ತಿದೆ. ಪರಿಣಾಮ ಕಲುಷಿತ ನೀರು ರಸ್ತೆಯಲ್ಲಿ ಹರಿಯುವಂತಾಗಿದ್ದು, ಇಲ್ಲಿ ದ್ವಿಚಕ್ರ ವಾಹನ ಸಾವರರು ಕೊಳಚೆ ನೀರಿನಲ್ಲಿ ಬೀಳುವ ಆತಂಕದಲ್ಲೇ ಸಂಚರಿಸುವ ಸನ್ನಿವೇಶ ನಿರ್ಮಾಣವಾಗಿದೆ.

ಅಲ್ಲದೆ, ಕಾರು ಸೇರಿದಂತೆ ಇನ್ನಿತರ ವಾಹನಗಳು ಸಾಗುವಾಗ ಕೊಳಚೆ ನೀರು ಪಾದಚಾರಿಗಳಿಗೆ ಹಾರುತ್ತಿದ್ದು, ಜೊತೆಗೆ ಇಲ್ಲಿ ಮೂಗು ಹಿಡಿದು ಸಾಗುವ ಪರಿಸ್ಥಿತಿ ತಲೆದೋರಿದೆ. ಇಲ್ಲಿಗೆ ಸಮೀಪದಲ್ಲಿ ಖಾಸಗಿ ಶಾಲೆಯೂ ಇದ್ದು, ಮಕ್ಕಳು ಹಾಗೂ ಅವರ ಪೋಷಕರು ಇಲ್ಲಿ ಹಾದು ಹೋಗಲು ಪರದಾಡುತ್ತಿದ್ದಾರೆ. ಇಲ್ಲಿನ ಅನೈರ್ಮಲ್ಯ ವಾತಾವರಣಕ್ಕೆ ಸ್ಥಳೀಯರು ಬೇಸತ್ತಿದ್ದಾರೆ.

ಶಾರದಾದೇವಿನಗರದ ವೃತ್ತದಲ್ಲಿರುವ ಪಾಲಿಕೆ ವಲಯ ಕಚೇರಿ 3ಕ್ಕೆ ಸದರಿ ಮ್ಯಾನ್‌ಹೋಲ್ ಸರಿಪಡಿಸುವಂತೆ ಕೋರಿ ಮನವಿ ಸಲ್ಲಿಸಲು ಹೋದರೆ ಅವರು ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎನ್ನುತ್ತಾರೆ. ಪಾಲಿಕೆ ಒಳಚರಂಡಿ ವಿಭಾಗಕ್ಕೆ ಮನವಿ ತಲುಪಿಸಬೇಕು ಎಂದು ಕೈಚೆಲ್ಲಿದರು ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ. ಇನ್ನಾದರೂ ಮೈಸೂರು ಮಹಾನಗರ ಪಾಲಿಕೆ ಇತ್ತ ಗಮನಹರಿಸುವುದೇ ಕಾದು ನೋಡಬೇಕಿದೆ.

ಭೂಮಿಪುತ್ರ ಸಿ.ಚಂದನ್‌ಗೌಡರಿಗೆ ನಾಳೆ ರೈತ ರತ್ನ ಪ್ರಶಸ್ತಿ ಪ್ರದಾನ



ಮೈಸೂರು,ಜ.14–ಮೈಸೂರಿನ ಜೆ.ಪಿ.ನಗರದಲ್ಲಿರುವ ಉತ್ತಿಷ್ಠ ಭಾರತ ಪ್ರತಿಷ್ಠಾನದ ವತಿಯಿಂದ ಜ.16ರಂದು ಮಧ್ಯಾಹ್ನ 12 ಗಂಟೆಗೆ ತ್ಯಾಗರಾಜ ರಸ್ತೆಯಲ್ಲಿರುವ ಜಿಲ್ಲಾ ಪತ್ರಕರ್ತರ ಭವನದಲ್ಲಿ ದಿನದರ್ಶಿಕೆ ಬಿಡುಗಡೆ, ಮಣ್ಣು ಉಳಿಸಿ ಜನಜಾಗೃತಿ ಅಭಿಯಾನ ಮತ್ತು ಭೂಮಿಪುತ್ರ ಸಿ. ಚಂದನ್‌ಗೌಡರಿಗೆ ರೈತ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಯೋಗ ಶಿಕ್ಷಕ ಜಿ. ಮೋಹನ್, ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಭಾಗವಹಿಸುವರು ಎಂದು ಪ್ರತಿಷ್ಠಾನ ಕಾರ್ಯದರ್ಶಿ ಎಂ.ವಿ.ನಾಗೇಂದ್ರಬಾಬು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಂಬಾರಕೊಪ್ಪಲು ರವಿ ನಿಧನ



ಮೈಸೂರು, ಜ.14– ನಗರದ ಕುಂಬಾರಕೊಪ್ಪಲು ನಿವಾಸಿ ರವಿ(34) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಸ್ನೇಹಿತರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸಂಜೆ ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ. ಅಲ್ಲದೆ, ಇವರ ನಿಧನಕ್ಕೆ ಎಸ್‌ಬಿಇಎಸ್ ಗೆಳೆಯ ಬಳಗ ಸಂತಾಪ ಸೂಚಿಸಿದೆ.

ಕುಣಿಗಲ್ ಕುದುರೆ ಫಾರಂ ಪರಭಾರೆ ವಿರುದ್ಧ ವಾಟಾಳ್ ಪ್ರತಿಭಟನೆ



ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ವಾಟಾಳ್ ನಾಗರಾಜ್ ಭಾನುವಾರ ಪ್ರತಿಭಟನೆ ನಡೆಸಿದರು.

ಮೈಸೂರು,ಜ.14(ಜಿಎ)–ಕುಣಿಗಲ್ ಕುದುರೆ ಫಾರಂ ಅನ್ನು ಯಾವುದೇ ಕಾರಣಕ್ಕೂ ಪರಭಾರೆ ಮಾಡಬಾರದು, ಅದನ್ನು ಅಲ್ಲಿಯೆ ಉಳಿಸುವಂತೆ ಒತ್ತಾಯಿಸಿ, ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಅವರು ವಿನೂತನವಾಗಿ ಭಾನುವಾರ ಪ್ರತಿಭಟನೆ ನಡೆಸಿದರು.

ಕುದುರೆ ಸಾರೋಟಿನಲ್ಲಿ ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಆಗಮಿಸಿದ ವಾಟಾಳ್ ನಾಗರಾಜ್ ಅವರು, ಕುಣಿಗಲ್ ಫಾರಂಗೆ 400 ವರ್ಷಗಳ ಇತಿಹಾಸ ಇದ್ದು, ಕುಣಿಗಲ್ ಫಾರಂಗೆ ವಿಶ್ವದ ಮಾನ್ಯತೆ ಇದೆ. ಇಂತಹ ಫಾರಂ ಅನ್ನು ಉಳಿಸಿಕೊಳ್ಳುವುದು ರಾಜ್ಯ ಸರಕಾರದ ಕರ್ತವ್ಯವಾಗಬೇಕು ಎಂದು ಘೋಷಣೆ ಕೂಗಿದರು.

ಈ ವೇಳೆಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 400 ವರ್ಷಗಳ ಇತಿಹಾಸ ಇರುವ ಕುಣಿಗಲ್ ಕುದುರೆ ಫಾರಂ ಅನ್ನು ರಾಜ್ಯ ಸರಕಾರ ಪರಭಾರೆ ಮಾಡಬಾರದು. ಕುಣಿಗಲ್ ಕುದುರೆ ಫಾರಂಗೆ ಭಾರಿ ಇತಿಹಾಸವಿದೆ. ಆಂಗ್ಲರ ಆಳ್ವಿಕೆ, ಟಿಪ್ಪು ಸುಲ್ತಾನರ ಆಳ್ವಿಕೆ, ಮೈಸೂರು ಅರಸರ ಆಳ್ವಿಕೆಯನ್ನು ಈ ಫಾರಂ ನೆನಪಿಸುತ್ತದೆ. ಕುಣಿಗಲ್ ಫಾರಂಗೆ ವಿಶ್ವ ಮಾನ್ಯತೆ ಇದೆ. ಇಂತಹ ಫಾರಂಅನ್ನು ಉಳಿಸಿಕೊಳ್ಳುವುದು ಸರಕಾರದ ಆದ್ಯ ಕರ್ತವ್ಯವಾಗಿದೆ. ಕುಣಿಗಲ್ ಕುದುರೆ ಫಾರಂ ಅನ್ನು ಅದ್ಭುತವಾಗಿ, ಸುಂದರವಾಗಿ, ವಿಶ್ವದ ಜನ ಬಂದು ನೋಡುವಂತಹ ಸ್ಮಾರಕ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿದರು.

1992ರಲ್ಲಿ ಮಲ್ಯನ ಯುಬಿ ಸಂಸ್ಥೆಗೆ ಈ ಫಾರಂ ಅನ್ನು ಕೊಟ್ಟಾಗ ನಾನು ವಿರೋಧ ಮಾಡಿದ್ದೆ. ಆದರೆ, ಪರಭಾರೆ ಮಾಡಲು ಭಾರಿ ಕರಾಮತ್ತು ಇದೆ. 100 ಎಕರೆ ಬೆಂಗಳೂರು ಟರ್ಫ್ ಕ್ಲಬ್‌ಗೆ ಹಾಗೂ 321 ಎಕರೆ ಟೌನ್‌ಷಿಪ್‌ಗೆ ಬಳಸುವ ಪ್ರಸ್ತಾಪ ಇದೆ. ಈ ಬಗ್ಗೆ ಜ.16ರಂದು ಬೆಂಗಳೂರಿನಲ್ಲಿ ಕುಣಿಗಲ್ ಕುದುರೆ ಫಾರಂ ಉಳಿಸಿ ಎಂದು ಹೋರಾಟ ಮಾಡಲು ತೀರ್ಮಾನ ಮಾಡಿದ್ದೇವೆ ಎಂದು ತಿಳಿಸಿದರು.

ಸಂಸದ ಅನಂತ್‌ಕುಮಾರ್ ಹೆಗಡೆಯವರು ಸಿಎಂ ವಿರುದ್ಧ ಏಕವಚನದಲ್ಲಿ ಮಾತನಾಡಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ನಾನು 65 ವರ್ಷಗಳ ಕಾಲ ರಾಜಕಾರಣವನ್ನು ನೋಡಿದ್ದೇನೆ. ನಿಜಲಿಂಗಪ್ಪ, ಜೆ .ಎಚ್. ಪಟೇಲ್, ಗುಂಡೂರಾವ್, ಬಂಗಾರಪ್ಪ, ರಾಮಕೃಷ್ಣ ಹೆಗಡೆ ಇಂತಹ ರಾಜಕಾರಣಿಗಳನ್ನು ನೋಡಿದ್ದೇನೆ.ಆದರೆ ಯಾವ ರಾಜಕಾರಣಿಯೂ ಇಷ್ಟೊಂದು ಲಘುವಾಗಿ ಮಾತನಾಡಿರುವುದಿಲ್ಲ ಎಂದರು.

ವೈಯಕ್ತಿಕ ವಿಚಾರ ಹಾಗೂ ವೈಯಕ್ತಿಕ ದ್ವೇಷದಿಂದ ಸಿಎಂ ಸಿದ್ದರಾಮಯ್ಯರವರ ಬಗ್ಗೆ ಅನಂತಕುಮಾರ್ ಹೆಗಡೆ ಮಾತನಾಡಿದ್ದಾರೆ. ಇದು ಸಿದ್ದರಾಮಯ್ಯ ಅವರಿಗೆ ಅಪಮಾನವಲ್ಲ, ರಾಜ್ಯದ ಜನರಿಗೆ ಮಾಡಿದ ಅಪಮಾನ. ರಾಜಕಾರಣ ಇದ್ದರೆ ಟೀಕೆ ಮಾಡಿ. ವೈಯಕ್ತಿಕ ದ್ವೇಷ ಇಟ್ಟುಕೊಂಡು ಟೀಕೆ ಮಾಡಬಾರದು ಎಂದು ಹೇಳಿದರು.

ರಾಮಮಂದಿರ ಉದ್ಘಾಟನೆ ಕಾರ್ಯಕ್ರಮಕ್ಕೆ ನಿಮಗೆ ಆಹ್ವಾನ ನೀಡಿದ್ದಾರೆಯೇ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, ನನಗೆ ಇದುವರೆಗೂ ಆಹ್ವಾನ ನೀಡಿರುವುದಿಲ್ಲ, ರಾಮಮಂದಿರಕ್ಕೆ ನಾನು ಹೋಗುವುದಿಲ್ಲ. ನಾನು ಈಗ ನಿಂತಿರುವುದು ಆಂಜನೇಯ ದೇವಾಲಯದ ಮುಂದೆ. ಆಂಜನೇಯ ರಾಮನ ಭಕ್ತ, ನಾನು ರಾಮಭಕ್ತನ ಮುಂದೆ ಇದ್ದೇನೆ. ನಾನು ರಾಮನ ಮಂದಿರದ ಬಳಿ ಹೋಗುವ ಅಗತ್ಯ ಇಲ್ಲ.ರಾಮನ ಭಕ್ತಿ ನನ್ನ ಮನಸ್ಸಿನಲ್ಲಿದೆ ಎಂದರು.

ನಾನು ಯಾವ ಜಾತಿಗೂ ಸಂಬಂಧಪಟ್ಟವನಲ್ಲ, ನನ್ನ ಜಾತಿ ಕನ್ನಡ, ನನ್ನ ಧರ್ಮ ಕನ್ನಡ, ನನ್ನ ಭಾಷೆ ಕನ್ನಡ, ನಾನು ಬದುಕಿರುವುದೇ ಕನ್ನಡಕ್ಕೆ ಎಂದು ತಿಳಿಸಿದರು.

ಮೈಸೂರು ಮಿತ್ರ ಸೋಮವಾರ 15 ಜನವರಿ 2024

ಕಾಫಿ ನಷ್ಟದ ಸಮೀಕ್ಷೆಗೆ ಸೂಚನೆ ನೀಡುವೆ

• ಕೊಡಗು ಬೆಳೆಗಾರರ ಒಕ್ಕೂಟದ ನಿಯೋಗಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಭರವಸೆ



ಕೊಡಗು ಬೆಳೆಗಾರರ ಒಕ್ಕೂಟದ ನಿಯೋಗದಿಂದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಅಕಾಲಿಕ ಮಳೆಯಿಂದ ಉಂಟಾದ ನಷ್ಟ ಕುರಿತು ಮನವಿ ಸಲ್ಲಿಸಲಾಯಿತು. ಒಕ್ಕೂಟದ ಅಧ್ಯಕ್ಷ ಕೇಚಂಡ ಕುಶಾಲಪ್ಪ, ಕಾರ್ಯದರ್ಶಿ ಅಣ್ಣೀರ ಹರೀಶ್ ಮಾದಪ್ಪ, ಮಾಣೀರ ವಿಜಯ ನಂಜಪ್ಪ, ಕೋಳೆರ ಭಾರತಿ ಮತ್ತಿತರಿದ್ದರು.

ಪರಿಹಾರ ಪರಿಷ್ಕರಿಸಿ

ಕಾಫಿ ಬೆಳೆ ನಷ್ಟಕ್ಕೆ ಎನ್‌ಡಿಆರ್‌ಎಫ್ ಮಾನದಂಡದ ಮೂಲಕ ನೀಡುವ ಪರಿಹಾರವನ್ನು ದಶಕಗಳಿಂದ ಪರಿಷ್ಕರಣೆ ಮಾಡಿಲ್ಲ. 2020ರಲ್ಲಿ ಜಿಲ್ಲೆಯ ಪ್ರಾಕೃತಿಕ ವಿಕೋಪ ಅಧ್ಯಯನ ತಂಡ ಆಗಮಿಸಿದ ಸಂದರ್ಭ ಬೆಳೆಗಾರರ ಒಕ್ಕೂಟ ನೀಡಿದ ಮನವಿಗೆ ಸ್ಪಂದಿಸಿ, ಈಗ ಇರುವ ಪರಿಹಾರ ಹೆಕ್ಟೇರ್‌ಗೆ 18 ಸಾವಿರದಿಂದ 50 ಸಾವಿರ ರೂ.ಗೆ ಪರಿಷ್ಕರಣೆ ಮಾಡಲಾಗಿತ್ತು. ಈಗ ಇರುವ 2 ಹೆಕ್ಟೇರ್ ಗರಿಷ್ಠ ಮಿತಿಯನ್ನು 5 ಹೆಕ್ಟೇರಿಗೆ ಹೆಚ್ಚಿಸಲು ಕೇಂದ್ರ ವಾಣಿಜ್ಯ ಸಚಿವಾಲಯಕ್ಕೆ ಶಿಫಾರಸ್ಸು ಮಾಡಿದ್ದು, ಇದನ್ನು ಜಾರಿಗೆ ತರಬೇಕು ಎಂದು ಮನವಿ ಮೂಲಕ ಕೊಡಗು ಬೆಳೆಗಾರರ ಒಕ್ಕೂಟದ ಪ್ರಮುಖರು ಗಮನ ಸೆಳೆದರು.

ಮಡಿಕೇರಿ, ಜ.14– ಕೊಡಗು ಜಿಲ್ಲೆಯಲ್ಲಿ ಸುರಿದ ಅಕಾಲಿಕ ಮಳೆಯಿಂದ ಕಾಫಿ ಬೆಳೆ ನಷ್ಟವಾಗಿದ್ದು, ಈ ಬಗ್ಗೆ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಕಾಫಿ ಮಂಡಳಿಗೆ ಸೂಚಿಸುವುದಾಗಿ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಭರವಸೆ ನೀಡಿದರು.

ಕೊಡಗು ಬೆಳೆಗಾರರ ಒಕ್ಕೂಟದ ನಿಯೋಗ ಸಲ್ಲಿಸಿದ ಅಕಾಲಿಕ ಮಳೆಯಿಂದ ಉಂಟಾದ ಅಪಾರ ನಷ್ಟದ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಕಾಫಿ ಕೇಂದ್ರ ಸರ್ಕಾರದ ವಾಣಿಜ್ಯ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದ್ದು, ಅಕಾಲಿಕ ಮಳೆಯಿಂದ ಉಂಟಾಗಿರುವ ಕಾಫಿ ಬೆಳೆಗಾರರ ಸಂಕಷ್ಟವನ್ನು ಕೇಂದ್ರವೇ ಪರಿಗಣನೆ ಮಾಡಬೇಕಾಗಿದೆ ಎಂದರು.

ಜಿಲ್ಲಾಧಿಕಾರಿಗೆ ಮನವಿ: ಕೊಡಗು ಬೆಳೆಗಾರರ ಒಕ್ಕೂಟದ ನಿಯೋಗ ಮಡಿಕೇರಿಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರನ್ನು ಭೇಟಿ ಮಾಡಿ ಬೆಳೆ ನಷ್ಟದ ಬಗ್ಗೆ ಮನವಿ ಸಲ್ಲಿಸಿತು.

ನಂತರ ಮಾತನಾಡಿದ ಜಿಲ್ಲಾಧಿಕಾರಿ, ಕಳೆದ ಮಳೆಗಾಲದಲ್ಲಿ ಕೊಳೆರೋಗಕ್ಕೆ ತುತ್ತಾದ ಕಾಫಿ ಬೆಳೆಯ ನಷ್ಟದ ಸಮೀಕ್ಷೆ ನಡೆಸಲು ಕಾಫಿ ಮಂಡಳಿಗೆ ಸೂಚಿಸಲಾಗಿತ್ತು. ಈಗ ಅಕಾಲಿಕ ಮಳೆಯಿಂದ ನಷ್ಟದ ಸಮೀಕ್ಷೆಗೂ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದು ಎಂದು ಭರವಸೆ ನೀಡಿದರು.

ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಕೇಚಂಡ ಕುಶಾಲಪ್ಪ, ಕಾರ್ಯದರ್ಶಿ ಅಣ್ಣೀರ ಹರೀಶ್ ಮಾದಪ್ಪ, ಖಜಾಂಚಿ ಮಾಣೀರ ವಿಜಯ ನಂಜಪ್ಪ, ಸ್ಥಾಪಕ ಸದಸ್ಯ ಮಾಣೀರ ಮುತ್ತಪ್ಪ, ಸದಸ್ಯರಾದ ಕೋಳೆರ ಭಾರತಿ, ಬಲ್ಯಮೀದೇರೀರ ಶರಣ್ ಚಂಗಪ್ಪ, ಬಲ್ಯಮೀದೇರೀರ ಸಂಪತ್ ಹಾಗೂ ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರೀರ ನವೀನ್ ಹಾಜರಿದ್ದರು.

ಜ.21ಕ್ಕೆ ಡಿಸಿಸಿ ಬ್ಯಾಂಕ್ ಉನ್ನತಿ ಭವನ ಉದ್ಘಾಟನೆ



ಸುದ್ದಿಗೋಷ್ಠಿಯಲ್ಲಿ ಕೊಡಗು ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಪಿ.ಗಣಪತಿ ಮಾತನಾಡಿದರು.

ಮಡಿಕೇರಿ, ಜ.14–ಕೊಡಗು ಜಿಲ್ಲಾ ಸಹಕಾರ ಬ್ಯಾಂಕ್ ಶತಮಾನ ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ ಮಡಿಕೇರಿಯಲ್ಲಿ 8.44 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶತಮಾನೋತ್ಸವ ಭವನದ 'ಉನ್ನತಿ'ಯ ಉದ್ಘಾಟನಾ ಸಮಾರಂಭ ಜ.21ರಂದು ನಡೆಯಲಿದೆ ಎಂದು ಬ್ಯಾಂಕ್ ಅಧ್ಯಕ್ಷ ಕೊಡಂದೇರ ಪಿ.ಗಣಪತಿ ತಿಳಿಸಿದರು.

ಶತಮಾನೋತ್ಸವ ಅಂಗವಾಗಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಜ.15ರಂದು ಬೆಳಗ್ಗೆ 7 ಗಂಟೆಗೆ ನೂತನ ಶತಮಾನೋತ್ಸವ ಕಟ್ಟಡದ ಗಣಹೋಮ ಹಾಗೂ ಬೆಳಗ್ಗೆ 10.30ಕ್ಕೆ ಸತ್ಯನಾರಾಯಣ ಪೂಜೆ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಾಹನ–ಸಾಲ ಮೇಳ: ಜ.19 ಮತ್ತು 20ರಂದು ಬ್ಯಾಂಕ್ ಗ್ರಾಹಕರು, ಕೃಷಿಕರು ಹಾಗೂ ಜಿಲ್ಲೆಯ ಜನರಿಗಾಗಿ ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ನಗರದ ಗಾಂಧಿ ಮೈದಾನದಲ್ಲಿ ಜಿಲ್ಲಾ ಮಟ್ಟದ ವಾಹನ ಹಾಗೂ ಕೃಷಿ ಯಂತ್ರೋಪಕರಣಗಳ ಸಾಲ ಮೇಳ ಆಯೋಜಿಸಲಾಗಿದೆ. ಸಾಲ ಮೇಳದಂದು ಬ್ಯಾಂಕ್ ವತಿಯಿಂದ ವಾಹನ ಖರೀದಿಗಾಗಿ ಪಡೆಯುವ ಸಾಲದ ಮೊತ್ತದ ಮೇಲೆ ಶೇ.5ರಷ್ಟು ಹಾಗೂ ಕೃಷಿ ಉಪಯೋಗಿ ಯಂತ್ರೋಪಕರಣಗಳ ಖರೀದಿದಾರರಿಗೆ ಸಾಲದ ಮೊತ್ತದ ಮೇಲೆ ಶೇ.7ರಷ್ಟು ರಿಯಾಯಿತಿ ನೀಡಲಾಗುವುದು. ಸಾಲದ ಮೇಲಿನ ಸಂಸ್ಕರಣಾ ಶುಲ್ಕಕ್ಕೆ ಸಂಪೂರ್ಣ ವಿನಾಯಿತಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಗಣ್ಯರಿಂದ ಉದ್ಘಾಟನೆ: ಜ.21ರಂದು ಬೆಳಗ್ಗೆ 10 ಗಂಟೆಗೆ ಬ್ಯಾಂಕ್‌ನ 'ಉನ್ನತಿ' ಭವನವನ್ನು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು ಉದ್ಘಾಟಿಸಲಿದ್ದು, ಆಡಳಿತ ಮಂಡಳಿ ಸಭಾಂಗಣವನ್ನು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ, ಬ್ಯಾಂಕ್‌ನ ಭದ್ರತಾ ಕೊಠಡಿಯನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದಾರೆ. ಕಾವೇರಿ ಪ್ರತಿಮೆಯನ್ನು ಶಾಸಕ ಡಾ.ಮಂತರ್‌ಗೌಡ, ಬ್ಯಾಂಕ್‌ನ ಸ್ಥಾಪಕಾಧ್ಯಕ್ಷ ರಾವ್ ಬಹದ್ದೂರ್ ಕೊಡಂದೇರ ಕುಟ್ಟಯ್ಯ ಅವರ ಪ್ರತಿಮೆಯನ್ನು ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಅನಾವರಣಗೊಳಿಸಲಿದ್ದು, ದಿ.ಪಂದ್ಯಂಡ ಬೆಳ್ಯಪ್ಪ ಸಭಾಂಗಣವನ್ನು ರಾಜ್ಯ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಬೆಳ್ಳಿ ಪ್ರಕಾಶ್ ಉದ್ಘಾಟಿಸಲಿದ್ದಾರೆ ಎಂದು ಗಣಪತಿ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬ್ಯಾಂಕ್‌ನ ಉಪಾಧ್ಯಕ್ಷ ಕೇಟೋಳಿರ ಹರೀಶ್ ಪೂವಯ್ಯ, ನಿರ್ದೇಶಕ ಹೊಟ್ಟೆಯಂಡ ರಮೇಶ್, ಕನ್ನಂಡ ಸಂಪತ್, ಕಿಮ್ಮುಡಿರ ಜಗದೀಶ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಉಮಾಕಾಂತ್ ಉಪಸ್ಥಿತರಿದ್ದರು.

ನಾಳೆ ನೇರ ಸಂದರ್ಶನ

ಮಡಿಕೇರಿ, ಜ.14– ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ಕೊಡಗು ಜಿಲ್ಲೆಯ ಪಾರಾಣೆ ಮತ್ತು ಶ್ರೀಮಂಗಲ ಆಯುಷ್ ಆರೋಗ್ಯ ಹಾಗೂ ಕ್ಷೇಮ ಕೇಂದ್ರಗಳಿಗೆ ಕಮ್ಯುನಿಟಿ ಹೆಲ್ತ್ ಆಫೀಸರ್ (ಸಿಎಚ್‌ಓ) ಹುದ್ದೆ ಹಾಗೂ ವಿರಾಜಪೇಟೆಯ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಖಾಲಿ ಮಲ್ಟಿಪರ್ಪಸ್ ವರ್ಕರ್ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಜ.16ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಆಯುಷ್ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿ ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ನೇರ ಸಂದರ್ಶನ ನಡೆಯಲಿದೆ.

ರಾಷ್ಟ್ರಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ಸ್‌ಗೆ ಜಿಲ್ಲೆಯ ಕ್ರೀಡಾಪಟುಗಳು ಆಯ್ಕೆ



ಬೆಂಗಳೂರಿನ ಹೊಸಕೋಟೆಯಲ್ಲಿ ನಡೆದ ರಾಜ್ಯಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್‌ನಲ್ಲಿ ಪ್ರಶಸ್ತಿಗಳಿಸಿದ ಜಿಲ್ಲೆಯ ಕ್ರೀಡಾಪಟುಗಳು.

ಗೋಣಿಕೊಪ್ಪ, ಜ.14– ಬೆಂಗಳೂರಿನ ಹೊಸಕೋಟೆಯಲ್ಲಿ ನಡೆದ 43ನೇ ರಾಜ್ಯಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಜಿಲ್ಲೆಯ 20 ಕ್ರೀಡಾಪಟುಗಳು ವಿವಿಧ ಪ್ರಶಸ್ತಿ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಫೆ.13 ರಿಂದ 17ರವರೆಗೆ ಪುಣೆಯಲ್ಲಿ ರಾಷ್ಟ್ರಮಟ್ಟದ ಅಥ್ಲೆಟಿಕ್ ನಡೆಯಲಿದೆ. 80ರ ವಯೋಮಿತಿ ವಿಭಾಗದಲ್ಲಿ ಪೆಮ್ಮಂಡ ಅಪ್ಪಯ್ಯ 100 ಮೀ. ಓಟದಲ್ಲಿ ತೃತೀಯ ಸ್ಥಾನ, 400 ಮೀ. (ಪ್ರ), 75ರ ವಯೋಮಿತಿಯ ಗುಂಡು ಎಸೆತ, ಉದ್ದ ಜಿಗಿತ, ಟ್ರಿಪಲ್ ಜಂಪ್‌ನಲ್ಲಿ ಪೊನ್ನಚನ ಮಾದಪ್ಪ (ಪ್ರ), 70ರ ವಯೋಮಿತಿಯ 100 ಮೀ. ಓಟ ಹಾಗೂ ಗುಂಡು ಎಸೆತದಲ್ಲಿ ಮುಲ್ಲೆರ ಪೊನ್ನಮ್ಮ ಪೂವಣ್ಣ (ಪ್ರ), 65ರ ವಯೋಮಿತಿಯ 800 ಮೀ., 1500 ಮೀ. ಓಟದಲ್ಲಿ ನಂದಿನೆರವಂಡ ಟಿಪ್ಪು ಬಿದ್ದಪ್ಪ (ಪ್ರ), 5ಕೆ ಓಟ (ದ್ವಿ), 60ರ ವಯೋಮಿತಿಯಲ್ಲಿ ಚೇಮಿರ ಸೀತಮ್ಮ ತಟ್ಟೆ ಎಸೆತ, ಗುಂಡು ಎಸೆತದಲ್ಲಿ (ಪ್ರ), ಜಾವಲಿನ್ (ತೃ) ಸ್ಥಾನಗಳಿಸಿದ್ದಾರೆ.

55ರ ವಯೋಮಿತಿಯ ತಟ್ಟೆ ಎಸೆತ ಮತ್ತು ಗುಂಡು ಎಸೆತದಲ್ಲಿ ಮಂಡೇಪಂಡ ಭೀನ ನಿತಿನ್ (ದ್ವಿ), ಜಾವಲಿನ್‌ನಲ್ಲಿ ಪಾಸುರ ಇಂದಿರಾ ಮುತ್ತಣ್ಣ (ದ್ವಿ), 1500 ಮೀ., 5ಕೆ ಓಟ, 10ಕೆ. ಓಟದಲ್ಲಿ ಹೊಸೊಕ್ಲು ಚಿಣ್ಣಪ್ಪ (ಪ್ರ), 200 ಮೀ, 400 ಮೀ. (ದ್ವಿ) ವಸಂತಿ, ಜಾವಲಿನ್, ಗುಂಡು ಎಸೆತ ಕೆ.ಇ.ಚಂದ್ರಾವತಿ (ತೃ), ಜಾವಲಿನ್, 5ಕೆ ಓಟದ ಕೆ.ಜೆ. ಗಿರಿಜಾ (ಪ್ರ) 200 ಮೀ. ಓಟದಲ್ಲಿ (ದ್ವಿ), ತಟ್ಟೆ ಎಸೆತ, ಜಾವಲಿನ್‌ನಲ್ಲಿ ಕೆ.ವಿ.ರಾಮ ಕೃಷ್ಣ (ದ್ವಿ), 45ರ ವಿಭಾಗದಲ್ಲಿ 1500 ಮೀ, 10ಕೆ ಓಟದಲ್ಲಿ ಟಿ.ಹೆಚ್.ಗಣೇಶ್ (ಪ್ರ) ಸ್ಥಾನ ಪಡೆದಿದ್ದಾರೆ.

40ರ ವಯೋಮಿತಿ 400 ಮೀ., 800 ಮೀ. ಓಟದಲ್ಲಿ ಬೊಪ್ಪಂಡ ಕುಸುಮ ಭೀಮಯ್ಯ (ಪ್ರ), ಗುಂಡು ಎಸೆತದಲ್ಲಿ (ದ್ವಿ), ಟ್ರಿಪಲ್ ಜಂಪ್‌ನಲ್ಲಿ ಕಂಬೀರಂಡ ರಾಖಿ ಪೂವಣ್ಣ (ಪ್ರ), ಉದ್ದ ಜಿಗಿತದಲ್ಲಿ (ದ್ವಿ), 35ರ ವಿಭಾಗದಲ್ಲಿ ಗುಂಡು, ತಟ್ಟೆ ಎಸೆತ (ದ್ವಿ), 100 ಮೀ. ಹರ್ಡಲ್ಸ್‌ನಲ್ಲಿ ಪೊನ್ನಚನ ಅರುಣ್ (ಪ್ರ), ಗುಂಡು ಎಸೆತ, ಜಾವಲಿನ್‌ನಲ್ಲಿ (ಪ್ರ) ಹೇಮರ್‌ನಲ್ಲಿ ಮನೆಯಪಂಡ ದೇಚಮ್ಮ ಕಾಳಪ್ಪ (ದ್ವಿ), 10ಕೆ ಓಟದಲ್ಲಿ ಪಡಿಕಲ್ ಕುಸುಮಾವತಿ (ಪ್ರ), 1500 ಮೀ., 5ಕೆ. ಓಟದಲ್ಲಿ (ತೃ) ಹಾಗೂ 800, 1500 ಮೀ. ಓಟದಲ್ಲಿ (ಪ್ರ). 5ಕೆ ಓಟದಲ್ಲಿ ಸೂದನ ಡಾಲಿ (ದ್ವಿ) ಸ್ಥಾನ ಗಳಿಸಿದ್ದಾರೆ.



ವಿರಾಜಪೇಟೆ ತಾಲೂಕಿನ ಕುಂಜಲಗೇರಿ ಗ್ರಾಮದ ಶ್ರೀ ಮಡಕೊಡ ಶಾಸ್ತವು ಈಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 2 ಲಕ್ಷ ರೂ. ಡಿಡಿಯನ್ನು ದೇವಸ್ಥಾನ ಸಮಿತಿಯ ಅಧ್ಯಕ್ಷ ಚಿಯಂಡಿರ ನವೀನ್ ಮುತ್ತಣ್ಣಗೆ ತಾಲೂಕು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ದಿನೇಶ್ ಹಸ್ತಾಂತರಿಸಿದರು. ಯೋಜನೆಯ ಮೇಲ್ವಿಚಾರಕ ನಾಗರಾಜ್, ದೇವಸ್ಥಾನ ಸಮಿತಿಯ ಕುಳಿಯಕಂಡ ಪೊನ್ನಣ್ಣ, ಚಿಯಂಡಿರ ಸುಬ್ರಮಣಿ, ಭಂಟರ ಗಿರೀಶ್ ರೈ, ಲೀಲಾದರ ರೈ, ದೀಪಕ್ ರೈ, ವಲ್ಲಂಡ ಅಯ್ಯಪ್ಪ, ಪಾಲೇಕಂಡ ತಿಮ್ಮಯ್ಯ ಅಲ್ಲಪಿರ ನಾಣಯ್ಯ, ಕುಂಜಿಲಗೇರಿ ಗ್ರಾಮಸ್ಥರು ಇದ್ದರು.

ಬಸ್ ನಿಲ್ದಾಣದಲ್ಲಿ ಸಿಕ್ಕ ಹಣದ ಬ್ಯಾಗ್ ಹಿಂದಿರುಗಿಸಿದ ಪ್ರತಿಮಾ, ಲಕ್ಷಿತಾ



ಕುಶಾಲನಗರ ಬಸ್ ನಿಲ್ದಾಣದಲ್ಲಿ ಸಿಕ್ಕಿದ ಹಣದ ಬ್ಯಾಗ್ ಅನ್ನು ಪ್ರತಿಮಾ ಹಾಗೂ ಲಕ್ಷಿತಾ ಅವರು ಮಾಲೀಕ ತುಂಬೋ ಅವರಿಗೆ ಹಿಂದಿರುಗಿಸಿದರು.

ಕುಶಾಲನಗರ, ಜ.14– ಪಟ್ಟಣದ ಬಸ್ ನಿಲ್ದಾಣದಲ್ಲಿ ಸಿಕ್ಕಿದ 30 ಸಾವಿರ ರೂ. ಇದ್ದ ಬ್ಯಾಗ್ ಅನ್ನು ನರ್ಸ್ ಪ್ರತಿಮಾ ಹಾಗೂ ವಿದ್ಯಾರ್ಥಿನಿ ಲಕ್ಷಿತಾ ಅವರು ಮಾಲೀಕ ಟಿಬೆಟಿಯನ್ ತುಂಬೋ ಅವರಿಗೆ ಹಿಂದಿರುಗಿಸಿ ಪ್ರಾಮಾಣಿಕತೆ ಮೆರೆದರು.

ಸೋಮವಾರಪೇಟೆಯ ತಾಕೇರಿಯ ಗುತ್ತಿಗೆದಾರ ಅರುಣ್ ಅವರ ಪತ್ನಿಯಾದ ಮೈಸೂರಿನ ರೇಡಿಯಂಟ್ ಆಸ್ಪತ್ರೆಯ ದಾದಿ ಪ್ರತಿಮಾ ಹಾಗೂ ಉಪನ್ಯಾಸಕ ನಂಜುಂಡಸ್ವಾಮಿ ಮತ್ತು ಪುರಸಭೆ ಸದಸ್ಯೆ ಜಯಲಕ್ಷ್ಮಮ್ಮ ದಂಪತಿಯ ಪುತ್ರಿಯಾದ ಮೈಸೂರಿನ ವಿದ್ಯಾವರ್ಧಕ ಕಾಲೇಜಿನ ಕಾನೂನು ವಿದ್ಯಾರ್ಥಿನಿ ಲಕ್ಷಿತಾ ಅವರಿಗೆ ಬಸ್ ನಿಲ್ದಾಣದಲ್ಲಿ 30 ಸಾವಿರ ರೂ. ಇದ್ದ ಬ್ಯಾಗ್ ಸಿಕ್ಕಿತ್ತು.

ನಂತರ ಪೊಲೀಸರ ಗಮನಕ್ಕೆ ತಂದು ಬ್ಯಾಗ್‌ನ ಮಾಲೀಕ ಟಿಬೆಟಿಯನ್ ತುಂಬೋ ಅವರಿಗೆ ಹಿಂದಿರುಗಿಸಿದರು. ಇವರಿಬ್ಬರ ಪ್ರಾಮಾಣಿಕತೆಗೆ ನಿಲ್ದಾಣದಲ್ಲಿದ್ದ ಪ್ರಯಾಣಿಕರು ಪ್ರಶಂಸೆ ವ್ಯಕ್ತಪಡಿಸಿದರು.

ಅಂಬೇಡ್ಕರ್ ಸಹಕಾರ ಸಂಘ ಸ್ಥಾಪನೆಗೆ ಸಹಮತ

ಚಾಮರಾಜನಗರದಲ್ಲಿ ಸಮುದಾಯದ ಮುಖಂಡರ ಪೂರ್ವಭಾವಿ ಸಭೆ



ಚಾಮರಾಜನಗರದ ರೋಟರಿ ಭವನದಲ್ಲಿ ನಡೆದ ತಾಲೂಕು ಸ್ವಾಭಿಮಾನಿ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ ಮತ್ತು ಸಹಕಾರ ಸಂಘದ ಪೂರ್ವಭಾವಿ ಸಭೆಯನ್ನು ಸಮುದಾಯದ ಮುಖಂಡರು ಉದ್ಘಾಟಿಸಿದರು.

ಚಾಮರಾಜನಗರ, ಜ.14– ತಾಲೂಕು ಸ್ವಾಭಿಮಾನಿ ಡಾ.ಬಿ.ಆರ್. ಅಂಬೇಡ್ಕರ್ ಮಹಾಸಭಾ ಮತ್ತು ಸಹಕಾರ ಸಂಘದ ಸ್ಥಾಪನೆಗೆ ಸಭೆಯಲ್ಲಿ ಸಮುದಾಯದ ಮುಖಂಡರು ಸಹಮತ ವ್ಯಕ್ತಪಡಿಸಿದರು.

ನಗರದ ರೋಟರಿ ಭವನದಲ್ಲಿ ನಡೆದ ತಾಲೂಕು ಪೂರ್ವಭಾವಿ ಸಭೆಯಲ್ಲಿ ನಗರಸಭಾ ಸದಸ್ಯ ಆರ್.ಪಿ. ನಂಜುಂಡಸ್ವಾಮಿ ಮಾತನಾಡಿ, ತಾಲೂಕಿನಲ್ಲಿ ಸಂಘಟನೆ ಮಾಡಿ ಅಂಬೇಡ್ಕರ್ ಸಹಕಾರ ಸಂಘದ ಸ್ಥಾಪನೆಗೆ ಮುಂದಾಗಿರುವುದು ಸಮುದಾಯ ಬೆಳವಣಿಗೆಗೆ ಪೂರಕವಾಗಿದೆ. ಇಂತಹ ಸಹಕಾರ ಸಂಘ ಸಮುದಾಯದ ಅಭಿವೃದ್ಧಿಗೆ ಸಹಕಾರಿಯಾಗಿದೆ. ಇದಕ್ಕೆ ತಾಲೂಕಿನ ಸಮುದಾಯದ ಎಲ್ಲರ ಸಹಕಾರ ಅವಶ್ಯಕವಾಗಿದ್ದು, ಇದಕ್ಕೆ ಶಕ್ತಿ ತುಂಬುವ ಕೆಲಸ ಆಗಬೇಕು ಮನವಿ ಮಾಡಿದರು.

ಸಮುದಾಯದ ಮಾಜಿ ರಾಜ್ಯಪಾಲ ಬಿ.ರಾಚಯ್ಯ ಹಾಗೂ ಶಿಕ್ಷಣ ತಜ್ಞ ಕೆ.ಸಿ.ರಂಗಯ್ಯನವರು ಕಾಲವಾದ ನಂತರ ಸಮುದಾಯದ ಚಟುವಟಿಕೆ ಇಲ್ಲ. ಇದಕ್ಕೆ ಒಗ್ಗಟ್ಟಿನ ಕೊರತೆ ಇದೆ. ಆಗಾಗಿ ಅವರ ಆಶಯಗಳನ್ನು ಜಾರಿಗೊಳಿಸುವ ಮೂಲಕ ತಾಲೂಕಿನ ಸಮುದಾಯವನ್ನು ಮುನ್ನಡೆಸಿ, ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ತಾಲೂಕು ಸ್ವಾಭಿಮಾನಿ ಅಂಬೇಡ್ಕರ್ ಮಹಾಸಭಾ ಮತ್ತು ಸಹಕಾರ ಸಂಘದ ಸ್ಥಾಪನೆಗೆ ಚಿಂತನೆ ಮಾಡಲಾಗಿದೆ ಎಂದರು.

ನಾನು ಇದರ ಅಧ್ಯಕ್ಷನಾಗುವ ಆಶೆಯಿಂದ ಇದನ್ನು ಮಾಡಿಲ್ಲ. ಸಮುದಾಯದ ಯಾರು ಬೇಕಾದರೂ ಚುನಾವಣೆ ಮೂಲಕ ಅಧ್ಯಕ್ಷರಾಗಬಹುದು ನನ್ನದ್ದು ಯಾವುದೇ ಅಭ್ಯಂತರ ಇಲ್ಲ. ತಾಲೂಕಿನ ಹೋಬಳಿ ಪಟ್ಟಣದಲ್ಲಿ ನಿರ್ದೇಶಕರನ್ನು ಆಯ್ಕೆ ಮಾಡಬೇಕು. ಎಲ್ಲರೂ ಒಗ್ಗಟ್ಟಿನಿಂದ ಹೋಗಬೇಕು ಎನ್ನುವುದು ನಮ್ಮ ಆಶಯವಾಗಿದೆ ಎಂದರು.

ಜಿಪಂ ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್ ಮಾತನಾಡಿ, ಆರ್.ಪಿ.ನಂಜುಂಡಸ್ವಾಮಿ ಅವರು ಸಮುದಾಯದ ಹಿತ ಬಯಸಿ ತಾಲೂಕು ಸ್ವಾಭಿಮಾನಿ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ ಮತ್ತು ಸಹಕಾರ ಸಂಘ ಸ್ಥಾಪನೆಗೆ ಮುಂದಾಗಿರುವುದು ಸಮಾಜದ ಅಭಿವೃದ್ಧಿಯ ಕೆಲಸವಾಗಿದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ ನಾನು ಕೂಡ ಇದಕ್ಕೆ ಸಂಪೂರ್ಣ ಬೆಂಬಲ ನೀಡಿ ಹೆಚ್ಚಿನ ಷೇರುಗಳನ್ನು ಕೊಡುವುದಾಗಿ ತಿಳಿಸಿದರು.

ದಲಿತ ಮುಖಂಡ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿ, ಇಂದಿನ ಸರ್ಕಾರಗಳು ಎಲ್ಲವನ್ನು ಖಾಸಗೀಕರಣ ಮಾಡುತ್ತಿದ್ದು ಮುಂದಿನ ದಿನಗಳಲ್ಲಿ ಸಮುದಾಯದ ಮಕ್ಕಳು ಸರ್ಕಾರಿ ನೌಕರಿ ಪಡೆಯುವುದು ಕಷ್ಟವಾಗುತ್ತದೆ. ಆಗಾಗಿ ಹೆಚ್ಚಿನ ಲಾಭದ ವ್ಯಾಪಾರಿ ರಂಗದಲ್ಲಿ ತೊಡಗಿಕೊಳ್ಳಬೇಕಾದರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಸೌಲಭ್ಯ ಸಿಗುವುದು ಕಷ್ಟ. ಸಹಕಾರ ಸಂಘ ಸ್ಥಾಪನೆ ಸಮುದಾಯಕ್ಕೆ ಬಹಳ ಅವಶ್ಯಕವಾಗಿದ್ದು, ಸಮುದಾಯದ ಮಕ್ಕಳು ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲಸೌಲಭ್ಯ ಕೊಡಬಹುದು. ಆದ್ದರಿಂದ ಈ ಸಹಕಾರ ಸಂಘದ ಸ್ಥಾಪನೆ ಅನಿವಾರ್ಯವಾಗಿದೆ ಎಂದರು.

ಸಭೆಯಲ್ಲಿ ಯಜಮಾನರಾದ ಚೆನ್ನಂಜಯ್ಯ, ನಾಗಣ್ಣ, ಸಿದ್ದಯ್ಯ, ಮೂರ್ತಿ, ತಾಪಂ ಮಾಜಿ ಸದಸ್ಯ ಕಾಗಲವಾಡಿ ಶಿವಸ್ವಾಮಿ, ಗ್ರಾಪಂ ಸದಸ್ಯ ಜಯಶಂಕರ್, ಮಾಜಿ ಅಧ್ಯಕ್ಷ ಗೋವಿಂದರಾಜು, ಮುಖಂಡ ಕೆ.ಎಂ.ನಾಗರಾಜು, ಸಿ.ಎಂ.ಶಿವಣ್ಣ, ಎಸ್.ಪಿ.ಮಹೇಶ್ ಕಾಗಲವಾಡಿ ಕೃಷ್ಣಮೂರ್ತಿ, ನಾಗರಾಜು, ಹೊಂಡರಬಾಳು ವಾಸು, ಮೋಹನ್ ನಗು, ಅಕ್ಷಯ್, ರಾಮಸಮುದ್ರ ಬಾಬು ಸೇರಿ 300ಕ್ಕೂ ಹೆಚ್ಚು ಮುಖಂಡರು ಹಾಜರಿದ್ದರು.

ಮುರುಘರಾಜೇಂದ್ರ ವಿದ್ಯಾಸಂಸ್ಥೆಗೆ 5 ಲಕ್ಷ ಅನುದಾನ

ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಭರವಸೆ



ಚಾಮರಾಜನಗರ ತಾಲೂಕಿನ ಮರಿಯಾಲದ ಮುರುಘಾ ರಾಜೇಂದ್ರ ಸಿಬಿಎಸ್‌ಇ ಶಾಲಾ ವಾರ್ಷಿಕೋತ್ಸವವನ್ನು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಉದ್ಘಾಟಿಸಿದರು. ಶ್ರೀ ಇಮ್ಮಡಿಮುರುಘರಾಜೇಂದ್ರಸ್ವಾಮೀಜಿ, ಶ್ರೀ ಚನ್ನಬಸವಸ್ವಾಮೀಜಿ, ಡಾ.ಎಂ.ತಿರುಮಲ್ಲೇಶ್, ವಕೀಲ ಅರುಣ್ ಕುಮಾರ್ ಇತರರು ಹಾಜರಿದ್ದರು.

ಚಾಮರಾಜನಗರ, ಜ.14– ಮರಿಯಾಲ ಶ್ರೀ ಮುರುಘ ರಾಜೇಂದ್ರ ಸ್ವಾಮಿ ವಿದ್ಯಾಸಂಸ್ಥೆಯ ಮೂಲ ಸೌಕರ್ಯಕ್ಕೆ ತಮ್ಮ ವಿಧಾನಪರಿಷತ್ ಕ್ಷೇತ್ರದ ಅಭಿವೃದ್ಧಿ ನಿಧಿಯಿಂದ 5 ಲಕ್ಷ ರೂ. ಅನುದಾನ ನೀಡುವುದಾಗಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಭರವಸೆ ನೀಡಿದರು.

ತಾಲೂಕಿನ ಮರಿಯಾಲದ ಶ್ರೀ ಮುರುಘ ರಾಜೇಂದ್ರಸ್ವಾಮಿ ಸಿಬಿಎಸ್‌ಇ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಮುರುಘ ರಾಜೇಂದ್ರ ಸಂಸ್ಥಾನ ಮಠದ ಭಕ್ತರಲ್ಲಿ ನಾನೂ ಒಬ್ಬ. ಮಠ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ಮಾಜಿ ಸಚಿವ ರಾಜಶೇಖರ ಮೂರ್ತಿ ಅವರು ಮಠದ ಭಕ್ತರಾಗಿದ್ದು, ಮಠದಲ್ಲಿ ಶಿಕ್ಷಣ ಸಂಸ್ಥೆಗಳು ಬೆಳೆಯುವುದಕ್ಕೆ ಬಹಳಷ್ಟು ಸಹಕಾರ ನೀಡಿದ್ದಾರೆ. ಇಂದು ಭಕ್ತರ ಸಹಕಾರದಲ್ಲಿ ಶ್ರೀಮಠ ಉತ್ತಮ ಶಿಕ್ಷಣ ನೀಡುತ್ತಿದೆ ಇದು ಈ ಭಾಗದ ಪೋಷಕರು, ವಿದ್ಯಾರ್ಥಿಗಳ ಸೌಭಾಗ್ಯ ಎಂದು ಭಾವಿಸಿಕೊಳ್ಳಬೇಕಿದೆ ಎಂದರು.

ಈ ಶಾಲೆಯಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಸಂತಸವಾಗುತ್ತಿದೆ. ಗ್ರಾಮೀಣ ಪ್ರದೇಶದ ಈ ಶಾಲೆಯಲ್ಲಿ ನುರಿತ ಶಿಕ್ಷಕ ವೃಂದ ಕೆಲಸ ಮಾಡುತ್ತಿದೆ. ಶಿಕ್ಷಕರು ಪ್ರತಿ ಮಕ್ಕಳನ್ನು ಆಧರಿಸಿ ವಿದ್ಯಾರ್ಥಿಗಳ ಭವಿಷ್ಯವನ್ನು ಆಧಾರವಾಗಿಟ್ಟುಕೊಂಡು ಪ್ರೀತಿಯಿಂದ ಗುಣಾತ್ಮಕ ಶಿಕ್ಷಣವನ್ನು ನೀಡುತ್ತಿದ್ದಾರೆ. ಪೋಷಕರು ನಿತ್ಯ ಮಕ್ಕಳ ಕಲಿಕೆ ಬಗ್ಗೆ ಗಮನಿಸಬೇಕು. ಮಕ್ಕಳ ಜೊತೆ ಶಿಕ್ಷಣ ಬಗ್ಗೆ ಆಸಕ್ತಿ ಮೂಡಿಸಬೇಕು. ಆಗ ಮಕ್ಕಳ ಬೆಳವಣಿಗೆ, ಪ್ರೀತಿ, ವಿಶ್ವಾಸದಿಂದ ಕಲಿಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸ್ವಾಮಿವಿವೇಕಾನಂದರು ಹೇಳಿದಂತೆ ವಿದ್ಯಾರ್ಥಿಗಳು ಪಠ್ಯಕ್ರಮದಿಂದ ಕಲಿಯುವುದಕ್ಕಿಂತ ಹೆಚ್ಚಾಗಿ ಶಿಕ್ಷಕರು, ಪೋಷಕರನ್ನು ನೋಡಿ ಕಲಿಯುಸುವುದು ಬಹಳ ಇದೆ. ಶಿಕ್ಷಕರಲ್ಲಿ ಮಾನವೀಯ ಮೌಲ್ಯಗಳು, ಸಂಸ್ಕಾರಗಳು, ನೈತಿಕತೆ ಬದುಕನ್ನು ತಾವು ಕಾಣಬೇಕು. ಅದನ್ನು ಬದುಕಿನಲ್ಲಿ ರೂಢಿಸಿಕೊಳ್ಳಬೇಕು. ಜಗಜ್ಯೋತಿ ಬಸವೇಶ್ವರರ ಚಿಂತನೆಗಳು ಕೂಡ ಸಾಮಾಜಿಕ, ಧಾರ್ಮಿಕ ಚಿಂತನೆಯಾಗಿತ್ತು. ಅವರು ಕೂಡ ಸಮಾನತೆ, ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದರು. ಅವರ ವಿಚಾರಧಾರೆಗಳನ್ನು ಮಕ್ಕಳಿಗೆ ಧಾರೆ ಎರೆಯಬೇಕು ಎಂದರು. ಕೃಷಿ ಜಂಟಿ ನಿರ್ದೇಶಕ ಡಾ.ಎಂ.ತಿರುಮಲ್ಲೇಶ್, ಹಿರಿಯ ವಕೀಲ ಅರುಣ್ ಕುಮಾರ್ ಮಾತನಾಡಿದರು. ಮರಿಯಾಲದ ಶ್ರೀ ಮುರುಘ ರಾಜೇಂದ್ರ ಸಂಸ್ಥಾನ ಮಠಾಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘ ರಾಜೇಂದ್ರಸ್ವಾಮೀಜಿ ಹಾಗೂ ಚಾಮರಾಜನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಡಯಟ್‌ನ ಹಿರಿಯ ಉಪನ್ಯಾಸಕ ಯು.ಆರ್. ಲಿಂಗರಾಜೇ ಅರಸ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಂ.ಬಸಪ್ಪಣ್ಣ ಉಪಾಧ್ಯಕ್ಷ ಜಿ.ಕುಮಾರಸ್ವಾಮಿ, ಆಡಳಿತಾಧಿಕಾರಿ ಆರ್.ಡಿ.ನಾಗರಾಜು, ಪ್ರಾಂಶುಪಾಲ ಗಿರೀಶ್, ರಾಜ್ಯ ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ವೀರಭದ್ರಸ್ವಾಮಿ, ಪ್ರಧಾನ ಕಾರ್ಯದರ್ಶಿ ಕಿರಣ್‌ರಾಜು, ಕೆ.ಎಸ್.ಷಡಕ್ಷರಿ ಹಾಗೂ ಆಡಳಿತ ನಿರ್ದೇಶಕರು, ಪೋಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಪಡಿತರ ಅಕ್ಕಿ ಸಾಗಿಸುತ್ತಿದ್ದವನ ಬಂಧನ



ಆಟೋದಲ್ಲಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ವ್ಯಕ್ತಿಯನ್ನು ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು ಬಂಧಿಸಿರುವುದು.

ಕೊಳ್ಳೇಗಾಲ, ಜ.14– ಆಟೋದಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ವ್ಯಕ್ತಿಯನ್ನು ಪಟ್ಟಣ ಠಾಣೆ ಪೊಲೀಸರು ಬಂಧಿಸಿ, 7 ಮೂಟೆ ಅಕ್ಕಿ ವಶಪಡಿಸಿಕೊಂಡಿದ್ದಾರೆ. ಪಟ್ಟಣದ ನಾಯಕರ ಬೀದಿಯ ವಾಸಿ ಈಶ್ವರ್(44) ಬಂಧಿತ ಆರೋಪಿ. ಈತ ಆಟೋದಲ್ಲಿ 7 ಚೀಲಗಳಲ್ಲಿ ಅಕ್ಕಿಯನ್ನು ದಾಸನಪುರ ಮಾರ್ಗವಾಗಿ ಸಾಗಿಸುತ್ತಿದ್ದ. ಈ ವೇಳೆ ದಾಳಿ ನಡೆಸಿದ ಪೊಲೀಸರು, ಈತನನ್ನು ಬಂಧಿಸಿ ಪಡಿತರ ಹಾಗೂ ಆಟೋವನ್ನು ವಶಪಡಿಸಿಕೊಂಡಿದ್ದಾರೆ.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚೆನ್ನಾಲಿಂಗನಹಳ್ಳಿಯಲ್ಲಿ ಕರಡಿ ಕಳೇಬರ ಪತ್ತೆ



ಚಾಮರಾಜನಗರ, ಜ.14–ಹನೂರು ತಾಲೂಕಿನ ಲೊಕ್ಕನಹಳ್ಳಿ ಹೋಬಳಿಯ ಚೆನ್ನಾಲಿಂಗನಹಳ್ಳಿ ಗ್ರಾಮದ ಜಮೀನೊಂದರಲ್ಲಿ ಭಾನುವಾರ ಕರಡಿಯ ಕಳೇಬರ ಪತ್ತೆಯಾಗಿದೆ.

ಗ್ರಾಮದ ಚಿರಿಮಲ್ಲ ವೆಂಕಟಸುಬ್ಬಮ್ಮ ಅವರ ಜಮೀನಿನಲ್ಲಿ ಹೆಣ್ಣು ಕರಡಿಯ ಕಳೇಬರ ಪತ್ತೆಯಾಗಿದ್ದು, ಕರಡಿಯ ಮೈಮೇಲೆ ಗಾಯದ ಗುರುತುಗಳು ಕಂಡು ಬಂದಿವೆ. ಆದರೆ, ಕರಡಿಯ ಸಾವಿಗೆ ಯಾವುದೇ ಕಾರಣ ತಿಳಿದು ಬಂದಿಲ್ಲ. ಕಾಮಗೆರೆಯ ಪಶು ವೈದ್ಯಾಧಿಕಾರಿಗಳಿಂದ ಮರಣೋತ್ತರ ಪರೀಕ್ಷೆ ನಡೆಸಿ, ನಂತರ ಅರಣ್ಯ ಪ್ರದೇಶದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಅರಣ್ಯ ಪ್ರದೇಶದಲ್ಲಿ ಮೀನು ಹಿಡಿಯುತ್ತಿದ್ದ ಇಬ್ಬರ ಬಂಧನ



ಕೊಳ್ಳೇಗಾಲ ತಾಲೂಕಿನ ಜಾಗೇರಿಯ ಅರಣ್ಯ ಪ್ರದೇಶದ ನದಿಯಲ್ಲಿ ಮೀನು ಹಿಡಿಯುತ್ತಿದ್ದ ಇಬ್ಬರನ್ನು ಅರಣ್ಯ ಅಧಿಕಾರಿಗಳು ಬಂಧಿಸಿರುವುದು.

ಕೊಳ್ಳೇಗಾಲ, ಜ.14– ತಾಲೂಕಿನ ಜಾಗೇರಿ ಗ್ರಾಮದ ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸಿ, ಕಾವೇರಿ ನದಿಯಲ್ಲಿ ಮೀನು ಹಿಡಿಯುತ್ತಿದ್ದ ಇಬ್ಬರನ್ನು ಕೊಳ್ಳೇಗಾಲ ಬಫರ್ ವಲಯದ ಅರಣ್ಯ ಅಧಿಕಾರಿಗಳು ಬಂಧಿಸಿದ್ದಾರೆ.

ಜಾಗೇರಿ ಗ್ರಾಮದ ಶಿಲುವೈಪುರದ ನಿವಾಸಿ ಜಪಮಾಲೆ ಹಾಗೂ ಪಾಸ್ಕಲ್ ಪಾಲ್‌ರಾಜ್ ಬಂಧಿತರು. ಇವರು ಪ್ರತಿದಿನ ಅಕ್ರಮವಾಗಿ ಕಾಡಿನೊಳಗೆ ಪ್ರವೇಶ ಮಾಡಿ, ಮೀನುಗಾರಿಕೆಯಲ್ಲಿ ನಿರತರಾಗಿದ್ದರು. ನಿತ್ಯ 300 ರಿಂದ 400 ಕೆಜಿ ಮೀನುಗಳನ್ನು ಕಾವೇರಿ ನದಿಯಿಂದ ಹಿಡಿದು ಮಾರಾಟ ಮಾಡುತ್ತಿದ್ದರು. ಮಾಹಿತಿ ಮೇರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ, ಇಬ್ಬರು ಆರೋಪಿಗಳನ್ನು ಬಂಧಿಸಿ, 40 ಕೆಜಿ ಮೀನು ಮತ್ತು ಪರಿಕರಗಳು ವಶಪಡಿಸಿಕೊಂಡಿದ್ದಾರೆ.

ಮಹದೇವಸ್ವಾಮಿ ನಿಧನ



ಆಲೂರು, ಜ.14– ಚಾಮರಾಜನಗರ ತಾಲೂಕಿನ ಕೋಟಂಬಳ್ಳಿ ಗ್ರಾಮದ ವೀರಶೈವ ಮುಖಂಡರಾದ ಮಹದೇವಸ್ವಾಮಿ (53) ಶನಿವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಕೋಟಂಬಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಎಂ.ಬಿ.ರಾಜಪ್ಪ



ಚಾಮರಾಜನಗರ, ಜ.14–ತಾಲೂಕಿನ ಮೂಡ್ಲಾಕೂಡು ಗ್ರಾಮದ ನಿವಾಸಿ ಎಂ.ಬಿ.ರಾಜಪ್ಪ (73) ಅವರು ಹೃದಯಾಘಾತದಿಂದ ಭಾನುವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಹಾಗೂ ಬಂಧು–ಬಳಗ ಅಗಲಿದ್ದಾರೆ. ಸೋಮವಾರ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಚಿನ್ನಸ್ವಾಮಿ



ಚಾಮರಾಜನಗರ, ಜ14–ನಗರದ ಶಂಖನಪಾಳ್ಯ ಬಡಾವಣೆ ನಿವಾಸಿಯಾದ ನಿವೃತ್ತ ಉಪವಲಯ ಅರಣ್ಯಾಧಿಕಾರಿ ಎಸ್.ಚಿನ್ನಸ್ವಾಮಿ (70) ಶನಿವಾರ ರಾತ್ರಿ ನಿಧನರಾದರು. ಮೃತರು ಪಿಯುಸಿಎಲ್ ಜಿಲ್ಲಾ ಉಪಾಧ್ಯಕ್ಷರಾಗಿದ್ದರು. ಇವರು ಪತ್ನಿ, ಮೂವರು ಪುತ್ರಿಯರು, ಒಬ್ಬ ಪುತ್ರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಗರದಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಐದನೇ ಪುಟದಿಂದ

ಸೆಸ್ಕ್ ಮೊರೆ ಹೋದ ಹೆದ್ದಾರಿ ಪ್ರಾಧಿಕಾರ

ವಿದ್ಯುತ್ ಕಂಬ ಉರುಳಿ ಬಿದ್ದ ಪ್ರಕರಣ ಇನ್ನು ಮುಂದೆ ಮತ್ತೆ ಮರುಕಳಿಸದಂತೆ ಕಟ್ಟೆಚ್ಚರ ವಹಿಸಲು ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲು ತಡವಾಗಿಯಾದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಿದೆ.

ಹಸ್ತಾಂತರವಾಗಿಲ್ಲ: ಎಕ್ಸ್‌ಪ್ರೆಸ್ ವೇ ಉದ್ಘಾಟನೆಗೊಂಡಿದ್ದರೂ ಇನ್ನೂ ಹೆದ್ದಾರಿಯಲ್ಲಿರುವ ವಿದ್ಯುತ್ ಕಂಬಗಳ ನಿರ್ವಹಣೆ ಜವಾಬ್ದಾರಿ ಸೆಸ್ಕ್‌ಗೆ ಹಸ್ತಾಂತರಿಸಿಲ್ಲ. ನಿಯಮಾನುಸಾರ ಒಂದು ವರ್ಷದವರೆಗೆ ಹೆದ್ದಾರಿ ಪ್ರಾಧಿಕಾರವೇ ವಿದ್ಯುತ್ ಕಂಬಗಳ ನಿರ್ವಹಣೆ ಮಾಡಬೇಕಾಗುತ್ತದೆ. ಆ ಅವಧಿಯಲ್ಲಿ ಯಾವುದೇ ಸಮಸ್ಯೆ ಕಂಡು ಬಂದರೂ ಹೆದ್ದಾರಿ ಪ್ರಾಧಿಕಾರದ ವತಿಯಿಂದಲೇ ನಿರ್ವಹಣೆ ಮಾಡಬೇಕಾದ ನಿಯಮವಿದೆ. ಈ ಹಿನ್ನೆಲೆಯಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಲ್ಲಿರುವ ವಿದ್ಯುತ್ ಕಂಬಗಳ ನಿರ್ವಹಣೆ ಜವಾಬ್ದಾರಿ ಹೆದ್ದಾರಿ ಪ್ರಾಧಿಕಾರವೇ ಮಾಡಬೇಕಾಗಿದೆ.

ಕಳ್ಳತನ ತಡೆಗೆ ವಿಫಲ: ಎಕ್ಸ್‌ಪ್ರೆಸ್ ವೇ ನಲ್ಲಿರುವ ವಿದ್ಯುತ್ ಕಂಬಗಳ ಭದ್ರತೆಗಾಗಿ ಅಳವಡಿಸಿದ್ದ ರಾಡ್, ಸಪೋರ್ಟಿಂಗ್ ಪಟ್ಟಿಗಳನ್ನು ಕಳ್ಳರು ಕಳ್ಳತನ ಮಾಡುತ್ತಲೇ ಇದ್ದರು. ಇದನ್ನು ತಡೆಗಟ್ಟಲು ಹೆದ್ದಾರಿ ಪ್ರಾಧಿಕಾರ ವಿಫಲವಾಗಿತ್ತು. ಈ ಹಿನ್ನೆಲೆಯಲ್ಲಿ ರಾಗಿಮುದ್ದನಹಳ್ಳಿ ಬಳಿ ಕಂಬವೊಂದು ಉರುಳಿ ಬಿದ್ದಿತ್ತು.

70 ಲಕ್ಷ ರೂ. ನೀಡಲು ಒಪ್ಪಿಗೆ: ಹೆದ್ದಾರಿಯಲ್ಲಿರುವ ವಿದ್ಯುತ್ ಕಂಬಗಳ ದುರಸ್ತಿಗೆ ಅಂದಾಜು ವೆಚ್ಚದ ಪಟ್ಟಿ ಸಿದ್ಧಪಡಿಸಲಾಗಿದ್ದು, ಸುಮಾರು 110 ಕಂಬಗಳ ದುರಸ್ತಿ ಸೇರಿದಂತೆ ಸಣ್ಣ ಪುಟ್ಟ ಕಾಮಗಾರಿಗಾಗಿ 70 ಲಕ್ಷ ರೂ. ತಗುಲಲಿದೆ. ಈ ಮೊತ್ತವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸೆಸ್ಕ್‌ಗೆ ನೀಡಲು ಒಪ್ಪಿದೆ.

ಪತ್ರ ವ್ಯವಹಾರ: ಎರಡೂ ಇಲಾಖೆಗಳು ಈಗಾಗಲೇ ಪರಸ್ಪರ ಪತ್ರ ವ್ಯವಹಾರ ನಡೆಸಿವೆ. ಸೆಸ್ಕ್ ಬರೆದ ಪತ್ರದಲ್ಲಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿರುವ ವಿದ್ಯುತ್ ಕಂಬಗಳ ನಿರ್ವಹಣೆ ಮಾಡಿ, ಆಗಬಹುದಾದ ಅನಾಹುತ ತಡೆಗಟ್ಟುವಂತೆ ಸಲಹೆ ನೀಡಿದ್ದರೆ, ಹೆದ್ದಾರಿ ಪ್ರಾಧಿಕಾರ ಬರೆದ ಪತ್ರದಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿರುವ ವಿದ್ಯುತ್ ಕಂಬಗಳನ್ನು ಸೆಸ್ಕ್ ವತಿಯಿಂದ ನಿರ್ವಹಿಸುವಂತೆ ಕೋರಿದೆ. ಈಗಾಗಲೇ ಎರಡೂ ಪತ್ರಗಳಿಗೂ ಎರಡೂ ಇಲಾಖೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಸಂಭವಿಸಬಹುದಾದ ಅನಾಹುತ ತಡೆಗೆ ಎರಡೂ ಇಲಾಖೆ ಮುಂದಾಗಿದೆ.

ಎಕ್ಸ್‌ಪ್ರೆಸ್ ವೇನಲ್ಲಿ ಇಬ್ಬರ ದುರ್ಮರಣ

ಬಿಜಿನೆಸ್ ಮ್ಯಾನೇಜರ್ ಎಚ್.ಎ.ಶಂಕರ್(45) ಸ್ಥಳದಲ್ಲಿಯೇ ಮೃತಪಟ್ಟರೆ, ತೀವ್ರವಾಗಿ ಗಾಯಗೊಂಡಿದ್ದ ಕಂಪನಿಯ ಫೈನಾನ್ಸ್ ವಿಭಾಗದ ಮಹದೇವ್ ಶಿರೂರು (37) ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯೆ ಕೊನೆಯುಸಿರೆಳೆದರು. ಮ್ಯಾನೇಜರ್ ಕಿಶೋರ್ ಸಹ ತೀವ್ರವಾಗಿ ಗಾಯಗೊಂಡಿದ್ದು, ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನಂತರ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆ ಸ್ಮಾರ್ಟ್ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಈತನ ಪರಿಸ್ಥಿತಿ ಸಹ ಗಂಭೀರವಾಗಿದೆ.

ಮೃತ ರೀಜನಲ್ ಮ್ಯಾನೇಜರ್ ಶಂಕರ್ ಮೂಲತಃ ಕೆ.ಆರ್.ಪೇಟೆ ತಾಲೂಕು ಹೆಮ್ಮನಹಳ್ಳಿ ಹಾಗೂ ಮಹದೇವ್ ತಿರೂರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ನಿವಾಸಿಗಳು. ಗಾಯಾಳು ಕಿಶೋರ್ ಕೋಲಾರ ಜಿಲ್ಲೆಯ ವೇಮಗಲ್ ತಾಲೂಕು ಶೆಟ್ಟಿಹಳ್ಳಿಯವರು.

ಮೃತರು ಮತ್ತು ಗಾಯಾಳು ಮೈಸೂರಿನಲ್ಲಿ ನಡೆದ ಐಸಿಐಸಿಐ ಕಂಪನಿಯ ಸಭೆಯಲ್ಲಿ ಪಾಲ್ಗೊಂಡ ನಂತರ ತಮ್ಮ ಮಹೇಂದ್ರ ಸ್ಕಾರ್ಪಿಯೊ ಕಾರಿನಲ್ಲಿ ಬೆಂಗಳೂರಿಗೆ ವಾಪಸ್ ಆಗುತ್ತಿದ್ದರು. ಮುಂಜಾನೆ 4:45ರ ಸುಮಾರಿಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಕೆ.ಕೋಡಿಹಳ್ಳಿ ಬಳಿ ಶಂಕರ್ ಚಾಲನೆ ಮಾಡುತ್ತಿದ್ದ ಕಾರು ನಿಯಂತ್ರಣ ತಪ್ಪಿ ಮೊದಲು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ನಂತರ ವಿಭಜಕದ ಮಧ್ಯ ಅಳವಡಿಸಲಾಗಿದ್ದ ಸಿಸಿ ಕ್ಯಾಮೆರಾಗೆ ಹೊಡೆದು ಜಖಂಗೊಳಿಸಿದ ಬಳಿಕ ಕಾರು ಮೈಸೂರು ಮಾರ್ಗದ ರಸ್ತೆಯಿಂದ ಹಾರಿ ಬೆಂಗಳೂರು ಕಡೆಯ ತಡೆಗೋಡೆಗೆ ಗುದ್ದಿ ಅಪಘಾತಕ್ಕೀಡಾಗಿದೆ. ಅಪಘಾತದಿಂದ ಹೆದ್ದಾರಿಯಲ್ಲಿ ಕೆಲಕಾಲ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಸ್ಥಳಕ್ಕೆ ಧಾವಿಸಿದ ಮದ್ದೂರು ಸಂಚಾರ ಠಾಣೆ ಪಿಎಸ್ಐ ಜೆ.ಇ.ಮಹೇಶ್ ಹಾಗೂ 20 ಮಂದಿ ಸಿಬ್ಬಂದಿ ಕಾರಿನಲ್ಲಿ ಸಿಲುಕಿದ್ದ ಮೃತರ ಶವ ಮತ್ತು ಗಾಯಾಳುಗಳನ್ನು ಹೊರತೆಗೆದು ಆಸ್ಪತ್ರೆಗೆ ಸಾಗಿಸಲು ಕ್ರಮ ಕೈಗೊಂಡರು. ಎಎಸ್‌ಪಿ ತಿಮ್ಮಯ್ಯ, ಡಿವೈಎಸ್ಪಿ ಕೃಷ್ಣಪ್ಪ, ಸರ್ಕಲ್ ಇನ್‌ಸ್ಪೆಕ್ಟರ್‌ಗಳಾದ ಶಿವಕುಮಾರ್ ಹಾಗೂ ವೆಂಕಟೇಗೌಡ ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಮದ್ದೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಷಪ್ ಕೆ.ಎ.ವಿಲಿಯಂ ರಾಜೀನಾಮೆ

ಸೇವೆ ಮಾಡುವ ಭಾಗ್ಯ ದೊರೆತಿದೆ. ಈ ನಿಟ್ಟಿನಲ್ಲಿ ಧೈರ್ಯದಿಂದಲೇ ರಾಜೀನಾಮೆ ನೀಡಿದ್ದೇನೆ ಎಂದರು. ಕಳೆದ ನಾಲ್ಕೈದು ವರ್ಷಗಳಿಂದ ಕೆಲವರು ನನ್ನ ವಿರುದ್ಧ ಇಲ್ಲ–ಸಲ್ಲದ ಆರೋಪ ಮಾಡುತ್ತಿದ್ದರು. ಅದೆಲ್ಲವೂ ನನ್ನ ವಿರುದ್ಧ ನಡೆಸಲಾದ ಪಿತೂರಿ ಎಂಬುದು ಇತ್ತೀಚೆಗಷ್ಟೇ ದೊರೆತಿರುವ ಒರಿಜಿನಲ್ ಆಡಿಯೋ ರೇಕಾರ್ಡ್‌ನಿಂದ ಸ್ಪಷ್ಟವಾಗಿದೆ. ಆರೋಪದಿಂದಾದ ನನಗಾದ ನೋವು ಎಲ್ಲರಿಗೂ ತಿಳಿದಿರುವುದೇ. ಇದೆಲ್ಲದರಿಂದ ಹೊರಬರಬೇಕು ಎಂಬ ದೃಷ್ಟಿಯಿಂದ ಒಂದು ತಿಂಗಳು ಸತತ ದೇವರ ಧ್ಯಾನಮಾಡಿ, ದೇವರು ಸೂಚಿಸಿದಂತೆಯೇ ಧೈರ್ಯದಿಂದ ರಾಜೀನಾಮೆ ನೀಡಿದ್ದೇನೆ. ಯಾರಿಗೂ ಭಯಪಟ್ಟು ಹೇಡಿಯಾಗಿ ರಾಜೀನಾಮೆ ನೀಡಿಲ್ಲ. ಇದರಿಂದ ನನಗೆ ಯಾವುದೇ ತರಹದ ದುಃಖವೂ ಇಲ್ಲ ಎಂದರು. ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಆರೋಪಗಳನ್ನು ಮಾಡಿದರೂ ಇದುವರೆಗೂ ನಾನು ಯಾವುದಕ್ಕೂ ಪ್ರತಿಕ್ರಿಯೆ ನೀಡಿಲ್ಲ. ಸುಳ್ಳು ಆರೋಪಗಳಿಗೆ ಸ್ಪಷ್ಟೀಕರಣ ಕೊಡುವ ಅಗತ್ಯವಿಲ್ಲ. ಅದು ನನ್ನ ಸ್ಥಾನಮಾನಕ್ಕೆ ವಿರುದ್ಧವಾದದ್ದು. ದುರದೃಷ್ಟಕರವೆಂದರೆ ನಾನು ಮೌನವಾಗಿದ್ದರಿಂದ ನಿಜವಿರಬಹುದೇನೋ ಎಂದು ಕೆಲವರು ತಪ್ಪಾಗಿಯೂ ಅರ್ಥ ಮಾಡಿಕೊಂಡಿದ್ದಾರೆ. ಈಗಾಗಲೇ ಯಾವುದು ಸತ್ಯ, ಯಾವುದು ಸುಳ್ಳು ಎಂಬುದು ಎಲ್ಲರಿಗೂ ಗೊತ್ತಾಗಿದೆ ಎಂದರು.

ನಿಮ್ಮನ್ನು ಟಾರ್ಗೆಟ್ ಮಾಡಲು ಮುಖ್ಯ ಕಾರಣವೇನು ಎಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಟಾರ್ಗೆಟ್ ಮಾಡಲು ಕಾರಣವೇನು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಕಳೆದ 6 ವರ್ಷಗಳಲ್ಲಿ ಮೈಸೂರು ಧರ್ಮಕ್ಷೇತ್ರ ಆಧ್ಯಾತ್ಮಿಕವಾಗಿ, ಆರ್ಥಿಕವಾಗಿ ಬೆಳೆದಿದೆ. ಒಂದಿಂಚು ಜಾಗವನ್ನು ಮಾರಿಲ್ಲ. ಕಳೆದೊಂದು ವರ್ಷ ಊಟಿಯಲ್ಲಿದ್ದೆ. ದೈಹಿಕವಾಗಿ, ಮಾನಸಿಕವಾಗಿ ಸದೃಢವಾಗಿದ್ದು, ಧೈರ್ಯದಿಂದಲೇ ರಾಜೀನಾಮೆ ನೀಡಿದ್ದೇನೆ ಎಂದು ಉತ್ತರಿಸಿದರು.

ರಾಜೀನಾಮೆ ಅಂಗೀಕಾರ: ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷ ಮ್ಯಾಥ್ಯೂ ಬೆಂಜಮಿನ್ ಸುರೇಶ್ ಮಾತನಾಡಿ, ಸೆಕ್ರೆಟರಿ ಜನರಲ್ ಕ್ಯಾಥೋಲಿಕ್ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾ(ಸಿಬಿಸಿಐ)ನ ಅಧಿಸೂಚನೆಯ ಪ್ರಕಾರ ಕೆ.ಎ.ವಿಲಿಯಂ ಅವರು ಮೈಸೂರಿನ ಬಿಷಪ್ ಹುದ್ದೆಗೆ ರಾಜೀನಾಮೆ ನೀಡಿದ್ದು, ಪೋಪ್ ಫ್ರಾನ್ಸಿಸ್ ಅವರು ಅಂಗೀಕರಿಸಿದ್ದಾರೆ. ಈ ರಾಜೀನಾಮೆಯು ಬಿಷಪ್ ಕೆ.ಎ.ವಿಲಿಯಂ ಮೇಲೆ ವಿಧಿಸಲಾದ ಶಿಸ್ತಿನ ಕ್ರಮವಲ್ಲ ಎಂಬುದನ್ನು ಅಪೋಸ್ಟೋಲಿಕ್ ನನ್ಸಿಯೇಚರ್ ಒಪ್ಪಿಕೊಂಡಿದೆ. ಚರ್ಚ್‌ನ ಒಳಿತಿಗಾಗಿ ವಿಲಿಯಂ ರಾಜೀನಾಮೆ ನೀಡಿದ್ದು, ಹೊಸ ಬಿಷಪ್ ಆಯ್ಕೆಯಾಗಲಿದ್ದಾರೆ.

ಯಾವುದೇ ಪುರಾವೆಗಳಿಲ್ಲ: ಆಡಿಯೋದಲ್ಲಿ ಹೇಳಿರುವಂತೆ ವಿಲಿಯಂ ವಿರುದ್ಧ ಮಾಡಲಾದ ಆರೋಪಗಳು ಸುಳ್ಳೆಂಬುದು ಸ್ಪಷ್ಟವಾಗಿದೆ. ಅವರ ವಿರುದ್ಧದ ಆರೋಪಗಳಿಗೆ ಯಾವುದೇ ಪುರಾವೆಗಳಿಲ್ಲ ಎಂಬ ಮಾತುಗಳು ಕೇಳಿಬಂದಿವೆ. ಇನ್ನುಂದೆ ತಮ್ಮ ಸಚಿವಾಲಯದ ಮೇಲೆ ಯಾವುದೇ ಅಂಗೀಕೃತ ನಿರ್ಬಂಧಗಳನ್ನು ಹೊಂದಿರುವುದಿಲ್ಲ ಎಂದು ವಿಲಿಯಂ ಮಾಹಿತಿ ನೀಡಿದರು.


ಮೈಸೂರು ಕ್ಯಾಥೋಲಿಕ್ ಅಸೋಸಿಯೇಷನ್‌ನ ಕಾರ್ಯದರ್ಶಿ ಪ್ರೇಮಾನಂದ್ ಡಿ ಮೆಲ್ಲೋ ಮಾತನಾಡಿ, ವಿಲಿಯಂ ಅವರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿದ ಪ್ರಮುಖ ಸಂಚುಕೋರರು ಮತ್ತು ಸುಪಾರಿ ನೀಡಲು ಯೋಚಿಸಿ ಕೊಲ್ಲಲು ಸಂಚು ರೂಪಿಸಿದವರ ವಿರುದ್ಧ ಕ್ರಮಗೊಳ್ಳುವಂತೆ ಹಲವರು ಒತ್ತಾಯಿಸುತ್ತಿದ್ದಾರೆ. ಈ ಸಂಬಂಧ ಮುಂದಿನ ದಿನಗಳಲ್ಲಿ ದೂರು ದಾಖಲಿಸುವ ಕುರಿತು ಚಿಂತಿಸಲಾಗುವುದು ಎಂದರು.

ಅನಂತಕುಮಾರ್ ಹೆಗಡೆ ವಿರುದ್ಧ ಪ್ರಕರಣ ದಾಖಲು

ಪಳ್ಳಿಯೂ ನಿರ್ಮಾಣವಾಗುತ್ತದೆ. ಇದನ್ನು ಬೇಕಾದರೆ ಬೆದರಿಕೆ ಅಂತ ಬೇಕಾದರೂ ತಿಳಿಯಿರಿ ಎಂದು ಹೇಳಿದ್ದರು. ಈ ಸಂಬಂಧ ಕುಮಟಾ ಪೊಲೀಸ್ ಠಾಣೆಯಲ್ಲಿ ಸುಮೋಟೊ ಕೇಸ್ ದಾಖಲಾಗಿದೆ. ಇದೇ ವೇಳೆ ಕಾಂಗ್ರೆಸ್ ಹಾಗೂ ಸಿಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದ ಅನಂತಕುಮಾರ್ ಹೆಗಡೆ ಅವರು, ನಮಗೆ ಕಾಂಗ್ರೆಸ್ ವಿರೋಧಿಯಲ್ಲ. ಆದರೆ ಹಿಂದೂ ಸಮಾಜವನ್ನು ಒಡೆಯಬೇಕೆಂಬ ಮನಸ್ಥಿತಿ ಇರುವ ಸಿದ್ದರಾಮಯ್ಯ ನಮ್ಮ ಎದುರಾಳಿ ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದ್ದರು. ಈ ವಿಡಿಯೋ ಹೊರಬರುತ್ತಿದ್ದಂತೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪ್ರಕರಣ ದಾಖಲಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರು. ಇದರ ಬೆನ್ನಲ್ಲೇ ಕುಮಟಾ ಪೊಲೀಸರು ದ್ವೇಷ ಭಾಷಣ ಹಾಗೂ ಜಿಲ್ಲೆಯಲ್ಲಿ ಅಶಾಂತಿ ಮೂಡಿಸಲು ಯತ್ನ ಮಾಡಿರುವುದಾಗಿ ಸೆಕ್ಷನ್ 505 ಹಾಗೂ 153 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಾಜ್ಯದಲ್ಲಿ ಭಾನುವಾರ 113 ಕೋವಿಡ್ ಪ್ರಕರಣ ಪತ್ತೆ

ಬೆಂಗಳೂರು, ಜ.14– ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಇಂದು ಕಡಿಮೆಯಾಗಿದ್ದು 113 ಮಂದಿಗೆ ಕೊರೋನಾ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 958ಕ್ಕೆ ಏರಿಕೆಯಾಗಿದೆ.



ಕಳೆದ 24 ಗಂಟೆಗಳಲ್ಲಿ ಬೆಂಗಳೂರಿನಲ್ಲಿ 40 ಪಾಸಿಟಿವ್ ಪ್ರಕರಣ ಸೇರಿದಂತೆ ರಾಜ್ಯದಲ್ಲಿ 113 ಮಂದಿಗೆ ಕೋವಿಡ್– 19 ಪಾಸಿಟಿವ್ ದೃಢಪಟ್ಟಿದೆ. ಸೋಂಕಿ ನಿಂದ ಇಂದು ಯಾರು ಮೃತಪಟ್ಟಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಇಂದು ಕೋವಿಡ್‌ನಿಂದ 154 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಕಳೆದ 24 ಗಂಟೆಗಳಲ್ಲಿ 3,208 ಮಂದಿಗೆ ಕೊರೋನಾ ಟೆಸ್ಟ್ ಮಾಡಲಾಗಿದೆ. ಪಾಸಿಟಿವಿಟಿ ದರ ಶೇ. 3.52ರಷ್ಟಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿ ನೀಡಿದೆ. ಸೋಂಕಿತರಲ್ಲಿ 909 ಮಂದಿ ಮನೆ ಆರೈಕೆಗೆ ಒಳಗಾದರೆ, 49 ಮಂದಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಭಾರತೀಯ ಸೇನೆ ವಾಪಸ್‌ಗೆ ಮಾಲ್ದೀವ್ಸ್ ಸರ್ಕಾರದಿಂದ ಮಾರ್ಚ್ 15ರ ಗಡುವು

ಮಾಲೆ, ಜ.14– ದ್ವೀಪರಾಷ್ಟ್ರ ಮಾಲ್ದೀವ್ಸ್ ನಿಂದ ಮಾರ್ಚ್ 15ರ ಒಳಗೆ ತನ್ನ ಸೇನೆಯನ್ನು ವಾಪಸು ಕರೆಯಿಸಿಕೊಳ್ಳಬೇಕು ಎಂದು ಮಾಲ್ದೀವ್ಸ್‌ನ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರು ಭಾರತ ಸರ್ಕಾರಕ್ಕೆ ಕೋರಿದ್ದಾರೆ.

ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಭಾನುವಾರ ಈ ವಿಷಯ ತಿಳಿಸಿದರು. ಎರಡು ತಿಂಗಳ ಹಿಂದೆ, ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕೂಡಲೇ ಮುಯಿಝು ಈ ಕುರಿತು ಪ್ರಸ್ತಾಪಿಸಿದ್ದರು.

ದ್ವೀಪರಾಷ್ಟ್ರದಿಂದ ಸೇನೆ ವಾಪಸಾತಿ ಕುರಿತ ಚರ್ಚೆಗೆ ಮಾಲ್ದೀವ್ಸ್ ಮತ್ತು ಭಾರತ ಜಂಟಿಯಾಗಿ ಉನ್ನತ ಮಟ್ಟದ ಸಮಿತಿ ರಚಿಸಿತ್ತು. ಈ ಸಮಿತಿಯ ಸಭೆ ಭಾನುವಾರ ನಡೆಯಿತು.

ಸದ್ಯ, ಭಾರತದ 88 ಯೋಧರು ಮಾಲ್ದೀವ್ಸ್‌ನಲ್ಲಿದ್ದಾರೆ. ಮಾರ್ಚ್ 15ರ ಒಳಗೆ ಸೇನೆ ವಾಪಸಾತಿಗೆ ಅಧ್ಯಕ್ಷರು ಕೋರಿದ್ದಾರೆ ಎಂದು ಅಧ್ಯಕ್ಷರ ಕಚೇರಿಯ ಸಾರ್ವಜನಿಕ ನೀತಿ ಕಾರ್ಯದರ್ಶಿ ಅಬ್ದುಲ್ಲಾ ನಜೀಂ ಇಬ್ರಾಹಿಂ ಸುದ್ದಿಗಾರರಿಗೆ ತಿಳಿಸಿದರು.

ಭಾರತ ಸೇನೆಯ ಯೋಧರು ಮಾಲ್ದೀವ್ಸ್‌ನಲ್ಲಿ ಇರಲು ಅವಕಾಶವಿಲ್ಲ. ಇದು, ಅಧ್ಯಕ್ಷರು ಮತ್ತು ಅವರ ಸರ್ಕಾರದ ನಿರ್ಧಾರವಾಗಿದೆ ಎಂದು ಇಬ್ರಾಹಿಂ ಹೇಳಿದರೆಂದೂ ವರದಿ ತಿಳಿಸಿದೆ.

ಸಭೆಯಲ್ಲಿ ಭಾರತದ ರಾಯಭಾರಿ ಮುನು ಮಹಾವರ್ ಅವರೂ ಭಾಗವಹಿಸಿದ್ದರು. 2023ರ ನ. 17ರಂದು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದ ಮುಯಿಝು, ಭಾರತವು ಸೇನೆ ಹಿಂದೆ ಕರೆಯಿಸಿ ಕೊಳ್ಳಬೇಕು. ಈ ಮನವಿ ಸಲ್ಲಿಸಲು ಜನರು ತಮಗೆ ಸ್ಪಷ್ಟ ಬಹುಮತ ನೀಡಿದ್ದಾರೆ ಎಂದು ಹೇಳಿದ್ದರು.

ಮುಯಿಜು ನೇತೃತ್ವದ ಮಾಲ್ದೀವ್ಸ್ ಸರ್ಕಾರದ ಮೂವರು ಸಚಿವರು ಇತ್ತೀಚೆಗಷ್ಟೇ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು. ಇದು, ಉಭಯ ದೇಶಗಳ ನಡುವೆ ವಾಕ್ಸಮರಕ್ಕೂ ಕಾರಣವಾಗಿತ್ತು. ಈ ಬೆಳವಣಿಗೆಯ ಹಿಂದೆಯೇ ಈಗ ಮಾಲ್ದೀವ್ಸ್ ಸರ್ಕಾರ, ದ್ವೀಪರಾಷ್ಟ್ರದಿಂದ ಸೇನೆ ವಾಪಸಾತಿಗೆ ಭಾರತಕ್ಕೆ ಗಡುವು ನಿಗದಿಪಡಿಸಿದೆ.

ಅಯೋಧ್ಯೆಯಲ್ಲಿ ರಾಮಮಂದಿರ ಲೋಕಾರ್ಪಣೆ ಹಿನ್ನೆಲೆ

ದೇವಸ್ಥಾನ ಸ್ವಚ್ಛಗೊಳಿಸಿದ ಬಿಜೆಪಿ ಕಾರ್ಯಕರ್ತರು



ದೇವಸ್ಥಾನವನ್ನು ಸ್ವಚ್ಛಗೊಳಿಸುತ್ತಿರುವ ಬಿಜೆಪಿ ಕಾರ್ಯಕರ್ತರು

ಮೈಸೂರು, ಜ.14(ಬಿಎಲ್‌ಯು)– ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ರಾಮ ಮಂದಿರ ಲೋಕಾರ್ಪಣೆಗೊಳ್ಳುತ್ತಿರುವ ಹಿನ್ನೆಲೆ ಬಿಜೆಪಿ ಕಾರ್ಯಕರ್ತರು ಮೈಸೂರಿನ ಎಂ.ಜಿ.ರಸ್ತೆಯ ಕೋದಂಡರಾಮ ದೇವಸ್ಥಾನ ಹಾಗೂ ಸಂತೆಪೇಟೆಯ ನಂಜುಂಡೇಶ್ವರ ದೇವಸ್ಥಾನದಲ್ಲಿ ಇಂದು ಸ್ವಚ್ಛತಾ ಕಾರ್ಯ ಕೈಗೊಂಡರು.

ಸಂಸದ ಪ್ರತಾಪ್ ಸಿಂಹ ಹಾಗೂ ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ನಡೆದ ಸ್ವಚ್ಛತಾ ಕಾರ್ಯದಲ್ಲಿ ಹಲವಾರು ಬಿಜೆಪಿ ಕಾರ್ಯಕರ್ತರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಕೋದಂಡರಾಮ ದೇವಾಲಯದಲ್ಲಿ ಬೆಳೆದಿದ್ದ ಹುಲ್ಲು ಕತ್ತರಿಸಿ ಇಡೀ ಆವರಣವನ್ನು ಸ್ವಚ್ಛ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರತಾಪ್ ಸಿಂಹ, ಅಯೋಧ್ಯೆಯಲ್ಲಿ ಜನವರಿ 22ರಂದು ರಾಮಮಂದಿರ ಲೋಕಾರ್ಪಣೆಗೊಳ್ಳುತ್ತಿರುವ ಹಿನ್ನೆಲೆ ದೇಶದಲ್ಲಿರುವ ರಾಮಮಂದಿರ ಹಾಗೂ ಇತರೆ ದೇವಾಲಯಗಳನ್ನು ಇಂದು ಸ್ವಚ್ಛ ಮಾಡುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದರು. ಈ ಹಿನ್ನೆಲೆ ಇಲ್ಲಿ ಸ್ವಚ್ಛತಾ ಕಾರ್ಯ ಮಾಡಿದ್ದೇವೆ ಎಂದು ತಿಳಿಸಿದರು.

ಕೋದಂಡರಾಮ ದೇವಸ್ಥಾನಕ್ಕೆ 400 ವರ್ಷಗಳ ಇತಿಹಾಸವಿದ್ದು, ಇದರ ಜೀರ್ಣೋದ್ಧಾರ ಮಾಡಿ ಪ್ರತಿ ದಿನ ಪೂಜೆ ಪುನಸ್ಕಾರ ನಡೆಯುವಂತೆ ಮಾಡುತ್ತೇವೆ. ಇದರ ಹಿನ್ನೆಲೆ ಇಂದು ಸಾಂಕೇತಿಕವಾಗಿ ಸ್ವಚ್ಛತಾ ಕಾರ್ಯ ಕೈಗೊಂಡಿದ್ದೇವೆ ಎಂದು ಹೇಳಿದರು.

ರಾಮನ ಅಸ್ತಿತ್ವದ ಬಗ್ಗೆ ಕಾಂಗ್ರೆಸ್‌ನವರು ಪ್ರಶ್ನೆ ಮಾಡಿದರು. ರಾಮ ಕಾಲ್ಪನಿಕ ವ್ಯಕ್ತಿ ಎಂದು ಸುಪ್ರೀಂಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿದ್ದರು. ಆದರೆ ಇಂದು ಭವ್ಯ ರಾಮ ಮಂದಿರ ನಿರ್ಮಾಣವಾಗಲು ಅಡ್ವಾನಿಯಿಂದ ಮೋದಿ ತನಕ ಬಿಜೆಪಿಯವರು ಕಾರಣಕರ್ತರಾಗಿದ್ದಾರೆ. ನಾವು ರಾಮನ ಹೆಸರಿನಲ್ಲಿ ಮತಕ್ಕಾಗಿ ಹೋರಾಟ ಮಾಡುತ್ತಿಲ್ಲ. ಬದಲಿಗೆ ರಾಮನ ಭಕ್ತರಿಗಾಗಿ ಹೋರಾಟ ಮಾಡುತ್ತಿದ್ದೇವೆ ಎಂದು ಪ್ರತಾಪ್ ಸಿಂಹ ಪುನರುಚ್ಛರಿಸಿದರು.

ಇಬ್ಬರು ದ್ವಿಚಕ್ರ ವಾಹನ ಖದೀಮರ ಬಂಧನ



ವಶಪಡಿಸಿಕೊಂಡ ವಾಹನಗಳೊಂದಿಗೆ ನರಸಿಂಹರಾಜ ಠಾಣೆ ಪೊಲೀಸರು

ಮೈಸೂರು, ಜ.14(ಎಂಕೆ)– ನಕಲಿ ಕೀ ಬಳಸಿ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಇಬ್ಬರು ಖದೀಮರನ್ನು ಬಂಧಿಸಿರುವ ನರಸಿಂಹರಾಜ ಠಾಣೆ ಪೊಲೀಸರು, ಬಂಧಿತರಿಂದ 1.30 ಲಕ್ಷ ರೂ. ಮೌಲ್ಯದ ನಾಲ್ಕು ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ಮೈಸೂರಿನ ಕಲ್ಯಾಣಗಿರಿ ನಿವಾಸಿಗಳಾದ ಅತೀಕ್ ಉಲ್ಲಾ(27), ಸೈಯದ್ ಇರ್ಫಾನ್(29) ಬಂಧಿತ ಆರೋಪಿಗಳು. 2023ರ ಡಿ.12 ರಂದು ರಿಂಗ್ ರಸ್ತೆಯ ಆರ್‌ಟಿಓ ಕಚೇರಿ ಬಳಿ ನಿಲ್ಲಿಸಿದ್ದ ಹೋಂಡಾ ಆಕ್ಟಿವಾ (ಕೆಎ–55–ವಿ–4559) ಸ್ಕೂಟರ್ ಕಳವು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ನರಸಿಂಹರಾಜ ಠಾಣೆ ಪೊಲೀಸರು, ಜ.8 ರಂದು ಬೆಳಗ್ಗೆ 10 ಸುಮಾರಿಗೆ ಪುಷ್ಪಾಶ್ರಮ ಜಂಕ್ಷನ್ ಬಳಿ ಕಳವು ಮಾಡಿದ್ದ ದ್ವಿಚಕ್ರ ವಾಹನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಆರೋಪಿಗಳಿಬ್ಬರನ್ನು ಬಂಧಿಸಿದ್ದಾರೆ.

ಬಂಧಿತರಿಂದ ಹೀರೋ ಸ್ಪ್ಲೆಂಡರ್ ಬೈಕ್, ಸುಜ್ಸುಕಿ ಆಕ್ಸೆಸ್, ಹೋಂಡಾ ಆಕ್ಟಿವಾ ಮತ್ತು ಟಿವಿಎಸ್ ಜುಪಿಟರ್ ಸ್ಕೂಟರ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿಗಳಿಬ್ಬರು ನಕಲೀ ಕೀ ಬಳಸಿ ಬನ್ನಿಮಂಟಪ, ರಿಂಗ್ ರಸ್ತೆ ಸೇರಿದಂತೆ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದರು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎನ್‌ಆರ್ ವಿಭಾಗದ ಎಸಿಪಿ ಅಶ್ವಥ್ ನಾರಾಯಣ್ ಮಾರ್ಗದರ್ಶನದಲ್ಲಿ ನರಸಿಂಹರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್ ಕೆ.ತಳವಾರ್, ಪಿಎಸ್‌ಐ ಗಣೇಶ್, ಸಿಬ್ಬಂದಿಗಳಾದ ಆದಂ, ದೊಡ್ಡೇಗೌಡ, ಸುನಿಲ್, ಬಸವರಾಜ್, ವೀರೇಶ್, ಮೋಹನ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ನಿಯಂತ್ರಣ ಗ್ರಾಪಂ ಜವಾಬ್ದಾರಿ



ಮೈಸೂರು, ಜ.14(ಎಂಟಿವೈ)– ಚಾಮುಂಡಿ ಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ವಲಯವಾಗಿ ಪರಿವರ್ತಿಸಲು ಅರಣ್ಯ ಇಲಾಖೆ ಹಲವು ಕಾರ್ಯಕ್ರಮ ರೂಪಿಸಿದ್ದು, ಬೆಟ್ಟದಲ್ಲಿ ಗ್ರಾ.ಪಂ ಕಟ್ಟುನಿಟ್ಟಿನ ಕ್ರಮ ಕೈಗೊಂಡರೆ ಪ್ಲಾಸ್ಟಿಕ್ ಹಾವಳಿಗೆ ಕಡಿವಾಣ ಹಾಕಬಹುದಾಗಿದೆ ಎಂದು ಆರ್‌ಎಫ್‌ಓ ಧನ್ಯಶ್ರೀ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ಧಾರ್ಮಿಕ ಪಾವಿತ್ರ್ಯತೆಯನ್ನು ಕಾಪಾಡುವುದರೊಂದಿಗೆ ಅರಣ್ಯ ಪ್ರದೇಶದ ಮಹತ್ವ ಕಾಯ್ದುಕೊಳ್ಳಲು ಅರಣ್ಯ ಇಲಾಖೆ ಸೆ.1ರಿಂದ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿತ್ತು ಈ ಸಂಬಂಧ ಬೆಟ್ಟದಲ್ಲಿರುವ ಅಂಗಡಿಗಳ ಮಾಲೀಕರಿಗೂ ಜಾಗೃತಿ ಮೂಡಿಸಲಾಗಿತ್ತು. ಅಲ್ಲದೆ, ಬೆಟ್ಟಕ್ಕೆ ಬರುವ ಪ್ರವಾಸಿಗರು ಹಾಗೂ ಭಕ್ತರಿಗೆ ಜಾಗೃತಿ ಮೂಡಿಸಲಾಗಿತ್ತು. ಬೆಟ್ಟಕ್ಕೆ ಬರುವವರು ಪ್ಲಾಸ್ಟಿಕ್ ತರದಂತೆ ಮನವರಿಗೆ ಮಾಡಿಕೊಡಲಾಗಿತ್ತು. ಅರಣ್ಯ ರಸ್ತೆಯಲ್ಲಿ ಬೇಕಾಬಿಟ್ಟಿ ವಾಹನ ನಿಲುಗಡೆಗೆ ಬ್ರೇಕ್ ಹಾಕಲಾಗಿತ್ತು. ಇದೀಗ ಬೆಟ್ಟದ ಮೇಲಿರುವ ಪಾರ್ಕಿಂಗ್ ಕಟ್ಟಡ ಹಿಂಭಾಗ ಬೆಟ್ಟದ ಮೇಲಿರುವ ಅಂಗಡಿ ಹಾಗೂ ಕೆಲ ಮಳಿಗೆಗಳಲ್ಲಿನ ತ್ಯಾಜ್ಯವನ್ನು ಸುರಿದಿರುವುದು ನಮ್ಮ ಗಮನಕ್ಕೆ ಬಂದಿದೆ. ಬೆಟ್ಟದ ಮೇಲಿರುವ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ ಸಮರ್ಪಕ ನಿರ್ವಹಣೆ ಮಾಡಲು ಗ್ರಾಮ ಪಂಚಾಯ್ತಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಬೆಟ್ಟದಲ್ಲಿ ಪ್ಲಾಸ್ಟಿಕ್ ಮಾರಾಟ ಮಾಡದಂತೆ ಸಾಕಷ್ಟು ಬಾರಿ ಮಳಿಗೆದಾರರು ಹಾಗೂ ಆಟಿಕೆ, ಪೂಜಾ ಸಾಮಗ್ರಿ ಮಾರಾಟಗಾರರಿಗೆ ಮನವರಿಕೆ ಮಾಡಿಕೊಡಲಾಗಿದೆ ಇದೀಗ ಬೇಸಿಗೆಯಿಂದ ಬೆಟ್ಟದ ಅರಣ್ಯ ಪ್ರದೇಶವನ್ನು ರಕ್ಷಿಸಿಕೊಳ್ಳುವ ಹೊಣೆ ಅರಣ್ಯ ಸಿಬ್ಬಂದಿಗಳ ಮೇಲಿದೆ. ಹಾಗಾಗಿ ಬೆಟ್ಟದ ಸುತ್ತಲೂ ಬೆಂಕಿ ತಡೆರೇಖೆ ನಿರ್ಮಾಣ ಸೇರಿದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. ಬೆಟ್ಟದ ಮೇಲೆ ಪ್ಲಾಸ್ಟಿಕ್ ನಿಯಂತ್ರಣ ಮಾಡುವ ಹಾಗೂ ತ್ಯಾಜ್ಯ ಸುರಿಯುವುದನ್ನು ತಡೆಗಟ್ಟುವ ಜವಾಬ್ದಾರಿ ಗ್ರಾಮ ಪಂಚಾಯಿತಿಯದ್ದಾಗಿದೆ ಎಂದು ವಿವರಿಸಿದ್ದಾರೆ.

ವಲಯ ಮಟ್ಟದ ಪೊಲೀಸ್ ಕರ್ತವ್ಯ ಕೂಟದ ಸಮಾರೋಪ

ಮಂಡ್ಯ ಪೊಲೀಸ್ ತಂಡಕ್ಕೆ ಸರ್ವೋತ್ತಮ ಗರಿ



ಐದನೇ ಮೈಸೂರು ವಲಯ ಮಟ್ಟದ ಪೊಲೀಸ್ ಕರ್ತವ್ಯ ಕೂಟದ ವಿವಿಧ ಸ್ಪರ್ಧಾ ವಿಜೇತರೊಂದಿಗೆ ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಮೈಸೂರು ಎಸ್ಪಿ ಸೀಮಾ ಲಾಟ್ಕರ್ ಇನ್ನಿತರ ಅಧಿಕಾರಿಗಳು ಫೋಟೋ ತೆಗೆಸಿಕೊಂಡ ಕ್ಷಣ.

ಮೈಸೂರು, ಜ.14(ಎಸ್‌ಬಿಡಿ)– ಪೊಲೀಸ್ ವ್ಯವಸ್ಥೆ ಮೇಲಿನ ಸಾರ್ವಜನಿಕರ ವಿಶ್ವಾಸ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಗಂಭೀರ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದು, ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕಾರ್ಯ ನಿರ್ವಹಿಸಬೇಕು ಎಂದು ಮೈಸೂರು ದಕ್ಷಿಣ ವಲಯ ಪೊಲೀಸ್ ಉಪ ಮಹಾನಿರೀಕ್ಷಕ (ಐಜಿಪಿ) ಡಾ.ಎಂ.ಬಿ.ಬೋರಲಿಂಗಯ್ಯ ಸಲಹೆ ನೀಡಿದರು.

ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ(ಕೆಪಿಎ)ಯ ಸಭಾಂಗಣದಲ್ಲಿ ಭಾನುವಾರ ನಡೆದ ಐದನೇ ಮೈಸೂರು ವಲಯ ಮಟ್ಟದ ಪೊಲೀಸ್ ಕರ್ತವ್ಯ ಕೂಟದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು, ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಕ್ರಿಮಿನಲ್ ಜಸ್ಟಿಸ್ ಡೆಲಿವರಿ ಸಿಸ್ಟಮ್‌ನಲ್ಲಿ ಎಫ್‌ಐಆರ್ ದಾಖಲಿಸಿ, ತನಿಖೆ ಮಾಡಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುತ್ತೇವೆ. ನ್ಯಾಯಾಲಯಗಳಲ್ಲಿ ವಿಚಾರಣೆ ನಡೆದು ಆರೋಪಿಗೆ ಶಿಕ್ಷೆಯಾದಾಗ ಮಾತ್ರ ಆ ಪ್ರಕರಣಕ್ಕೆ ತಾರ್ಕಿಕ ಅಂತ್ಯ ಸಿಕ್ಕಂತಾಗುತ್ತದೆ. ಆದರೆ ಶಿಕ್ಷೆಯಾಗುವ ಪ್ರಕರಣಗಳ ಪ್ರಮಾಣ ತೀರಾ ಕಡಿಮೆ ಇದೆ. ಶೇ.15ರಿಂದ 20ರಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗುತ್ತಿದ್ದರೂ ಅದರಲ್ಲಿ ಸಣ್ಣಪುಟ್ಟ ಪ್ರಕರಣಗಳೇ ಹೆಚ್ಚಾಗಿವೆ. ಶೇ.3ರಷ್ಟು ಗಂಭೀರ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗುತ್ತಿದೆ. ಹಾಗಾಗಿ ಸಾರ್ವಜನಿಕರ ವಿಶ್ವಾಸ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕಿದೆ. ಈ ನಿಟ್ಟಿನಲ್ಲಿ ತನಿಖೆಗೆ ಪೂರಕವಾದ ಎಲ್ಲಾ ವೈಜ್ಞಾನಿಕ ಕ್ರಮಗಳನ್ನು ಕರಗತ ಮಾಡಿಕೊಳ್ಳಬೇಕು. ಕಲಿತಿದ್ದನ್ನು ಸಮರ್ಪಕವಾಗಿ ತನಿಖೆಯಲ್ಲಿ ಬಳಸಿಕೊಳ್ಳಬೇಕು. ಕೌಶಲ್ಯ ವೃದ್ಧಿಸಿಕೊಂಡರೆ ಸಿಐಡಿ, ಸಿಬಿಐ, ಎನ್‌ಐಎ, ಎಸ್‌ಪಿಜಿಯಂತಹ ಏಜೆನ್ಸಿಗಳಲ್ಲೂ ಕಾರ್ಯ ನಿರ್ವಹಿಸುವ ಅವಕಾಶಗಳಿವೆ ಎಂದು ಕಿವಿಮಾತು ಹೇಳಿದರು.

ಮಂಡ್ಯ ಸರ್ವೋತ್ತಮ: ಎರಡು ದಿನಗಳ ಪೊಲೀಸ್ ಕರ್ತವ್ಯ ಕೂಟದಲ್ಲಿ ಮೈಸೂರು, ಮಂಡ್ಯ, ಹಾಸನ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆ, ಮೈಸೂರು ನಗರ, ಪಿಟಿಎಸ್, ಕೆಪಿಎ, ಕೆಎಸ್‌ಆರ್‌ಪಿ 5ನೇ ಪಡೆ ಹಾಗೂ ಹಾಸನದ 11ನೇ ಪಡೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿದಂತೆ ಒಟ್ಟು 150 ಮಂದಿ ಭಾಗವಹಿಸಿದ್ದರು. ಜೊತೆಗೆ ಎಲ್ಲಾ ಘಟಕಗಳಿಂದ 14 ಶ್ವಾನಗಳು ಭಾಗವಹಿಸಿದ್ದವು. ತನಿಖೆಗೆ ಸಹಾಯಕವಾದ 19 ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಚಿನ್ನ ಮತ್ತು ಬೆಳ್ಳಿ ತಲಾ 20, ಕಂಚು 11 ಸೇರಿದಂತೆ ಒಟ್ಟು 51 ಪದಕಗಳನ್ನು ವಿತರಿಸಲಾಯಿತು. ಇದರಲ್ಲಿ 6 ಚಿನ್ನ, 5 ಬೆಳ್ಳಿ ಹಾಗೂ 5 ಕಂಚು ಪದಕಗಳೊಂದಿಗೆ ಮಂಡ್ಯ ಜಿಲ್ಲೆ ಸರ್ವೋತ್ತಮ ತಂಡವಾಗಿ ಹೊರಹೊಮ್ಮಿತು.

ಪದಕ ವಿಜೇತರು: ಸೈಂಟಿಫಿಕ್ ಎಡ್ ಟು ಇನ್ವೆಸ್ಟಿಗೇಶನ್‌ನ ಫೊರೆನ್ಸಿಕ್ ಸೈನ್ಸ್ ರಿಟರ್ನ್ ಟೆಸ್ಟ್‌ನಲ್ಲಿ ಮಂಡ್ಯ ಜಿಲ್ಲೆ ಹಲಗೂರು ವೃತ್ತದ ಸಿಪಿಐ ಬಿ.ಎಸ್.ಶ್ರೀಧರ್ (ಚಿನ್ನದ ಪದಕ), ಹಾಸನದ ಯಶಳೂರು ಪಿಎಸ್‌ಐ ಎಂ.ಶ್ರೀನಿವಾಸ(ಬೆಳ್ಳಿ), ಮೈಸೂರಿನ ಪೊಲೀಸ್ ತರಬೇತಿ ಶಾಲೆ (ಪಿಟಿಎಸ್) ಪಿಎಸ್‌ಐ ಹೆಚ್.ಎನ್.ನಿತ್ಯಾನಂದ(ಕಂಚು), ಪೊಲೀಸ್ ಪೋರ್ಟ್‌ರೇಟ್ ಪಾರ್ಲೆ ಟೆಸ್ಟ್‌ನಲ್ಲಿ ಕೆಆರ್‌ಎಸ್ ವೃತ್ತ ಕಚೇರಿಯ ಸಿಹೆಚ್‌ಸಿ ಮುಕ್ರಮ್ ಜಾನ್(ಚಿನ್ನ), ಲಷ್ಕರ್ ಠಾಣೆಯ ಎಎಸ್‌ಐ ಸಿದ್ದರಾಜು(ಬೆಳ್ಳಿ), ವಿರಾಜಪೇಟೆ ಗ್ರಾಮಾಂತರ ಠಾಣೆ ಸಿಹೆಚ್‌ಸಿ ಎಂ.ಎಸ್.ಬೋಪಣ್ಣ(ಕಂಚು), ಹ್ಯಾಂಡ್ಲಿಂಗ್, ಲಿಂಫ್ಟಿಂಗ್ ಅಂಡ್ ಪ್ಯಾಕಿಂಗ್ ಸ್ಪರ್ಧೆಯಲ್ಲಿ ಮಳವಳ್ಳಿ ಪಟ್ಟಣ ಠಾಣೆ ಪಿಐ ರವಿಕುಮಾರ್(ಚಿನ್ನ), ಕುದೇರು ಠಾಣೆ ಪಿಎಸ್‌ಐ ತಾಜುದ್ದೀನ್(ಬೆಳ್ಳಿ), ಬೆಳಕವಾಡಿ ಪಿಎಸ್‌ಐ ವಿ.ಸಿ.ಅಶೋಕ (ಕಂಚು), ಮೆಡಿಕೋ ಲೀಗಲ್ ಓರಲ್ ಟೆಸ್ಟ್‌ನಲ್ಲಿ ಮಳವಳ್ಳಿ ಪಟ್ಟಣ ಠಾಣೆ ಪಿಐ ರವಿಕುಮಾರ್(ಚಿನ್ನ), ಬೆಳಕವಾಡಿ ಠಾಣೆ ಪಿಎಸ್‌ಐ ವಿ.ಸಿ.ಅಶೋಕ(ಬೆಳ್ಳಿ), ಮೈಸೂರು ಸೆನ್ ಠಾಣೆ ಪಿಎಸ್‌ಐ ಸಿದ್ದೇಶ್ (ಕಂಚು), ಕ್ರೈಂ ಸೀನ್ ಫೋಟೋಗ್ರಫಿ ಪರೀಕ್ಷೆಯಲ್ಲಿ ಯಶಳೂರು ಠಾಣೆ ಪಿಎಸ್‌ಐ ಎಂ.ಶ್ರೀನಿವಾಸ(ಚಿನ್ನ), ವಿವಿಪುರಂ ಠಾಣೆ ಪಿಎಸ್‌ಐ ಕೆ.ಕೆ.ಮೋಹನ್ (ಬೆಳ್ಳಿ), ಹಲಗೂರು ವೃತ್ತದ ಸಿಪಿಐ ಬಿ.ಎಸ್.ಶ್ರೀಧರ್(ಕಂಚು), ಕ್ರಿಮಿನಲ್ ಲಾ ರೂಲ್ಸ್, ಪ್ರೊಸೀಜರ್ ಅಂಡ್ ಅಮೆಂಡ್‌ಮೆಂಟ್ಸ್ ಅಂಡ್ ಕೋರ್ಟ್ ಜಡ್ಜ್‌ಮೆಂಟ್ಸ್ ರಿಟರ್ನ್ ಟೆಸ್ಟ್‌ನಲ್ಲಿ ಬೈಲುಕುಪ್ಪೆ ಠಾಣೆ ಪಿಎಸ್‌ಐ ಡಿ.ಎಂ.ಅಜಯ್‌ಕುಮಾರ್ ಹಾಗೂ ಪಿಟಿಎಸ್ ಪಿಎಸ್‌ಐ ನಿತ್ಯಾನಂದ(ಚಿನ್ನ), ಅಬ್ಸರ್ವೇಶನ್ ಟೆಸ್ಟ್‌ನಲ್ಲಿ ವಿರಾಜಪೇಟೆ ಪಟ್ಟಣ ಎಎಸ್‌ಐ ಎನ್.ಎಂ.ಮಂಜುನಾಥ, ಗ್ರಾಮಾಂತರ ಠಾಣೆ ಸಿಹೆಚ್‌ಸಿ ಎಂ.ಎಸ್.ಬೋಪಣ್ಣ, ಲಷ್ಕರ್ ಠಾಣೆ ಎಎಸ್‌ಐ ಪಿ.ಸಿದ್ದರಾಜು, ಫಿಂಗರ್ ಪ್ರಿಂಟ್ ಪ್ರಾಕ್ಟಿಕಲ್ ಅಂಡ್ ಓರಲ್ ಟೆಸ್ಟ್‌ನಲ್ಲಿ ಕುದೇರು ಠಾಣೆ ಪಿಎಸ್‌ಐ ತಾಜುದ್ದೀನ್, ಬೆಳಕವಾಡಿ ಠಾಣೆ ಪಿಎಸ್‌ಐ ವಿ.ಸಿ.ಅಶೋಕ ಹಾಗೂ ಮಂಡ್ಯ ಗ್ರಾಮಾಂತರ ಠಾಣೆ ಪಿಎಸ್‌ಐ ಕೆ.ಎಂ.ಮಹೇಶ್ ಬಹುಮಾನ ಪಡೆದರು.

ಕಂಪ್ಯೂಟರ್ ಅವೇರ್‌ನೆಸ್ ರಿಟರ್ನ್ ಟೆಸ್ಟ್‌ನಲ್ಲಿ ಮಂಡ್ಯ ಸೆನ್ ಠಾಣೆ ಸಿಪಿಸಿ ವಿ.ಆರ್.ಬಸವರಾಜು(ಚಿನ್ನ), ಅದೇ ಠಾಣೆಯ ಹೆಚ್.ಆರ್.ಸುಮನ್(ಬೆಳ್ಳಿ), ಪಾಂಡವಪುರ ಮಹಿಳಾ ಹೆಚ್‌ಸಿ ಜೆ.ಶೋಭಾ(ಕಂಚು), ಕಂಪ್ಯೂಟರ್ ಸ್ಪೀಡ್ ಟೆಸ್ಟ್‌ನಲ್ಲಿ ನಂಜನಗೂಡು ಗ್ರಾಮಾಂತರದ ಎಸ್‌ಎಸ್‌ಐ ಎಸ್.ವಸಂತ್ ಕುಮಾರ್(ಚಿನ್ನ), ಮೈಸೂರು ಡಿಎಆರ್ ಎಹೆಚ್‌ಸಿಗಳಾದ ಎಂ.ಜೆ.ಬಾಲರಾಜು(ಬೆಳ್ಳಿ), ವಿ.ಫಯಾಜ್(ಕಂಚು), ಪೊಲೀಸ್ ಫೋಟೋಗ್ರಫಿ ಟೆಸ್ಟ್‌ನಲ್ಲಿ ಮೈಸೂರಿನ ಸಿಎಆರ್‌ನ ಎಹೆಚ್‌ಸಿ ಡೇನಿಯಲ್ ಡಿಸೋಜ(ಚಿನ್ನ), ಕುಶಾಲನಗರ ಸಂಚಾರ ಠಾಣೆ ಸಿಪಿಸಿ ಕೆ.ಕೆ.ಸ್ವಾಮಿ (ಬೆಳ್ಳಿ), ಪೊಲೀಸ್ ವಿಡಿಯೋಗ್ರಫಿ ಟೆಸ್ಟ್‌ನಲ್ಲಿ ಕೊಡಗು ಸೆನ್ ಠಾಣೆ ಸಿಪಿಸಿ ಡಿ.ಆರ್.ಅಜೇಯ್(ಚಿನ್ನ), ಮೈಸೂರು ಸಿಎಆರ್‌ನ ಎಹೆಚ್‌ಸಿ ಮೋಹನ್ ರಾವ್(ಬೆಳ್ಳಿ) ಪದಕ ಪಡೆದುಕೊಂಡರು.

ಆಂಟಿ ಸಬೋಟೇಜ್ ಚೆಕ್ ಟೆಸ್ಟ್‌ನಲ್ಲಿ ಮಂಡ್ಯ ಡಿಎಆರ್‌ನ ಎಆರ್‌ಎಸ್‌ಐ ಕೆ.ಎಸ್.ಮಂಜುನಾಥ್(ಚಿನ್ನ), ಕೊಡಗು ಡಿಎಆರ್‌ನ ಎಪಿಸಿ ಉದಯ್ ಕುಮಾರ್(ಬೆಳ್ಳಿ), ಮಂಡ್ಯ ಡಿಎಆರ್‌ನ ಎಹೆಚ್‌ಸಿ ಮಹೇಂದ್ರ(ಕಂಚು), ಆಕ್ಸೆಸ್ ಕಂಟ್ರೋಲ್ ಅಂಡ್ ಬ್ಯಾಗೇಜ್ ಚೆಕ್ಕಿಂಗ್ ಟೆಸ್ಟ್‌ನಲ್ಲಿ ಮೈಸೂರು ಸಿಎಆರ್‌ನ ಎಪಿಸಿ ರವಿಕುಮಾರ್(ಚಿನ್ನ), ಮಂಡ್ಯ ಡಿಎಆರ್‌ನ ಆರ್‌ಎಸ್‌ಐ ಎ.ನವೀನ್ (ಬೆಳ್ಳಿ), ಕೊಡಗು ಡಿಎಆರ್‌ನ ಎಹೆಚ್‌ಸಿ ಅಶೋಕ್(ಕಂಚು), ರೂಂ ಸರ್ಚ್ ಟೆಸ್ಟ್‌ನಲ್ಲಿ ಕೊಡಗು ಡಿಎಆರ್‌ನ ಎಆರ್‌ಎಸ್‌ಐ ಜಿತೇಂದ್ರ ರೈ(ಚಿನ್ನ), ಮಂಡ್ಯ ಡಿಎಆರ್‌ನ ಎಆರ್‌ಎಸ್‌ಐ ಬಿ.ಎಸ್.ಕೃಷ್ಣ(ಬೆಳ್ಳಿ), ಮತ್ತೊರ್ವ ಎಆರ್‌ಎಸ್‌ಐ ರಾಜು(ಕಂಚು), ವೆಹಿಕಲ್ ಸರ್ಚ್‌ನಲ್ಲಿ ಮೈಸೂರು ಸಿಎಆರ್‌ನ ಎಆರ್‌ಎಸ್‌ಐ ದೇವರಾಜ(ಚಿನ್ನ), ಎಹೆಚ್‌ಸಿ ಮಲ್ಲೇಶ(ಬೆಳ್ಳಿ), ಕೊಡಗು ಡಿಎಆರ್‌ನ ಎಎಸ್‌ಆರ್‌ಐ ಶಿವಾನಂದ(ಕಂಚು) ಪದಕ ಪಡೆದರು.

ಡಾಗ್ಸ್ ಟೆಸ್ಟ್ ವಿಭಾಗ: ಎಕ್ಸ್‌ಪ್ಲೋಸಿವ್ ಡಾಗ್ಸ್ ಟ್ರೇಡ್ ಟೆಸ್ಟ್‌ನಲ್ಲಿ ಶ್ವಾನಗಳಾದ ಕೃಷ್ಣ(ಚಿನ್ನ), ಇಶಾ(ಬೆಳ್ಳಿ), ಲಾಸ್ಸಿ (ಕಂಚು), ಕ್ರೈಂ ಟ್ರ್ಯಾಕ್ಟರ್ ಡಾಗ್ಸ್ ಟ್ರೇಡ್ ಟೆಸ್ಟ್‌ನಲ್ಲಿ ಬ್ರೂನೊ(ಚಿನ್ನ), ಬಾಹು (ಬೆಳ್ಳಿ), ರಶ್ಮಿ(ಕಂಚು), ನಾರ್ಕೋಟಿಕ್ಸ್ ಡಾಗ್ಸ್ ಟ್ರೇಡ್ ಟೆಸ್ಟ್‌ನಲ್ಲಿ ಅರ್ಜುನ (ಚಿನ್ನ), ರಿಕ್ಕಿ(ಬೆಳ್ಳಿ), ಕಾಪರ್(ಕಂಚು) ಪದಕ ಪಡೆದವು. ಮೈಸೂರಿನ ಅರ್ಜುನ, ಅತ್ಯುತ್ತಮ ಶ್ವಾನ ಪುರಸ್ಕಾರಕ್ಕೆ ಭಾಜನವಾಯಿತು. ವಲಯ ಮಟ್ಟದಲ್ಲಿ ವಿಜೇತರಾದವರು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.

ಸಮಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಮೈಸೂರು ನಗರ ಡಿಸಿಪಿ ಜಾಹ್ನವಿ, ಎಎಸ್‌ಪಿಗಳಾದ ಡಾ.ಬಿ.ಎನ್.ನಂದಿನಿ, ಎಂ.ಬಾಬು, ಎಫ್‌ಎಸ್‌ಎಲ್ ಉಪ ನಿರ್ದೇಶಕ ಚಂದ್ರಶೇಖರ್, ಸಿಸ್ಟಮ್ ಅನಾಲಿಸಿಸ್‌ನ ನಾಗೇಶ್ ಮತ್ತಿತರರ ಅಧಿಕಾರಿಗಳು ಉಪಸ್ಥಿತರಿದ್ದರು.

ಅನಂತ್‌ಕುಮಾರ್ ಹೆಗಡೆ ವಿರುದ್ಧ ಕಾಂಗ್ರೆಸ್ ದೂರು ಸಲ್ಲಿಕೆ



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದ ಕಾಂಗ್ರೆಸ್ ನಿಯೋಗದ ವತಿಯಿಂದ ಮೈಸೂರು ನಗರ ಉಪ ಪೊಲೀಸ್ ಆಯುಕ್ತ ಮುತ್ತುರಾಜ್ ಅವರಿಗೆ ಭಾನುವಾರ ದೂರು ಸಲ್ಲಿಸಲಾಯಿತು.

ಮೈಸೂರು, ಜ.14(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಏಕವಚನದಲ್ಲಿ ನಿಂದಿಸಿರುವುದಲ್ಲದೆ ಸಮಾಜದಲ್ಲಿ ಶಾಂತಿ ಕದಡುವ ಪ್ರಚೋದನಾಕಾರಿ ಹೇಳಿಕೆ ನೀಡುತ್ತಿರುವ ಸಂಸದ ಅನಂತಕುಮಾರ್ ಹೆಗಡೆ ಅವರನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದ ಕಾಂಗ್ರೆಸ್ ನಿಯೋಗದ ವತಿಯಿಂದ ನಗರ ಪೊಲೀಸ್ ಆಯುಕ್ತರಿಗೆ ಭಾನುವಾರ ದೂರು ಸಲ್ಲಿಸಲಾಯಿತು.

ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ಅನಂತಕುಮಾರ್ ಹೆಗಡೆ, ಜ.13 ರಂದು ಬಿಜೆಪಿ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಏಕವಚನದಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಲ್ಲದೆ ಪ್ರಚೋದನಾಕಾರಿ ಭಾಷಣ ಮೂಲಕ ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಚಿನ್ನದಪಳ್ಳಿ ಮಸೀದಿ ಧ್ವಂಸ ಮಾಡುವುದಾಗಿ ಹೇಳಿದ್ದಾರೆ. ಸಮಾಜದಲ್ಲಿ ಶಾಂತಿ ಕದಡುತ್ತಿರುವ ಸಂಸದ ಅನಂತಕುಮಾರ್ ಹೆಗಡೆ ಅವರನ್ನು ಕೂಡಲೇ ಬಂಧಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಯಿತು.

ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಅಯೋಧ್ಯೆ ರಾಮಮಂದಿರ ಬಿಜೆಪಿಗರ ಸ್ವತ್ತಲ್ಲ. ಅದು ದೇಶಕ್ಕೆ ಸೇರಿದ್ದು. ರಾಮಜನ್ಮಭೂಮಿಯಲ್ಲಿ ಮೊದಲು ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪನೆ ಮಾಡಿದ್ದು ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿ ಎಂಬುದನ್ನು ಮರೆಯುವಂತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಏಕವಚನದಲ್ಲಿ ನಿಂದಿಸುವುದು ಖಂಡನೀಯ. ಪೊಲೀಸರು ಕೂಡಲೇ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸಂವಿಧಾನ ವಿರೋಧಿ, ಅಶ್ಲೀಲ ಪದ ಬಳಸಿರುವ ಸಂಸದ ಅನಂತಕುಮಾರ್ ಹೆಗಡೆ, ಮಸೀದಿ ಧ್ವಂಸ ಮಾಡುತ್ತೇವೆ ಎಂಬುದನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಬೇಕು. ಕೂಡಲೇ ಎಫ್‌ಐಆರ್ ದಾಖಲಿಸಬೇಕು. ಇಲ್ಲವಾದರೆ ಆಯುಕ್ತರ ಕಚೇರಿ ಎದುರೇ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

ನಾಟಕ ಮಾಡಿದ್ದಕ್ಕೆ ಬಂಧನ: ನರೇಂದ್ರ ಮೋದಿ ವಿಚಾರದಲ್ಲಿ ಶಾಲೆಯೊಂದರಲ್ಲಿ ನಾಟಕ ಪ್ರದರ್ಶನ ಮಾಡಿದ್ದಕ್ಕೆ ಪೊಲೀಸರು ಶಾಲೆಯ ಶಿಕ್ಷಕರನ್ನು, ಮಕ್ಕಳನ್ನು ಅರೆಸ್ಟ್ ಮಾಡಿದ್ದರು. ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ನಡೆಸಬೇಕಾದ ಪೊಲೀಸರು, ನಾವು ದೂರು ಕೊಟ್ಟರೂ ಕ್ರಮಕೈಗೊಳ್ಳುತ್ತಿಲ್ಲವೇಕೆ? ಎಂದು ಪ್ರಶ್ನಿಸಿದರಲ್ಲದೆ ಸಂಸದ ಅನಂತ್‌ಕುಮಾರ್ ಹೆಗಡೆ ವಿರುದ್ಧ ಕೂಡಲೇ ಪ್ರಕರಣ ದಾಖಲಾಗಬೇಕು ಎಂದು ಆಗ್ರಹಿಸಿದರು.

ಕೆಪಿಸಿಸಿ ಕಾರ್ಯದರ್ಶಿ ಚಂದ್ರಮೌಳಿ, ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ರಾಜ್ಯ ಕುರುಬರ ಸಂಘದ ಸುಬ್ರಹ್ಮಣ್ಯ, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಶಿವಣ್ಣ ಮುಖಂಡ ರಾಜು, ಯೂತ್ ಕಾಂಗ್ರೆಸ್ ಮಾಜಿ ಜಿಲ್ಲಾಧ್ಯಕ್ಷ ಮೋಸಿನ್ ಖಾನ್, ಬಸವರಾಜ್, ಕಾನೂನು ಘಟಕದ ತನುಜಾ ಮಹೇಶ್, ನಾಗೇಶ್, ಶಿವಪ್ರಸಾದ್ ಮತ್ತಿತರರಿದ್ದರು.

ಕಾಂಗ್ರೆಸ್ ಮೇಲೆ ತಪ್ಪೊರಿಸುವ ಹುನ್ನಾರ...!

ಜ.22 ರಂದು ಅಯೋಧ್ಯೆ ಶ್ರೀ ರಾಮಮಂದಿರದಲ್ಲಿ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ ಹಿನ್ನಲೆಯಲ್ಲಿ ಮೈಸೂರಿನೆಲ್ಲೆಡೆ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಮೆರವಣಿಗೆಗಳು ನಡೆಸುವ ಸಾಧ್ಯತೆ ಇದೆ ಈ ವೇಳೆ ಬಿಜೆಪಿಯವರೇ ಕೋಮು ಗಲಭೆ ಸೃಷ್ಟಿ, ಕಾಂಗ್ರೆಸ್ ಮೇಲೆ ತಪ್ಪೊರಿಸುವ ಹುನ್ನಾರ ನಡೆಸುತ್ತಿದ್ದಾರೆ. ಈ ಬಗ್ಗೆ ಪೊಲೀಸರು ಎಚ್ಚರಿಕೆ ವಹಿಸಬೇಕು. ಅಂದು ಮೈಸೂರಿನ ದೇವಾಲಯಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆದರೂ ಅದರ ಸಂಪೂರ್ಣ ಹೊಣೆ ಬಿಜೆಪಿಯದ್ದೇ.

- ಡಾ.ಬಿ.ಜೆ.ವಿಜಯ್ ಕುಮಾರ್,

ಅಧ್ಯಕ್ಷ, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ

ರಾಮನಗರ: ಕಾಲಿಗೆ ಬಿದ್ದ ಮಹಿಳೆಯರು: ಗದರಿದ ಸಂಸದ ಡಿ.ಕೆ. ಸುರೇಶ್

ಹಾರೋಹಳ್ಳಿ (ರಾಮನಗರ): 'ಬಹಳ ದಿನಗಳಿಂದ ಕೃಷಿ ಮಾಡುತ್ತಿದ್ದ ಜಮೀನನ್ನು ತೆರವುಗೊಳಿಸಿ ಅರಣ್ಯ ಇಲಾಖೆ ಸ್ವಾಧೀನಕ್ಕೆ ತೆಗೆದುಕೊಂಡಿದೆ. ಅರಣ್ಯ ಇಲಾಖೆಯಿಂದ ನಮ್ಮ ಜಮೀನು ವಾಪಸ್ ಕೊಡಿಸಿ' ಎಂದು ದಲಿತ ಮಹಿಳೆಯರು ಸಂಸದ ಡಿ.ಕೆ. ಸುರೇಶ್ ಅವರ ಕಾಲಿಗೆ ಬಿದ್ದು ಅಂಗಲಾಚಿದರು.

ಹಾರೋಹಳ್ಳಿಯ ಕೆಪಿಎಸ್ ಶಾಲೆ ಆವರಣದಲ್ಲಿ ಭಾನುವಾರ ನಡೆದ ಜನಸಂಪರ್ಕ ಸಭೆಯಲ್ಲಿ ಪಾಲ್ಗೊಂಡಿದ್ದ ಮರಳವಾಡಿ ಹೋಬಳಿಯ ಸಿಡಿದೇವರಹಳ್ಳಿ ಗ್ರಾಮದ ರೈತ ಮಹಿಳೆಯರು 'ಹೆಣ ಹೊಳಲು ಜಾಗವಿಲ್ಲ ಜಮೀನು ಬಿಡಿಸಿಕೊಡಿ' ಎಂದು ಮನವಿ ಮಾಡಿದರು.

'ಏ ಸುಮ್ನಿರಿ...ನೀವೆಲ್ಲ ಜಮೀನು ಮಾರಾಟ ಮಾಡಿಕೊಂಡಿರುವುದು ನನಗೆ ಗೊತ್ತಿದೆ' ಎಂದು ಡಿ.ಕೆ. ಸುರೇಶ್ ಅವರು ಮಹಿಳೆಯರನ್ನು ಗದರಿಸಿದರು.

'ದೇವರಹಳ್ಳಿಯಲ್ಲಿ ದಲಿತರು 30–40 ವರ್ಷದಿಂದ ವ್ಯವಸಾಯ ಮಾಡಿಕೊಂಡು ಬಂದಿದ್ದ ಜಮೀನನ್ನು (ಸರ್ವೇ ಸಂಖ್ಯೆ104) ಏಕಾಏಕಿ ವಶಕ್ಕೆ ಪಡೆದ ಅರಣ್ಯ ಅಧಿಕಾರಿಗಳು ಕಂದಕ ತೋಡಿದ್ದಾರೆ. 94 ಜನರ ಹೆಸರಿನಲ್ಲಿ ಖಾತೆಯಿದ್ದು, ಕಂದಾಯ ಕೂಡ ಕಟ್ಟಲಾಗಿದೆ. ನೀವೆ ನ್ಯಾಯ ಕೊಡಿಸಿ' ಎಂದು ಮಹಿಳೆಯರು ಮನವಿ ಮಾಡಿದರು.

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ 19 ನಿರ್ದೇಶಕರ ಸ್ಥಾನಕ್ಕೆ ಚುನಾವಣೆ

10 ಸ್ಥಾನಗಳಲ್ಲಿ ಡಿ.ಗೌರಮ್ಮ ಬಣ ಜಯಭೇರಿ

ಡಾ.ಎಂ.ವಿ.ಬೃಹದಂಬ ಬಣ 9 ಸ್ಥಾನಗಳಲ್ಲಿ ಗೆಲುವು



ಮೈಸೂರಿನ ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಹೈಸ್ಕೂಲ್‌ನಲ್ಲಿ ಫಲಿತಾಂಶದ ಬಳಿಕ ಗೆದ್ದ ಅಭ್ಯರ್ಥಿಗಳು ಸಂಭ್ರಮಿಸಿದ ಕ್ಷಣ.

ಮೈಸೂರು,ಜ.14(ಪಿಎಂ)– ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್‌ನ 2024–28ನೇ ಅವಧಿಯ ಆಡಳಿತ ಮಂಡಳಿಯ ಒಟ್ಟು 19 ನಿರ್ದೇಶಕರ ಸ್ಥಾನಗಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ 10 ಸ್ಥಾನಗಳಲ್ಲಿ ಡಿ.ಗೌರಮ್ಮ ಬಣ ಜಯಭೇರಿ ಭಾರಿಸಿದೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ರಾಮಸ್ವಾಮಿ ವೃತ್ತದ ಸಮೀಪದ ಹಾರ್ಡ್ವಿಕ್ ಹೈಸ್ಕೂಲ್‌ನಲ್ಲಿ ಮತದಾನ ಹಾಗೂ ಎಣಿಕೆ ಪ್ರಕ್ರಿಯೆ ನಡೆಯಿತು. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯ ವಿವಿಧ ಕ್ಷೇತ್ರಗಳ 19 ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ಜರುಗಿತು.

ಮೈಸೂರು ನಗರ ಕ್ಷೇತ್ರದಿಂದ ಸಾಮಾನ್ಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಡಿ.ಗೌರಮ್ಮ (ಪಡೆದ ಮತಗಳು 749) ಗೆಲುವು ಸಾಧಿಸಿದ್ದು, ಇವರ ಬಣದ 9 ಮಂದಿ ಸಹ ಗೆಲುವು ದಾಖಲಿಸಿದರು. ಮೈಸೂರು ನಗರ ಕ್ಷೇತ್ರದಿಂದ ಸಾಮಾನ್ಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಡಾ.ಎಂ.ವಿ.ಬೃಹದಂಬ (794 ಮತಗಳು) ಹಾಗೂ ಅವರ ಬಣ 8 ಮಂದಿ ಗೆಲವು ಸಾಧಿಸಿದರು.

ಡಿ.ಗೌರಮ್ಮ ಬಣದಲ್ಲಿ ಕೆ.ಎನ್.ಕಲ್ಪನಾ (573 ಮತಗಳು), ಪಿ.ಗೀತಾ (697), ಎಸ್.ಪ್ರೇಮ (ಪ್ರೇಮ ಶಂಕರೇಗೌಡ 704), ಎಂ.ಎಸ್.ಭಾರತಿ (558), ಪಿ.ಭಾರತಿ (611), ಮೋದಾಮಣಿ (640), ಮಂಜುಳ ಮಾನಸ (728), ಬಿ.ಎಸ್.ಲತಾ (639), ಡಾ.ಎಂ.ಶಾರದ (710) ಜಯಭೇರಿ ಭಾರಿಸಿದರು. ಡಾ.ಎಂ. ವಿ.ಬೃಹದಂಬ ಬಣದಲ್ಲಿ ಪ್ರಭಾಮಣಿ (680), ಪ್ರಭಾ ಸುರೇಂದ್ರ (737), ಡಾ.ಎನ್.ಎಂ.ಭಾಗೀರಥಿ (569), ಬಿ.ಟಿ. ಭಾಗೀರಥಿ (502), ಎಸ್.ಮಹಾಲಕ್ಷ್ಮಿ (472), ಮೀನಾ ಶ್ರೀನಿವಾಸ್ (640), ಡಾ.ಡಿ. ಶೀಲಾ ಕುಮಾರಿ (713), ಸುಶೀಲಾ ನಂಜಪ್ಪ (771) ಆಯ್ಕೆಯಾದರು.

ಮೂವರು ಸ್ವತಂತ್ರ ಅಭ್ಯರ್ಥಿಗಳೂ ಸೇರಿದಂತೆ ಒಟ್ಟು 41 ಅಭ್ಯರ್ಥಿಗಳು ಕಣದಲ್ಲಿದ್ದರು. ಬ್ಯಾಂಕಿನಲ್ಲಿ ಒಟ್ಟು 2,272 ಮತದಾರರು ಇದ್ದು, ಮತ ಎಣಿಕೆ ಬಳಿಕ ಚುನಾವಣಾಧಿಕಾರಿ ಬಿ.ಆರ್.ರಘು ಫಲಿತಾಂಶ ಘೋಷಣೆ ಮಾಡಿದರು.

ಸಂಸ್ಕೃತಿ ಉಳಿಸಿ, ಬೆಳೆಸಲು ಒಗ್ಗಟ್ಟಿನ ಹೋರಾಟ ಅಗತ್ಯ

'ನಮ್ಮೂರ ಕನ್ನಡ ಹಬ್ಬ'ದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ ಕರೆ

ನಂಜನಗೂಡು, ಜ.14– ನಮ್ಮ ನಾಡಿನ ಕಲೆ, ಸಂಸ್ಕೃತಿಗೆ ಅಪಾರವಾದ ಜನಮನ್ನಣೆಯಿದೆ ಅದನ್ನು ಉಳಿಸಿಕೊಂಡು ಮುಂದಿನ ಪೀಳಿಗೆಗೆ ಕಲಿಸುವ ಕೆಲಸ ಮಾಡುವುದರ ಜೊತೆಗೆ ನಮ್ಮ ನಾಡು, ನುಡಿಯನ್ನು ಉಳಿಸಿ ಬೆಳೆಸುವ ಸಲುವಾಗಿ ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ನಡೆಸಬೇಕಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ದೇವೀರಮ್ಮನಹಳ್ಳಿ ಶರಣ ಸಂಗಮ ಮಠದ ಆವರಣದಲ್ಲಿ ಪ್ರತಿಧ್ವನಿ ವೇದಿಕೆ ವತಿಯಿಂದ ಶನಿವಾರ ರಾತ್ರಿ ಆಯೋಜಿಸಿದ್ದ ನಮ್ಮೂರ ಕನ್ನಡ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ನಾಡು, ನುಡಿಯನ್ನು ಎತ್ತಿ ಹಿಡಿಯುವ ಕೆಲಸ ಮಾಡುವ ಮೂಲಕ ಮುಂದಿನ ಪೀಳಿಗೆಗೆ ಕನ್ನಡ ಭಾಷೆ ಬಗ್ಗೆ ಅರಿವು ಮೂಡಿಸುವ ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ನಡೆಯಬೇಕಿದೆ ಎಂದರು.

ಗುಂಡ್ಲುಪೇಟೆ ಶಾಸಕ ಗಣೇಶ್‌ಪ್ರಸಾದ್ ಮಾತನಾಡಿ, ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡುವ ಸಲುವಾಗಿ ಕೈಗಾರಿಕೆಗಳು ಹೆಚ್ಚಾಗಬೇಕೆಂಬುದು ಎಲ್ಲರ ಆಶಯ. ಆದರೆ ಕೈಗಾರಿಕೆಗಳಿಗೆ ಸ್ಥಳೀಯರಿಗಿಂತ ಹೆಚ್ಚಾಗಿ ಹೊರ ದೇಶ ಹಾಗೂ ಹೊರ ರಾಜ್ಯದವರೇ ಹೂಡಿಕೆ ಮಾಡುವುದರಿಂದ ಸ್ಥಳೀಯರಿಗೆ ಉದ್ಯೋಗವಕಾಶವನ್ನು ನೀಡದೆ ಹೊರಗಿನವರಿಗೆ ಆದ್ಯತೆ ನೀಡುವುದರಿಂದ ಅಂತವರಿಗೆ ರೈತರ ಭೂಮಿ ಕೊಟ್ಟು ಏನೂ ಪ್ರಯೋಜನವಾಗುವುದಿಲ್ಲ. ಖಾಸಗಿ ವಲಯದಲ್ಲೂ ಸ್ಥಳೀಯರಿಗೆ ಉದ್ಯೋಗ ಮೀಸಲು ಕಲ್ಪಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಚಿಂತನೆ ನಡೆಸಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ ಹಿರಿಯ ಪತ್ರಕರ್ತ ನಂಜನಗೂಡು ಮಧು, ಟಿ.ಆರ್.ವಿದ್ಯಾಸಾಗರ್, ಶಂಕರ್ ಪ್ರಸಾದ್, ಗೋಳೂರು ನಾರಾಯಣಸ್ವಾಮಿ, ಚೇತನ್, ಡಾ.ಹರಿಪ್ರಸಾದ್, ಪೈಲ್ವಾನ್ ಸಿದ್ದರಾಜು, ಮುನೀರ್, ಗೀತಾ, ಮಣಿಕಂಠ, ಹಲ್ಲರೆ ಶಿವಬುದ್ಧಿ, ಮಹೇಂದ್ರ, ಮಹೇಶ್, ಕಲ್ಮಳ್ಳಿ ನಟರಾಜು, ಹುಸ್ಕೂರು ರಾಜಶೇಖರ್, ವಸುತ ಚನ್ನಪ್ಪ ಸೌಮ್ಯ ಸಿದ್ದರಾಜು, ಕೆನಂಜುಂಡಯ್ಯ, ಉಲ್ಲಾಸ್ ಅವರಿಗೆ ಕನ್ನಡ ಧ್ವನಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಚಿಕ್ಕಮಗಳೂರು ಜಿಲ್ಲೆ ಎನ್.ಆರ್.ಪುರ ಬಸವಕೇಂದ್ರದ ಬಸವಯೋಗಿ ಪ್ರಭುಗಳು, ಶರಣ ಸಂಗಮ ಮಠದ ನಾಗರಾಜೇಂದ್ರ ಸ್ವಾಮೀಜಿ, ಜಾಮಿಯ ಮಸೀದಿಯ ಅಬ್ದುಲ್ ಮುಸಾಫಿರ್ ರಷಾದಿ, ಸಾನ್ನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು.


ನಂಜನಗೂಡಿನಲ್ಲಿ ನಡೆದ ನಮ್ಮೂರ ಕನ್ನಡ ಹಬ್ಬ ಕಾರ್ಯಕ್ರಮವನ್ನು ಶಾಸಕ ದರ್ಶನ್ ಧ್ರುವನಾರಾಯಣ ಉದ್ಘಾಟಿಸಿದರು.

> 12ನೇ ಶತಮಾನದಲ್ಲಿ ಮಾನವೀಯ ಮೌಲ್ಯ, ತತ್ವಾದರ್ಶಗಳನ್ನು ತಮ್ಮ ಅನುಭವದ ಬುತ್ತಿಯನ್ನು ವಚನಗಳ ಮೂಲಕ ಬಸವಾದಿ ಶರಣರು ನಾಡಿಗೆ ಕೊಟ್ಟು ಹೋಗಿದ್ದಾರೆ. ಆದರೆ, ಅವರ ವಚನಗಳನ್ನು ನಾವು ಹೇಳುವುದಕ್ಕಷ್ಟೇ ಸೀಮಿತಗೊಳಿಸಿದ್ದೇವೆ. ಪರಿಪಾಲಿಸುವಲ್ಲಿ ನಾವು ಎಡವಿದ್ದೇವೆ.
>
> – ನಾಜೀಯಾ ಸುಲ್ತಾನ, ಸಹಾಯಕ ಕಾರ್ಮಿಕ ಆಯುಕ್ತೆ

ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಪ್ರತಿಧ್ವನಿ ವೇದಿಕೆ ರಾಜ್ಯಾಧ್ಯಕ್ಷ ಪ್ರಸಾದ್, ತಾಲೂಕು ಅಧ್ಯಕ್ಷ ತ್ರಿನೇಶ್, ಪಟ್ಟಣ ಅಧ್ಯಕ್ಷ ಆನಂದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಜಿ.ಪಂ.ಮಾಜಿ ಸದಸ್ಯ ಸಿ.ಚಿಕ್ಕ ರಂಗನಾಯಕ, ವಿಶ್ವಕರ್ಮ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ, ಮುಖಂಡರಾದ ನಾಗೇಶ್ ರಾಜ್, ಮಾಜಿ ನಗರಪಾಲಿಕೆ ಸದಸ್ಯ ಪ್ರದೀಪ್ ಕುಮಾರ್, ರಂಗೂಪುರ ಮಹೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮೇರಿ ಕ್ರಿಸ್ಮಸ್(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಆಯಲಾಮ್ (ತ)	4 ಪ್ರದರ್ಶನಗಳು
ಸಂಗಂ	
ಕ್ಯಾಪ್ಟನ್ ಮಿರರ್(ಕ) 2 ಪ್ರದರ್ಶನಗಳು ಕ್ಯಾಪ್ಟನ್ ಮಿರರ್(ತ)	2 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್–3 (ಹಿಂ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9.05ಕ್ಕೆ, ಮ.3.50ಕ್ಕೆ, ಕಾಟೇರ (ಕ): ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ.
ಸ್ಕ್ರೀನ್ 2	ಅಯಲಾನ್ (ತ): ಬೆ.10ಕ್ಕೆ, ಸಂ.4.05ಕ್ಕೆ, ಮೇರಿ ಕ್ರಿಸ್‌ಮಸ್ (ತ): ಮ.1.10ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.15ಕ್ಕೆ, ಅಬ್ರಾಹಂ ಓಜ್ಲರ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಕ್ಯಾಪ್ಟನ್ ಮಿಲ್ಲರ್ (ಕ): ಬೆ.9.55ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.1ಕ್ಕೆ, ರಾ.10.20ಕ್ಕೆ, ಹನುಮಾನ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.35ಕ್ಕೆ, ಗುಂಟೂರು ಕಾರಂ (ತೆ): ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಮೇರಿ ಕ್ರಿಸ್‌ಮಸ್ (ಹಿಂ): ಬೆ.8.55ಕ್ಕೆ, ಕಾಟೇರ (ಕ): ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, ಅಯಲಾನ್ (ತ): ಮ.3.30ಕ್ಕೆ.
ಸ್ಕ್ರೀನ್ 3	ಕಾಟೇರ (ಕ): ಬೆ.8.50ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.12.25ಕ್ಕೆ, ರಾ.10.10ಕ್ಕೆ, ಕ್ಯಾಪ್ಟನ್ ಮಿಲ್ಲರ್ (ಕ): ಮ.3.45ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.05ಕ್ಕೆ.
ಸ್ಕ್ರೀನ್ 4	ಸೈಂಧವ್ (ತೆ): ಬೆ.9.10ಕ್ಕೆ, ಮ.3.35ಕ್ಕೆ, ಹನುಮಾನ್ (ತೆ): ಮ.12.10ಕ್ಕೆ, ರಾ.10ಕ್ಕೆ, ಅಯಲಾನ್ (ತ): ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರೈತ ಸೇವಾ ಸಹಕಾರ ಸಂಘಕ್ಕೆ ಆಯ್ಕೆ

ಹುಣಸೂರು: ತಾಲೂಕಿನ ಗಾವಡಗೆರೆ ರೈತ ಸೇವಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಗಾವಡಗೆರೆ ಗ್ರಾಮದ ಲೋಕನಾಥ್ ರಾವ್ ಕದಂ ಅವಿರೋಧವಾಗಿ ಆಯ್ಕೆಯಾದರು.

ಶುಕ್ರವಾರ ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಲೋಕನಾಥ್ ರಾವ್ ಕದಂ ಒಬ್ಬರೇ ನಾಮಪತ್ರ ಸಲ್ಲಿಸಿದ ಕಾರಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ಸಹಕಾರ ಇಲಾಖೆ ಸಿಡಿಒ ಹಸೀನಾ ತಿಳಿಸಿದ್ದಾರೆ.

ಈ ವೇಳೆ ಮಾಜಿ ಅಧ್ಯಕ್ಷ ತಿಮ್ಮನಾಯಕ, ತಾ.ಪಂ ಮಾಜಿ ಸದಸ್ಯ ಗಣಪತಿ ಇಂಡಲ್ಕರ್, ತೊಂಡಾಳು ಕೃಷ್ಣಶೆಟ್ಟಿ,ಮಲ್ಲೇಶ್, ಆನಂದನಾಯಕ, ಯಶೋಧರ,ಜಯಮ್ಮ ತಾರಕೇಶ್ವರಿ, ಚಂದ್ರಕಲಾ, ಅಪ್ಪಾಜಿಗೌಡ, ಶಿವಶಂಕರ್, ಶ್ರೀಕಂಠಪ್ಪ, ಮುಕುಂದ ಸೇರಿದಂತೆ ಇತರರು ಇದ್ದರು.

ಶಾಸಕ ಹರೀಶ್‌ಗೌಡರಿಂದ ಅಂಬೇಡ್ಕರ್ ಪ್ರತಿಮೆ ಗೋಪುರ ನಿರ್ಮಾಣಕ್ಕೆ ದೇಣಿಗೆ

ಹಿರೀಕ್ಯಾತನಹಳ್ಳಿ, ಜ.14– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಕಟ್ಟೆಮಳಲವಾಡಿ ಗ್ರಾಮದಲ್ಲಿ ನಿರ್ಮಾಣಗೊಳ್ಳುತ್ತಿರುವ ಅಂಬೇಡ್ಕರ್ ಪ್ರತಿಮೆ ಗೋಪುರದ ನಿರ್ಮಾಣಕ್ಕೆ ಶಾಸಕ ಜಿ.ಡಿ. ಹರೀಶ್‌ಗೌಡ 24 ಲಕ್ಷ ರೂ. ದೇಣಿಗೆ ನೀಡಿದ್ದಾರೆ ಎಂದು ಪ್ರತಿಮೆ ನಿರ್ಮಾಣ ಸಮಿತಿ ಅಧ್ಯಕ್ಷ ನಾಗರಾಜ ಮಲ್ಲಾಡಿ ತಿಳಿಸಿದ್ದಾರೆ.

ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಪ್ರತಿಮೆ ಬಳಿ ಕಾಮಗಾರಿ ವೀಕ್ಷಿಸಿ ಶಾಸಕ ಜಿ.ಡಿ.ಹರೀಶ್‌ಗೌಡರಿಂದ ಧನ ಸಹಾಯ ಪಡೆದು ಮಾತನಾಡಿದ ಅವರು, ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕಾಮಗಾರಿಗೆ ಧನ ಸಹಾಯ ಮಾಡಿರುವುದು ಹಾಗೂ ನುಡಿದಂತೆ ನಡೆದಿದ್ದಾರೆ. ಶಾಸಕ ಜಿ.ಡಿ. ಹರೀಶ್‌ಗೌಡರು ಚುನಾವಣೆಗೂ ಮುನ್ನ ನಾನು ಸಂಪೂರ್ಣವಾಗಿ 30 ಲಕ್ಷ ನೀಡುವುದಾಗಿ ಹೇಳಿದ್ದರು. ಮಾತಿನಂತೆ ನಡೆದುಕೊಂಡಿದ್ದಾರೆ. ಅದೇ ರೀತಿ ಸಂಪೂರ್ಣ ಧನ ಸಹಾಯ ಮಾಡಿ ಕಾಮಗಾರಿ ಪೂರ್ಣಗೊಳ್ಳಲು ಅನುಕೂಲ ಮಾಡಿಕೊಟ್ಟಿದ್ದಾರೆ.

ಜೊತೆಗೆ ಮೈಸೂರು ಕೊಡಗು ಲೋಕ ಸಭಾ ಕ್ಷೇತ್ರದ ಸಂಸದ 10 ಲಕ್ಷ, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ 5 ಲಕ್ಷರೂ. ಅನುದಾನ ನೀಡಿದ್ದಾರೆ ಈಗಾಗಲೇ ಕಾಮಗಾರಿಗೆ ಸುಮಾರು 65 ಲಕ್ಷಕ್ಕೂ ಹೆಚ್ಚು ಹಣ ಖರ್ಚಾಗಿದ್ದು ಇನ್ನೂ 40 ಲಕ್ಷಕ್ಕೂ ಹೆಚ್ಚು ಹಣ ಬೇಕಾಗಿದೆ.

ಶಾಸಕ ಜಿ.ಡಿ. ಹರೀಶ್‌ಗೌಡ ಮಾತನಾಡಿ, ಈಗಾಗಲೇ ಕೊಟ್ಟ ಮಾತಿನಂತೆ ಅಂಬೇಡ್ಕರ್ ಗೋಪುರ ಪ್ರತಿಮೆಗೆ ಸಂಪೂರ್ಣ ಸಹಾಯ ಮಾಡಿದ್ದು ಜೊತೆಗೆ ನಂತರ ಈ ಪ್ರತಿಮೆ ಬಳಿ ನೂತನವಾಗಿ ಡಿಜಿಟಲ್ ಗ್ರಂಥಾಲಯಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಚಿನ್ನು ಮುತ್ತು, ಉಪಾಧ್ಯಕ್ಷ ದಿಲೀಪ್, ಪ್ರತಿಮೆ ನಿರ್ಮಾಣ ಸಮಿತಿ ಸದಸ್ಯರಾದ ಶ್ರೀಧರ್, ಪುಟ್ಟರಾಜ್, ಕುಮಾರ್, ತಗಡಯ್ಯ, ರಾಜೇಶ್, ರಾಜು, ಸಂತೋಷ್ ಹಲವರು ಮುಖಂಡರಿದ್ದರು.


ಕಟ್ಟೆಮಳಲವಾಡಿ ಗ್ರಾಮದ ಅಂಬೇಡ್ಕರ್ ಪ್ರತಿಮೆಯ ಗೋಪುರಕ್ಕೆ ಧನಸಹಾಯ ನೀಡಿದ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಸನ್ಮಾನಿಸಲಾಯಿತು.


ಕಾಡಂಚಿನ ಪ್ರದೇಶಗಳಲ್ಲಿ ಹುಲಿ ಉಪಟಳ

ಸರಗೂರು, ಜ.14– ಬಂಡೀಪುರ ಕಾಡಂಚಿನ ಪ್ರದೇಶದ ವ್ಯಾಪ್ತಿಯ ಗ್ರಾಮಗಳಲ್ಲಿ ಹುಲಿ ಉಪಟಳ ಜೋರಾಗಿದ್ದು ಹುಲಿಯೊಂದು ಹಸುವನ್ನು ಕೊಂದು ತಿಂದು ಹಾಕಿದೆ.

ತಾಲೂಕಿನ ಶಿವಪುರ ಗ್ರಾಮದ ವಾಟರ್ ಮ್ಯಾನ್ ರಾಜಣ್ಣ ಎಂಬುವರು ಜಮೀನಿನಲ್ಲಿ ಹಸುವನ್ನು ಮೇಯಿಸುತ್ತಿದ್ದ ವೇಳೆ ಹುಲಿಯೊಂದು ಏಕಾಏಕಿ ದಾಳಿ ನಡೆಸಿ ಕೊಂದು ತಿಂದಿದೆ. ಇದಲ್ಲದೆ ಕೆಲ ದಿನಗಳ ಹಿಂದೆಯಷ್ಟೆ ಜಯಲಕ್ಷ್ಮಿಪುರ ಗ್ರಾಮದಲ್ಲಿಯೂ ಹಸು ಬಲಿ ಪಡೆದಿತ್ತು. ಹುಲಿ ಸೆರೆಗೆ ಅರಣ್ಯ ಇಲಾಖೆ ಬೋನು ಇರಿಸಿದೆ. ಆದರೆ, ಅರಣ್ಯ ಇಲಾಖೆ ಹುಲಿ ಸೆರೆಗೆ ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳದಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಈ ಸಂಬಂಧಿಸಿ ಹಲವು ಬಾರಿ ಅರಣ್ಯ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಮುಂದಾದರೂ ಇಲಾಖೆ ಎಚ್ಚೆತ್ತುಕೊಂಡು ಜನ ಜಾನುವಾರುಗಳ ರಕ್ಷಣೆಗೆ ಮುಂದಾಗಬೇಕು. ತಪ್ಪಿದ್ದಲ್ಲಿ ಅರಣ್ಯ ಇಲಾಖೆ ಕಚೇರಿ ಎದುರು ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ರೈತರು ಎಚ್ಚರಿಕೆ ನೀಡಿದ್ದಾರೆ.

ತುಮ್ಮನೇರಳೆ ಹಾಲು ಉತ್ಪಾದಕರ ಸಂಘ ಕಾಂಗ್ರೆಸ್ ತೆಕ್ಕೆಗೆ


ತುಮ್ಮನೇರಳೆ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಗ್ರಾಪಂ ಅಧ್ಯಕ್ಷರಾದ ನಂದೀಶ್ ಬೆಂಬಲಿತರಾದ ಕಾಂಗ್ರೆಸ್ ಪಕ್ಷದ ಮಂಜುನಾಥ್ ಅಧ್ಯಕ್ಷರಾಗಿ, ಚಿನ್ನಸ್ವಾಮಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮಾಜಿ ಪ್ರಧಾನ ಟಿ.ಜಿ.ನಾಗರಾಜು, ಗ್ರಾಪಂ ಅಧ್ಯಕ್ಷ ನಂದೀಶ್, ಪಟೇಲ್ ಗುರುಸ್ವಾಮಿ, ನಂಜುಂಡಸ್ವಾಮಿ, ಚಂದ್ರು, ನಂದೀಶ್, ಪದ್ಮ ರಾಜಣ್ಣ, ಶಾರದ ಶಿವಕುಮಾರ್, ಗೌರಮ್ಮ, ಗಿರೀಶ್, ಮಾದಪ್ಪ, ಮಹೇಶ್, ನಟರಾಜು, ಪಳ್ಳಿ ಮಂಜು, ಗೂಳಿ ಮಂಜು, ಮಂಗಳಮ್ಮ, ರವಿ ಮುಂತಾದವರನ್ನು ಚಿತ್ರದಲ್ಲಿ ಕಾಣಬಹುದು.

ಗಿಗ್ ಕಾರ್ಮಿಕರಿಗೆ ವಿಮಾ ಯೋಜನೆ ಸೌಲಭ್ಯ


ಹೆಚ್.ಡಿ.ಕೋಟೆಯಲ್ಲಿ ವಿಮಾ ಯೋಜನೆ ಸೌಲಭ್ಯ ಕಾರ್ಡ್‌ಗಳನ್ನು ವಿತರಿಸಲಾಯಿತು.

ಹೆಚ್.ಡಿ. ಕೋಟೆ, ಜ.14– ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗಿಗ್ ಕಾರ್ಮಿಕರಿಗೆ ವಿಮಾ ಯೋಜನೆಯನ್ನು ದೇಶದಲ್ಲಿ ಮೊದಲ ಬಾರಿಗೆ ರಾಜ್ಯದಲ್ಲಿ ಜಾರಿಗೆ ತರಲಾಗಿದೆ ಎಂದು ಕಾರ್ಮಿಕ ಇಲಾಖೆಯ ವಿಸ್ತರಣಾಧಿಕಾರಿ ಪರಶಿವಮೂರ್ತಿ ತಿಳಿಸಿದರು.

ಹೆಚ್.ಡಿ.ಕೋಟೆ ಪಟ್ಟಣದ ಪತ್ರಕರ್ತರ ಕಚೇರಿಯಲ್ಲಿ ಮಾತನಾಡಿದ ಅವರು, ಪತ್ರಿಕಾ ವಿತರಕರಾಗಿ ಸೇವೆ ಸಲ್ಲಿಸುತ್ತಿರುವ ಗಿಗ್ ಕಾರ್ಮಿಕರಿಗೆ ವಿಮಾ ಯೋಜನೆ ಅವಶ್ಯ. ಪಟ್ಟಣದಲ್ಲಿ ಕಾರ್ಮಿಕ ಇಲಾಖೆಯಲ್ಲಿ ವಿಮಾ ಸೌಲಭ್ಯವು ಕರ್ತವ್ಯದಲ್ಲಿ ಇರುವಾಗ ಇಲ್ಲದಿರುವಾಗ ಸಂಭವಿಸುವ ಅಪಘಾತಗಳಿಗೆ ಅನ್ವಯವಾಗಲಿದೆ. ಯೋಜನೆಯು ಸಂಪೂರ್ಣ ಉಚಿತವಾಗಿದ್ದು, ಯಾವುದೇ ರೀತಿಯ ಪ್ರೀಮಿಯಂ ಪಾವತಿಸದೆ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಸ್ವಿಗ್ಗಿ, ಜೊಮೇಟೊ ಸಂಸ್ಥೆಗಳಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ನಿರ್ವಹಿಸುವ ಹಾಗೂ ಈ ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಪ್ಕಾರ್ಟ್, ಪೋಲ್ಡರ್, ಫಾರ್ಮಸಿ, ಬ್ಲಿಂಕಿಟ್, ಬಿಗ್ ಬಾಸ್ಕೆಟ್, ಡಾಮಿನೋಸ್ ಮುಂತಾದ ಸಂಸ್ಥೆಗಳಲ್ಲಿ ಡೆಲಿವರಿಯಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರು ಈ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ ಎಂದರು.

ಅಪಘಾತದಿಂದ ಮರಣ ಹೊಂದಿದಲ್ಲಿ ವಿಮಾ ಪರಿಹಾರ 2 ಲಕ್ಷ ಹಾಗೂ ಜೀವ ವಿಮಾ 2 ಲಕ್ಷ ಸೇರಿ ಒಟ್ಟು 4 ನಾಲ್ಕು ಲಕ್ಷಗಳನ್ನು ಈ ವಿಮೆಯು ಹೊಂದಿದೆ.

ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ಎರಡು ಲಕ್ಷದವರೆಗೆ ಆಸ್ಪತ್ರೆ ವೆಚ್ಚ ಜೀವ ವಿಮೆ 2 ಲಕ್ಷದವರೆಗೆ ಸೌಲಭ್ಯವಿದೆ ಎಂದರು. ವಿಮೆಯನ್ನು ಮಾಡಿಸಲು ಆಧಾರ್ ಕಾರ್ಡ್, ವೃತ್ತಿ ನಿರ್ವಹಿಸುತ್ತಿರುವ ಸಂಸ್ಥೆಗಳು ವಿತರಿಸಿದ ಗುರುತಿನ ಚೀಟಿ ಅಥವಾ ವೇತನ ಚೀಟಿ, ಇ–ಶ್ರಮ್ ನೋಂದಣಿ ಮಾಡಿಸಿದ್ದಲ್ಲಿ ಇ–ಶ್ರಮ್ ನೋಂದಣಿ ಸಂಖ್ಯೆ ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಪ್ರಧಾನ ಕಾರ್ಯದರ್ಶಿ ನಾಗರಾಮ, ಖಜಾಂಚಿ ಮಂಜುಕೋಟೆ, ನಿರ್ದೇಶಕರುಗಳಾದ ಪುಟ್ಟರಾಜು, ಹಂಪಾಪುರ ನಾಗೇಶ್, ಜಿ. ರವಿಕುಮಾರ್, ರವಿಕುಮಾರ್ ಆರಾಧ್ಯ, ರಂಗರಾಜು, ಸದಸ್ಯರುಗಳಾದ ಬಸವರಾಜು, ನಿಂಗಣ್ಣ ಕೋಟೆ, ಪುರುಷೋತ್ತಮ್, ವಾಸುಕಿ ನಾಗೇಶ್, ಶ್ರೀನಿಧಿ, ಸುರೇಶ್, ಕನ್ನಡ ಪ್ರಮೋದ್, ಚಂದ್ರು, ಪೇಂಟ್ ನಾಗರಾಜು, ಸೇರಿದಂತೆ ಇನ್ನಿತರರು ಹಾಜರಿದ್ದರು.

ಬಿಜೆಪಿಯಿಂದ ಶ್ರೀ ಮೂಲಸ್ಥಾನೇಶ್ವರ ದೇವಾಲಯದ ಸುತ್ತ ಸ್ವಚ್ಛತಾ ಕಾರ್ಯ


ತಿ.ನರಸೀಪುರ ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀ ಮೂಲಸ್ಥಾನೇಶ್ವರ ದೇವಾಲಯದ ಸುತ್ತ ಬಿಜೆಪಿ ವತಿಯಿಂದ ಸ್ವಚ್ಛತೆಗೊಳಿಸಲಾಯಿತು.

ತಿನರಸೀಪುರ, ಜ.14– ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀ ಮೂಲಸ್ಥಾನೇಶ್ವರ ದೇವಾಲಯದ ಸುತ್ತ ಸ್ವಚ್ಛತೆಗೊಳಿಸಿ ಕಂಗೊಳಿಸುವಂತೆ ಬಿಜೆಪಿ ಮುಖಂಡರು ಮಾಡಿದ್ದಾರೆ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆಲಗೂಡು ಎಂ.ವೆಂಕಟರಮಶೆಟ್ಟಿ ಅವರ ನೇತೃತ್ವದಲ್ಲಿ ಇಂದು ಬೆಳಗ್ಗೆಯಿಂದ ಮೂಲಸ್ಥಾನೇಶ್ವರ ದೇವಾಲಯದ ಸುತ್ತಲು ಸ್ವಚ್ಛತೆ ಕಾರ್ಯ ನಡೆಸಲಾಯಿತು. ದೇವಸ್ಥಾನದ ಸುತ್ತ ಸ್ವಚ್ಛತೆ ಇಲ್ಲದೆ ಕಸಕಡ್ಡಿ ಗಬ್ಬೆದ್ದು ನಾರುತಿತ್ತು. ಪ್ರಧಾನಿ ನರೇಂದ್ರ ಮೋದಿ ಹಾಗೂ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಯಾವುದಾದರೂ ಒಂದು ದೇವಾಲಯ ಸ್ವಚ್ಛಗೊಳಿಸಿ ಎಂದು ಆದೇಶ ಮಾಡಲಾಗಿತ್ತು. ಅದರಂತೆ ಪಟ್ಟಣದ ಬಿಜೆಪಿ ಮುಖಂಡರು ಇತಿಹಾಸ ಪ್ರಸಿದ್ಧ ಮೂಲಸ್ಥಾನೇಶ್ವರ ದೇವಾಲಯವನ್ನು ಸ್ವಚ್ಛಗೊಳಿಸುವ ಮೂಲಕ ಭಕ್ತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

ಪುರಸಭಾ ಸದಸ್ಯ ಎಸ್.ಕೆ ಕಿರಣ, ಯುವ ಸೇನೆ ಅಧ್ಯಕ್ಷ ಹೇಳವರಹುಂಡಿ ಮಹೇಶ, ಗ್ರಾಪಂ ಸದಸ್ಯ ಕಿರಗಸೂರು ಮಹಾದೇವಸ್ವಾಮಿ ತಿರುಮಕೂಡಲು ದೀಪು ಮಣಿಕಂಠ, ವಿಜಯ್‌ಕುಮಾರ್, ಅಡುಗೆ ಪ್ರಭು, ಆಲಗೂಡು ಕೃಷ್ಣ ಮಲ್ಲೇಶ, ಭುವನ, ಹೆಳವರಹುಂಡಿ ನಂದಕುಮಾರ, ಗ್ಯಾಸ್ ನಂದೀಶ ಮುಂತಾದವರು ಉಪಸ್ಥಿತರಿದ್ದರು

ತಿ.ನರಸೀಪುರದ ಬಳಿ ಕಾರು ಡಿಕ್ಕಿ; ಯುವತಿ ಸಾವು



ತಿ.ನರಸೀಪುರ, ಜ.14 – ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ನಡೆದುಕೊಂಡು ಹೋಗುತ್ತಿದ್ದ ಯುವತಿಯೊಬ್ಬಳು ಮೃತಪಟ್ಟು ವ್ಯಕ್ತಿಯೊಬ್ಬರು ಗಾಯಗೊಂಡಿರುವ ಘಟನೆ ಪಟ್ಟಣದ ಕೊಳ್ಳೇಗಾಲ–ಮೈಸೂರು ಹೆದ್ದಾರಿಯ ಎಸ್‌ಎಂಆರ್ ಪೆಟ್ರೋಲ್ ಬಂಕ್ ಬಳಿ ಭಾನುವಾರ ಬೆಳಿಗ್ಗೆ ಸಂಭವಿಸಿದೆ.

ಪಟ್ಟಣ ಪುರಸಭೆ ವ್ಯಾಪ್ತಿಯ ಆಲಗೂಡು ಗ್ರಾಮದ ರಾಜೇಶ್ ಎಂಬುವರ ಪುತ್ರಿ ಆರ್.ಜಯಂತಿ(18) ಎಂಬಾಕೆ ಅಪಘಾತದಲ್ಲಿ ಸ್ಥಳದಲ್ಲೇ ಮೃತಪಟ್ಟಿದ್ದು, ಅದೇ ಗ್ರಾಮದ ಜಯರಾಮ(48) ಗಂಭೀರವಾಗಿ ಗಾಯಗೊಂಡಿದ್ದಾರೆ. ಪಟ್ಟಣದ ಗೌರಿಶಂಕರ್ ಟೆಕ್ಸ್‌ಟೈಲ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಜಯಂತಿ ಹಾಗೂ ಕೂಲಿ ಕಾರ್ಮಿಕ ಜಯರಾಮ ಎಂಬುವರು ಇಂದು ಬೆಳಿಗ್ಗೆ ಕಾರ್ಯ ನಿಮಿತ್ತ ನರಸೀಪುರಕ್ಕೆ ಬಂದು ರಸ್ತೆ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಕೊಳ್ಳೇಗಾಲ ಕಡೆಯಿಂದ ಅತಿ ವೇಗವಾಗಿ ಬಂದ ಕಾರು(ಕೆ.ಎ.05/ಎಂ.ಎನ್ 7097) ಡಿಕ್ಕಿ ಹೊಡೆಯಿತು ಎನ್ನಲಾಗಿದೆ. ಡಿಕ್ಕಿಯ ರಭಸಕ್ಕೆ ನೆಲಕ್ಕೆ ಬಿದ್ದ ಜಯಂತಿ ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟರೆ, ಜಯರಾಮ ತೀವ್ರವಾಗಿ ಗಾಯಗೊಂಡಿದ್ದು, ಕೂಡಲೇ ಅವರನ್ನು ಪ್ಯಾಸೆಂಜರ್ ಆಟೋದಲ್ಲಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಎಎಸ್‌ಐ ಭಾನುಪ್ರಕಾಶ್ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಚುಂಚನಕಟ್ಟೆ ಶ್ರೀರಾಮ ಮಂದಿರದಲ್ಲಿ ವೈಭವದ ಸೀತಾ ಕಲ್ಯಾಣ

ಸಾವಿರಾರು ಭಕ್ತರು ಭಾಗಿ, ಅದ್ಭುತವಾಗಿ ಸಿಂಗಾರಗೊಂಡಿದ್ದ ದೇವಾಲಯ

ಚುಂಚನಕಟ್ಟೆ, ಜ.14– ಸಿಂಗಾರಗೊಂಡ ಪಲ್ಲಕ್ಕಿಯಲ್ಲಿ ವರನ ಅದ್ಧೂರಿ ಮೆರವಣಿಗೆ. ಕಾಶಿ ಯಾತ್ರೆಯಲ್ಲಿ ಮಿಂದೆದ್ದ ಕೋದಂಡ, ಮಂತ್ರಘೋಷದ ನಡುವೆ ಅದ್ದೂರಿ ಮಂಟಪಕ್ಕೆ ಬಂದ ವಧು–ವರರು... ಇಬ್ಬರ ಕಡೆಯಿಂದಲೂ ಬಂದಿರುವ ಅಪಾರ ಜನಸ್ತೋಮ.. ವಧುವಿಗೆ ತಾಳಿ ಹಾಕಿದಾಗ ಚಪ್ಪಾಳೆಯ ಜಯಘೋಷ... ಅದ್ದೂರಿ ಕಲ್ಯಾಣೋತ್ಸವ ಕಂಡು ಪುಳಕಿತರಾದ ಭಕ್ತಾದಿಗಳು... ಮದುವೆಗೆ ಸಾಕ್ಷಿಯಾದ ಶಾಸಕ–ದಂಡಾಧಿಕಾರಿ–ವೈದ್ಯ ಯಾವ ಮದುವೆ, ಇಷ್ಟೊಂದು ಅದ್ದೂರಿ ಮದುವೆ ಇದು ಎಲ್ಲಿ ನಡೆಯಿತು ಎಂದು ಅಚ್ಚರಿ ಪಡಬೇಡಿ. ಇದು ಚುಂಚನಕಟ್ಟೆಯಲ್ಲಿ ಜ.16 ರಿಂದ ಮಂಗಳವಾರ ನಡೆಯುವ ಇತಿಹಾಸ ಪ್ರಸಿದ್ಧ ಶ್ರೀರಾಮದೇವರ ಬ್ರಹ್ಮ ರಥೋತ್ಸವದ ಅಂಗವಾಗಿ ಶನಿವಾರ ರಾತ್ರಿ ನಡೆದ ಸೀತಾ ಕಲ್ಯಾಣ ಕಾರ್ಯಕ್ರಮದಲ್ಲಿ ಕಂಡು ಬಂದ ದೃಶ್ಯಗಳಿವು

ರಾತ್ರಿ 7.30 ರಿಂದಲೇ ಆರಂಭಗೊಂಡ ಮದುವೆ ಕಾರ್ಯಕ್ರಮಗಳು ನಿಜ ಮದುವೆಗಳು ನಡೆಯುವಂತೆ ರಾಮದೇವರನ್ನು ಪಲ್ಲಕ್ಕಿಯಲ್ಲಿ ಕೂರಿಸಿ ದೇವಾಲಯದ ಸುತ್ತಾ ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆ ಮೂಲಕ ಕಾಶಿಯಾತ್ರೆ ಮಾಡಿಸಿ ಕರೆತರಲಾಯಿತು

ನಂತರ ಮನೆದುಂಬಿಸಿಕೊಳ್ಳುವ ಶಾಸ್ತ್ರವನ್ನು ಶಾಸಕ ಡಿ.ರವಿಶಂಕರ್, ಅವರ ಪತ್ನಿ ಸುನಿತಾ ಮತ್ತು ತಹಸೀಲ್ದಾರ್ ಪೂರ್ಣಿಮಾ, ಪತಿ ರಮೇಶ್ ಹಾಗೂ ಕುಪ್ಪೆ ಗ್ರಾಮದವರಾದ ದಾವಣಗೆರೆಯಲ್ಲಿ ನೇತ್ರತಜ್ಞರಾಗಿರುವ ಡಾ.ಶ್ರೀನಿವಾಸಮೂರ್ತಿ ಅವರ ಕುಟುಂಬವರ್ಗ ನೆರವೇರಿಸಿತು.

ದೇವಾಲಯದ ಪ್ರಾಂಗಣದಲ್ಲಿ ಹಾಕಲಾಗಿದ್ದ ವಿದ್ಯುತ್ ಮತ್ತು ದೀಪಾಲಂಕಾರಗಳಿಂದ ಕಂಗೊಳಿಸುತ್ತಿದ್ದ ಮದುವೆ ಮಂಟಪಕ್ಕೆ ಕರೆತಂದು ವಿಧಿವಿಧಾನಗಳನ್ನು ಮಂತ್ರಾಕ್ಷತೆಯ ಮೂಲಕ ಪ್ರಧಾನ ಆಗಮಿಕರಾದ ವಿಜಯ ಕುಮಾರ್ ತಮ್ಮ ತಂಡದೊಂದಿಗೆ ಮಂತ್ರಪಠಣಗಳಿಂದ ಕಲ್ಯಾಣೋತ್ಸವಕ್ಕೆ ಚಾಲನೆ ನೀಡಿದರು.


ಸೀತಾ ಕಲ್ಯಾಣ ಕಾರ್ಯಕ್ರಮ ವೈಭವದಿಂದ ನಡೆಯಿತು.

ಪ್ರಸಾದಕ್ಕಾಗಿ ಪರದಾಟ

ಚುಂಚನಕಟ್ಟೆಯಲ್ಲಿ ಶನಿವಾರ ರಾತ್ರಿ ನಡೆದ ಸೀತಾ ಕಲ್ಯಾಣಕ್ಕೆ ಆಗಮಿಸಿದ್ದ ಭಕ್ತಾದಿಗಳಿಗೆ ಸೂಕ್ತ ಪ್ರಸಾದ ವ್ಯವಸ್ಥೆ ಮಾಡದೇ ಕೆಲವರಿಗೆ ಪ್ರಸಾದ ಸಿಕ್ಕರೆ ಇನ್ನು ಕೆಲವರಿಗೆ ಪ್ರಸಾದ ಸಿಗದೆ ಭಕ್ತಾದಿಗಳು ಪರದಾಡುವಂತೆ ಆಯಿತು. ದೇವಾಯಲಕ್ಕೆ ವಾರ್ಷಿಕವಾಗಿ ಭಕ್ತಾದಿಗಳಿಂದಲೇ ಲಕ್ಷಾಂತರ ರೂ. ಆದಾಯ ಬರುತ್ತಿದ್ದರು ಸಹ ಪ್ರಸಾದ ವ್ಯವಸ್ಥೆ ಕಲ್ಪಿಸಲು ಹಿಂದೆ ಬಿದ್ದ ದೇವಾಲಯದ ಆಡಳಿತ ಮಂಡಳಿಯ ವಿರುದ್ಧ ಭಕ್ತಾದಿಗಳು ಆಕ್ರೋಶ ವ್ಯಕ್ತಪಡಿಸಿ ತೆರಳಿದರು.

ಈ ಸಂದರ್ಭದಲ್ಲಿ ಹಿರಿಯ ಕಾಂಗ್ರೆಸ್ ಮುಖಂಡ ದೊಡ್ಡಸ್ವಾಮೇಗೌಡ, ಪತ್ನಿ ವನಜಾಕ್ಷಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯ್ ಶಂಕರ್, ಜೆಡಿಎಸ್ ಮುಖಂಡರಾದ ಹಳಿಯೂರು ಮಧುಚಂದ್ರ, ಸಿ.ಬಿ.ಲೋಕೇಶ್, ಕುಪ್ಪೆ ಗ್ರಾ.ಪಂ ಮಾಜಿ ಅಧ್ಯಕ್ಷ ಮಂಜುನಾಥ್, ಮಾಜಿ ಸದಸ್ಯ ಡಿ.ಎಸ್.ಕುಮಾರ್, ಮಾಜಿ ತಾಪಂ ಸದಸ್ಯರಾದ ಚಂದ್ರಶೇಖರ್, ಸಣ್ಣಪ್ಪ ಯುವ ಕಾಂಗ್ರೆಸ್ ಅಧ್ಯಕ್ಷ ಸಯ್ಯದ್, ಮುಖಂಡ ಡೈರಿ ಮಾದು, ಹಳಿಯೂರು ಪ್ರಭಾಕರ್, ಎಚ್.ಜಿ.ರಮೇಶ್, ಚಿಕ್ಕೊಪ್ಪಲು ಗಿರೀಶ್, ಸಾಲಿಗ್ರಾಮ ತಾಲೂಕು ಕಚೇರಿ ಶಿರಸ್ತೇದಾರ್ ಮೇಲೂರು ಶಿವಕುಮಾರ್, ಉಪ ತಹಸೀಲ್ದಾರ್ ಕೆ.ಜೆ ಶರತ್‌ಕುಮಾರ್, ಆರ್‌ಐ ಚಿದಾನಂದ, ದೇವಾಲಯದ ಸಿಇಒ ರಘು, ಪಾರುಪತ್ತೆದಾರರಾದ ಪವನ್, ಯತಿರಾಜ್, ದೇವಾಲಯದ ಪಾರಿಚಾರಕ ವಾಸುದೇವನ್, ನಾರಾಯಣಯ್ಯಂಗಾರ್ ಇದ್ದರು. ಮುಂಜಾಗ್ರತಾ ಕ್ರಮವಾಗಿ ಸಾಲಿಗ್ರಾಮ ಮತ್ತು ಚುಂಚನಕಟ್ಟೆ ಠಾಣಾ ಸಿಬ್ಬಂದಿಗಳು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಸಫಿ ಉಲ್ಲಾ ಬೇಗ್ ನಿಧನ



ಹುಣಸೂರು, ಜ.14– ಹುಣಸೂರು ನಗರದ ಗೋಕುಲ ಬಡಾವಣೆಯ ವಾಸಿ ಹಾಗೂ ದಿಲ್ಲಿ ದರ್ಬಾರ್ ಹೋಟೆಲ್ ಮಾಲಿಕ ಸಫಿ ಉಲ್ಲಾ ಬೇಗ್(72 ವರ್ಷ) ಇಂದು ಬೆಳಗಿನ ಜಾವ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ ಮೃತರ ಅಂತ್ಯಕ್ರಿಯೆ ನಗರದ ಸಬ್ಬಿರ್ ನಗರದ ಖಬರ್‌ಸ್ಥಾನ್‌ನಲ್ಲಿ ನಡೆಯಿತು.

ಜೆಡಿಎಸ್ ಮುಖಂಡ ಮುರುಗೇಶ್



ಹುಣಸೂರು.ಜ.14– ಹುಣಸೂರು ತಾಲೂಕು ಜೆಡಿಎಸ್ ಮುಖಂಡ ಹಾಗೂ ಕಟ್ಟೆಮಳಲವಾಡಿ ವಾಸಿ ಮುರುಗೇಶ್(63) ನಿನ್ನೆ ರಾತ್ರಿ ಮೈಸೂರಿನ ಕೆ.ಅರ್.ಅಸ್ಪತ್ರೆಯಲ್ಲಿ ನಿಧನರಾದರು.

ಉಸಿರಾಟ ತೊಂದರೆಯಿಂದ ಮೈಸೂರಿನ ಕೆ.ಅರ್. ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಅವರು ನಿನ್ನೆ ರಾತ್ರಿ ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ ಮೃತರ ಅಂತ್ಯಕ್ರಿಯೆ ಭಾನುವಾರ ಸಂಜೆ ನಡೆಸಲಾಯಿತು.

ಮಾಲೆ ಮೇಯರ್ ಚುನಾವಣೆಯಲ್ಲಿ ಭಾರತ ಪರವಾಗಿರುವ ಪಕ್ಷಕ್ಕೆ ಭರ್ಜರಿ ಗೆಲುವು

ಮಾಲೆ: ರಾಜಧಾನಿ ಮಾಲೆ ಮೇಯರ್ ಚುನಾವಣೆಯಲ್ಲಿ ಭಾರತದ ಪರವಾಗಿರುವ ಅಲ್ಲಿನ ವಿರೋಧ ಪಕ್ಷ ಮಾಲ್ಡೀವಿಯನ್ ಡೆಮಾಕ್ರಟಿಕ್ ಪಾರ್ಟಿ (ಎಂಡಿಪಿ) ಭರ್ಜರಿ ಗೆಲುವು ಸಾಧಿಸಿದೆ. ಎಂಡಿಪಿ ಅಭ್ಯರ್ಥಿ ಆ್ಯಡಮ್ ಅಜೀಮ್ ಅವರು ಮಾಲೆಯ ಹೊಸ ಮೇಯರ್ ಆಗಿ ಆಯ್ಕೆಯಾಗಿದ್ದಾರೆ. ಕಳೆದ ವರ್ಷ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಲು ಮುಯಿಝು ತಮ್ಮ ಮೇಯರ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಅಜೀಮ್ ದೊಡ್ಡ ಅಂತರದಿಂದ ಗೆಲುವು ಸಾಧಿಸಿದ್ದಾರೆ ಎಂದು ಮಾಲ್ಡೀವ್ಸ್ ಮಾಧ್ಯಮಗಳು ಎಂದು ವರದಿ ಮಾಡಿವೆ. ಭಾರತದ ಪರವಾಗಿ ಒಲವು ಹೊಂದಿರುವ ದೇಶದ ಮಾಜಿ ಅಧ್ಯಕ್ಷ ಮೊಹಮ್ಮದ್ ಸೋಲಿಹ್ ಎಂಡಿಪಿಯ ಮುಖ್ಯಸ್ಥರಾಗಿದ್ದಾರೆ. ಅಧ್ಯಕ್ಷೀಯ ಚುನಾವಣೆಯಲ್ಲಿ ಚೀನಾ ಪರವಾಗಿರುವ ಮುಯಿಝು ವಿರುದ್ಧ ಮೊಹಮ್ಮದ್ ಸೋಲಿಹ್ ಸೋತಿದ್ದರು. ಪ್ರಧಾನಿ ಮೋದಿ ವಿರುದ್ಧ ಮುಯಿಝು ಸರ್ಕಾರದ ಮೂವರು ಸಚಿವರು ಸಾಮಾಜಿಕ ಮಾಧ್ಯಮಗಳಲ್ಲಿ ಅವಹೇಳನಕಾರಿ ಹೇಳಿಕೆಗಳನ್ನು ಪೋಸ್ಟ್ ಮಾಡಿದ್ದರು. ಇದರಿಂದ ಭಾರತ ಮತ್ತು ಮಾಲ್ಡೀವ್ಸ್ ಮಧ್ಯೆ ತೀವ್ರ ರಾಜತಾಂತ್ರಿಕ ಬಿಕ್ಕಟ್ಟು ಉದ್ಭವಿಸಿತ್ತು. ಈ ವಿವಾದದ ಬೆನ್ನಲ್ಲೇ ನಡೆದಿರುವ ಪ್ರಮುಖ ಚುನಾವಣೆಯಲ್ಲಿ ಚೀನಾ ಪರ ಒಲವು ಹೊಂದಿರುವ ಅಧ್ಯಕ್ಷ ಮುಯಿಝು ಅವರ ಪಕ್ಷಕ್ಕೆ ಹಿನ್ನಡೆಯಾಗಿರುವುದು ಗಮನಾರ್ಹವಾಗಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ. ಬರ್ನಾರ್ಡ್ ಆಲ್‌ಫ್ರೆಡ್ ವಾಸ್ ರವರ ಮಕ್ಕಳಾದ 1] ಶ್ರೀಮತಿ. ಯಮ್ಮ ಡೋಶೆತಿಯ ವಾಸ್ ಮತ್ತು 2] ಶ್ರೀ. ಪರ್ಸಿವಾಸ್ ರವರುಗಳು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿನ ಮಾಲೀಕರಾಗಿದ್ದು, ಸದರಿ ಸ್ವತ್ತುಗಳನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ, ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 ಏಳು ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿಯ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

<u>ಷೆಡ್ಯೂಲ್ ಸ್ವತ್ತಿನ ವಿವರ</u>

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದಲ್ಲಿರುವ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುವ ಸರ್ವೆ ನಂ. 332 & 335 ರಲ್ಲಿ ರೂಪಿಸಿರುವ ಪ್ರಸ್ತುತ ಖಾಲಿ ನಿವೇಶನಗಳ ಸಂಖ್ಯೆ, ವಿಸ್ತೀರ್ಣ, ಚಕ್ಕುಬಂದಿ ಮತ್ತು ಮಾಲೀಕರ ವಿವರಗಳು ಈ ಕೆಳಕಂಡಂತಿದೆ:

ವಿವರಗಳು		ಚಕ್ಕುಬಂದಿ				ಮಾಲೀಕರ ಹೆಸರು ಮತ್ತು ಅನ್ಯಕ್ರಾಂತ ಆದೇಶ ವಿವರ
		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
ಈ ಹಿಂದಿನ ವಿವರ	ಸರ್ವೆ ನಂ. 332 ವಿಸ್ತೀರ್ಣ-14ಗು	ರಸ್ತೆ	ರಸ್ತೆ	ಸರ್ವೆ ನಂ. 332 ರ ಉಳಿಕೆ	ಡೈನಾ ತೆರೇಸ ವಾಸ್	ಯಮ್ಮ ಡೋಶೆತಿಯ ವಾಸ್ ALN (1) CR.04/2009-10 Dated 14-07-2009
ಹಾಲೀ / ಪ್ರಸ್ತುತ ವಿವರ	ನಿವೇಶನ ಸಂಖ್ಯೆ. 02	ರಸ್ತೆ	ರಸ್ತೆ	ನಿವೇಶನ ಸಂಖ್ಯೆ. 03	ನಿವೇಶನ ಸಂಖ್ಯೆ. 01	
ಈ ಹಿಂದಿನ ವಿವರ	ಸರ್ವೆ ನಂ. 335 ವಿಸ್ತೀರ್ಣ-14ಗು	ಸರ್ವೆ ನಂ. 334	ರಸ್ತೆ	ಸರ್ವೆ ನಂ. 335 ರ ಉಳಿಕೆ	ಸರ್ವೆ ನಂ. 335 ರ ಉಳಿಕೆ	ಪರ್ಸಿವಾಸ್ ALN (1) CR.09/2009-10 Dated 14-07-2009
ಹಾಲೀ / ಪ್ರಸ್ತುತ ವಿವರ	ನಿವೇಶನ ಸಂಖ್ಯೆ. 24	ನಿವೇಶನ ಸಂಖ್ಯೆ. 26	ರಸ್ತೆ	ನಿವೇಶನ ಸಂಖ್ಯೆ. 25	ನಿವೇಶನ ಸಂಖ್ಯೆ. 17 & 19	

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್, ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಸಮೀಪ, ಮೈಸೂರು. ಮೊ:9844640641. email: sldlawfirm2021@gmail.com

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು